
# ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2021

ಬೆಲೆ ರೂ. 1






## ಅಗಲಿದ ಅಪ್ಪುವಿಗೆ

## ದೆಹಲಿ ಕನ್ನಡಿಗರ

## ನುಡಿನಮನದ ವಿದಾಯ

# ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಲಕ್ಷ ಕಂಠಗಳ ಗೀತ ಗಾಯನ



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕರ್ನಾಟಕ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಕನ್ನಡಕ್ಕಾಗಿ ನಾವು ಅಭಿಯಾನದ ಅಂಗವಾಗಿ ಹಮ್ಮಿಕೊಂಡಿದ್ದ ಲಕ್ಷ ಕಂಠಗಳ ಗಾಯನವನ್ನು 28.10.2021ರಂದು ಬೆಳಿಗ್ಗೆ 11ಗಂಟೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ದೆಹಲಿ ಕನ್ನಡಿಗರು, ಕಲಾವಿದರು ಹಾಗೂ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ಪಾಲ್ಗೊಂಡಿದ್ದರು.

ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ನೇತ್ರಾವತಿ ಕುಮಾರ್, ಶ್ರೀ ಎಸ್. ಕುಮಾರ್ ಹಾಗೂ ತಂಡದವರು ಈ ಗೀತ ಗಾಯನದಲ್ಲಿ ಪಾಲ್ಗೊಂಡಿದ್ದರು.

ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಭಾಗವಹಿಸಿದ್ದರು.

## ದೆಹಲಿ ಕರ್ನಾಟಕ ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆ



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 01.11.2021ರಂದು ಆಚರಿಸಿದ 66ನೇ ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣವನ್ನು ಮಾನ್ಯ ಸಂಸದರಾದ ಡಾ. ಉಮೇಶ್ ಜಿ. ಜಾಧವ್ ಅವರು ನೆರವೇರಿಸಿದರು. ಆನಂತರ ಕನ್ನಡ ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿ, ರಾಜ್ಯೋತ್ಸವದ ಮಹತ್ವದ ಬಗ್ಗೆ ಮಾತನಾಡಿ ಸಮಸ್ತ ದೆಹಲಿ ಕನ್ನಡಿಗರಿಗೆ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಿದರು.

ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಮಾತನಾಡಿ ಮುಂದಿನ ವರ್ಷ ಸಂಘ 75ನೇ ವರ್ಷಕ್ಕೆ ಕಾಲಿಡಲಿದ್ದು ಈ ಸಂದರ್ಭದಲ್ಲಿ 'ಅಮೃತ ಮಹೋತ್ಸವ' ಆಚರಣೆಯನ್ನು ಹಮ್ಮಿಕೊಳ್ಳಬೇಕೆಂಬ ಮಹದಾಸೆ ನಮ್ಮದಾಗಿದೆ. ಆಗ ಎಲ್ಲ ಜನಪ್ರತಿನಿಧಿಗಳು, ಮಂತ್ರಿಗಳು, ಪ್ರಧಾನ ಮಂತ್ರಿಗಳು, ರಾಷ್ಟ್ರಪತಿಗಳು ಎಲ್ಲರ ಸಮ್ಮುಖದಲ್ಲಿ ಅದ್ಭುತವಾದಂತಹ ಕಾರ್ಯಕ್ರಮವನ್ನು ಆಯೋಜಿಸಲು ನಿಮ್ಮೆಲ್ಲರ ಸಹಕಾರ ಇರಲಿ ಎಂದು ಕೋರಿದರು.

ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ಮಾತನಾಡಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ನವೆಂಬರ್ ತಿಂಗಳ ಪ್ರತೀ ಶನಿವಾರ ಮತ್ತು ಭಾನುವಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್, ಖಜಾಂಚಿ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತಾ ಮುರಗೋಡ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಪ್ರಭಾಕರ ಮಡ್ಡಿತೋಟ್, ಶಿವಪ್ಪ ಎಂ., ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಮಾಲಿನಿ ಪ್ರಹ್ಲಾದ್, ಕೆ.ಎಸ್. ಮೂರ್ತಿ, ಶ್ರೀಮತಿ ಅಶ್ವಿನಿ ಬಿ.ಎಸ್., ನವೀನ್ ಕುಮಾರ್ ವಿ. ಚಂದ್ರಶೇಖರ ಎನ್.ಪಿ., ಮೊದಲಾದವರು ಭಾಗವಹಿಸಿದರು.



# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 । ಸಂಚಿಕೆ 1–2

ಅಕ್ಟೋಬರ್–ನವೆಂಬರ್ 2021



**ಪ್ರಧಾನ ಸಂಪಾದಕ**

ಚಂದ್ರಶೇಖರ ಎನ್.ಪಿ.

**ಸಂಪಾದಕ ಮಂಡಳಿ ಸದಸ್ಯರು**

ಅಮರೇಶ ದೊಡ್ಡಮನಿ

ಯಲ್ಲಾಲಿಂಗ ಕೊಪ್ಪದ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**

ಸಿ.ಎಂ. ನಾಗರಾಜ

**ಉಪಾಧ್ಯಕ್ಷರು**

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

**ಪ್ರಧಾನ ಕಾರ್ಯದರ್ಶಿ**

ಆರ್. ರೇಣುಕುಮಾರ್

**ಕೋಶಾಧಿಕಾರಿ**

ರಾಧಾಕೃಷ್ಣ

**ಜಂಟಿ ಕಾರ್ಯದರ್ಶಿಗಳು**

ಜಿ. ನಾರಾಯಣ

ಸುಮಿತಾ ಮುರಗೋಡ

**ಸಮಿತಿ ಸದಸ್ಯರು**

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜೆ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳ

ಡಿ.ವಿ.ಎಸ್. ಮೂರ್ತಿ

ಈಶ್ವರ ಮಡಿವಾಳ




## ಸಂಪಾದಕೀಯ

# ದೇಶ-ಭಾಷಾಭಿಮಾನಗಳೆರಡೂ ನಮ್ಮ ಉಸಿರಾಗಲಿ

**ಬಂಧುಗಳೇ, ನಿಮಗೆಲ್ಲರಿಗೂ ಕರ್ನಾಟಕ ರಾಜ್ಯೋತ್ಸವ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು.** ಕಳೆದ ಶತಮಾನದಲ್ಲಿ ರಾಷ್ಟ್ರೀಯ ಚಳುವಳಿಯ ಫಲಶ್ರುತಿಯಾದ ಸ್ವತಂತ್ರ ಭಾರತದ ಉದಯ ಮತ್ತು ಪ್ರಾಂತೀಯ ಚಳವಳಿ ಸಾಧ್ಯವಾಗಿಸಿದ ಭಾಷಾವಾರು ರಾಜ್ಯಗಳ ಉದಯ ಜಗತ್ತಿನ ಗಮನವನ್ನು ಭಾರತದತ್ತ ಸೆಳೆದ ದೊಡ್ಡ ಘಟನೆಗಳು. ಇದರ ಹಿಂದೆ ಸಾವಿರಾರು ದೇಶಪ್ರೇಮಿಗಳ ತ್ಯಾಗ ಬಲಿದಾನಗಳಿದ್ದು ಅಂತಹವರಲ್ಲಿ ಮುಂಚೂಣಿಯಲ್ಲಿದ್ದ. ಮಹಾನ್ ನಾಯಕರ ಜನ್ಮ ದಿನಾಚರಣೆಗೆ ಅಕ್ಟೋಬರ್ ತಿಂಗಳು ಸಾಕ್ಷಿಯಾಗಿದೆ. ರಾಷ್ಟ್ರೀಯ ಅಸ್ಮಿತೆಯ ಚಳುವಳಿಯ ಕರ್ಣಧಾರತ್ವವನ್ನು ವಹಿಸಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ, ಬದುಕಿನುದ್ದಕ್ಕೂ ಸರಳತೆ ಸಜ್ಜನಿಕೆಗಳನ್ನೇ ಮೈವೆತ್ತಿದ್ದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜಯಂತಿಯನ್ನು ಅಕ್ಟೋಬರ್ 2 ರಂದು ಹಾಗೂ ರಾಷ್ಟ್ರೀಯ ಏಕತಾ ದಿವಸ್ ಹೆಸರಿನಲ್ಲಿ ದೇಶದ ಏಕೀಕರಣ ಕನಸನ್ನು ನನಸಾಗಿಸಿದ ಉಕ್ಕಿನ ಮನುಷ್ಯ, ಸ್ವತಂತ್ರ ಭಾರತದ ಮೊದಲ ಗೃಹ ಮಂತ್ರಿ ಸರ್ದಾರ್ ವಲ್ಲಭ ಭಾಯ್ ಪಟೇಲ್ ಅವರ ಜಯಂತಿಯನ್ನು ಅಕ್ಟೋಬರ್ 31ರಂದು ದೇಶದಾದ್ಯಂತ ಆಚರಿಸಲಾಗಿದೆ, ಇದು ಆಚರಣೆಯಷ್ಟಕ್ಕೆ ನಿಲ್ಲದೆ ಅವರ ಉದಾತ್ತ ಆದರ್ಶಗಳನ್ನು ಅನುಸರಣೆ ಮಾಡಿದರೆ ಅದೇ ನಾವು ಸಲ್ಲಿಸುವ ಗೌರವ ಸಮರ್ಪಣೆ.

ಭಾಷಾವಾರು ಪ್ರಾಂತಗಳ ರಚನೆಯ ಕೂಗು ಮೊದಲಬಾರಿಗೆ 1874 ರಲ್ಲಿ ಬ್ರಿಟೀಷರ ವಸಾಹತುಶಾಹಿ ಆಡಳಿತ ಬಂಗಾಳದಿಂದ ಸಿಲ್ಹೆಟ್ ಜಿಲ್ಲೆಯನ್ನು ವಿಭಜಿಸಿದಾಗಲೇ ಎದ್ದಿತಾದರೂ 1956ರಲ್ಲಿ ಸ್ವತಂತ್ರ ಭಾರತದ ಆಡಳಿತದಲ್ಲಿ ಅದು ಅಂತಿಮವಾಗಿ ಯಶಸ್ಸು ಕಂಡಿತು. ಲೋಕಮಾನ್ಯ ತಿಲಕರು 1898 ರಲ್ಲಿ ರಾಯಲ್ ಕಮೀಷನ್ ಸಮ್ಮುಖದಲ್ಲಿ ಭಾಷಿಕ ಮತ್ತು ವಾಂಶಿಕ ಸಂಬಂಧಗಳನ್ನು ಆಧರಿಸಿ ಪ್ರಾಂತ್ಯಗಳು ರಚನೆಯಾಗಬೇಕೆಂದು ಪ್ರತಿಪಾದಿಸಿದರೂ ಕೂಡ ಬ್ರಿಟೀಷರು ಜನಾಭಿಪ್ರಾಯಕ್ಕೆ ವಿರುದ್ಧವಾಗಿ 16 ಆಗಸ್ಟ್ 1905ರಲ್ಲಿ ಬಂಗಾಳದ ವಿಭಜನೆ ಮಾಡಿದ್ದು ಭಾರತೀಯರಲ್ಲಿ ಸ್ವಾತಂತ್ರ ಹೋರಾಟವನ್ನು ಉದ್ದೀಪಿಸುವುದರ ಜೊತೆಗೆ ಭಾಷಿಕ ಪ್ರಜ್ಞೆಯನ್ನು ಹುಟ್ಟು ಹಾಕಿತು. ಪರಿಣಾಮವಾಗಿ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಘಟನೆಗಳು ಹುಟ್ಟಿಕೊಂಡು ದೇಶಪ್ರೇಮ, ಭಾಷಾಭಿಮಾನಗಳ ಕಿಡಿ ನೂರ್ಮಡಿಗೊಳಿಸಿದವು. ಜನಸಮುದಾಯದ ಏಳಿಗೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರಗತಿಗಾಗಿ ಸ್ಥಳೀಯ ಭಾಷೆಯ ಭದ್ರ ಬುನಾದಿ ಹಾಕಲು. ಪ್ರಾಂತಗಳನ್ನು ರಚಿಸುವಾಗ ಭಾಷೆಯನ್ನು ಆಧರಿಸಬೇಕೆಂಬ ಆಗ್ರಹ ಎಲ್ಲೆಡೆ ಕೇಳತೊಡಗಿತು.

ಕರ್ನಾಟಕದ ಏಕೀಕರಣದ ಮಟ್ಟಿಗೆ ಹೇಳುವುದಾದರೆ 1915ರಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತು ಸಮಗ್ರ ಕರ್ನಾಟಕದ ಪ್ರಾಂತಗಳು ಹಾಗೂ ಸಂಸ್ಥಾನಗಳನ್ನು ಪ್ರತಿನಿಧಿಸುವ ಸದಸ್ಯರನ್ನು ಒಳಗೊಂಡಿತ್ತು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ 1917ರಲ್ಲಿ ಕರ್ನಾಟಕ ಏಕೀಕರಣ ಆಗಬೇಕೆಂಬ ನಿರ್ಣಯ ತಳೆದು ಕಾರ್ಯೋನ್ಮುಖಗೊಂಡಿತ್ತು. ಆಲೂರು ವೆಂಕಟರಾಯರು ತಿಲಕರಿಂದ ಪ್ರಭಾವಿತರಾಗಿ ನಾಡಹಬ್ಬ, ವಿದ್ಯಾರಣ್ಯ ಉತ್ಸವ, ವಿಜಯನಗರ ಉತ್ಸವ, ಬಸವೇಶ್ವರ ಉತ್ಸವ, ಮೊದಲಾದ ಸಾಂಸ್ಕೃತಿಕ ಆಚರಣೆಗಳನ್ನು ಆರಂಭಿಸಿ ಕನ್ನಡತ್ವ ಹಾಗೂ ಕರ್ನಾಟಕತ್ವದ ಭಾವನೆಗಳನ್ನು ಜನಮನದಲ್ಲಿ ಬೆಳೆಸಿದರು. ಜೊತೆಗೆ 1921ರಿಂದ 1935ರ ಅವಧಿಯಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಶಾಸನಸಭೆಗಳಲ್ಲಿ ಹಾಗೂ 1946 ರಲ್ಲಿ ಆರಂಭಗೊಂಡ ಸಂವಿಧಾನ ಕರಡು ರಚನಾ ಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದ ಧೀಮಂತ ನಾಯಕರಾದ ಕೆ.ಸಿ.ರೆಡ್ಡಿ. ಕೆಂಗಲ್ ಹನುಮಂತಯ್ಯ, ಎಸ್.ವಿ. ಕೃಷ್ಣಮೂರ್ತಿ ರಾವ್ (ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿದ್ದರು) ಮೊದಲಾದವರೆಲ್ಲ ಭಾಷಾವಾರು ಪ್ರಾಂತ ರಚನೆಗಾಗಿ ಒತ್ತಾಯಿಸಿದರು. 1946 ರಲ್ಲಿ ದಾವಣಗೆರೆಯಲ್ಲಿ ಅಖಿಲ ಕರ್ನಾಟಕ ಕನ್ವೆನ್ಷನ್‌ನಲ್ಲಿ ಸಂಯುಕ್ತ ಕರ್ನಾಟಕದ ಪ್ರಾಂತ್ಯ ರಚನೆ ಮಾಡಬೇಕೆಂದು ಮೊದಲ ಬಾರಿಗೆ ಸ್ಪಷ್ಟಪಡಿಸಿದರು. ಆದರೆ ಸ್ವಾತಂತ್ರ್ಯನಂತರ ಏಕೀಕರಣದ ನಿರ್ಧಾರ ನಿಧಾನವಾಗತೊಡಗಿದಾಗ ಶ್ರೀ ಎಸ್. ನಿಜಲಿಂಗಪ್ಪ ಅವರು 1948ರಲ್ಲಿ ನಿಯೋಗವೊಂದನ್ನು ಕರೆದುಕೊಂಡು ನವದೆಹಲಿಗೆ ಹೋಗಿ ಮಹಾತ್ಮ ಗಾಂಧಿಯವರನ್ನು ಭೇಟಿ ಮಾಡಿ ಚರ್ಚಿಸಿ ಅವರಿಂದ ಭರವಸೆ ಪಡೆದರು. ಎಲ್ಲೆಡೆ ಚಳುವಳಿ ನಡೆದು ಬೇಡಿಕೆ ಪ್ರಬಲಗೊಳ್ಳುತ್ತಿದ್ದಂತೆ ಸಂವಿಧಾನ ರಚನಾ ಸಮಿತಿ ಅಧ್ಯಕ್ಷರು 1948ರ ಜೂನ್ 17 ರಂದು ಭಾಷಾವಾರು ರಾಜ್ಯ ರಚನೆಗಾಗಿ ಧಾರ್ ಸಮಿತಿ ನೇಮಿಸಿತು, ಅನಂತರ ಅದರ ವರದಿ ಪರಿಶೀಲನೆಗಾಗಿ ಜೆ.ವಿ.ಪಿ. (ನೆಹರೂ–ಪಟೇಲ್–ಪಟ್ಟಾಭಿ ಅವರ ನೇತೃತ್ವದಲ್ಲಿ ತ್ರಿಮೂರ್ತಿ) ಸಮಿತಿ ರಚಿಸಲಾಯಿತು. ಅಂತಿಮವಾಗಿ ಫಜಲ್ ಅಲಿ ಆಯೋಗದ ವರದಿಯನ್ನು ಸಂಸತ್ತಿನಲ್ಲಿ ಅಂಗೀಕರಿಸಿದ ನಂತರ 1956 ನವೆಂಬರ್ 1 ರಂದು ಮೈಸೂರು ರಾಜ್ಯವಾಗಿ ಕರ್ನಾಟಕ ಅಸ್ತಿತ್ವಕ್ಕೆ ಬಂದಿತಲ್ಲದೆ, 1973 ರಲ್ಲಿ ಕರ್ನಾಟಕ ಎಂದು ಹೆಸರಿಡಲಾಯಿತು. ಕರ್ನಾಟಕದ ಹೆಸರಾಗಿದೆಯಾದರೂ ಕನ್ನಡಿಗರಲ್ಲಿ ಕನ್ನಡತ್ವ, ಕನ್ನಡತನಗಳು ಇನ್ನೂ ನಿರೀಕ್ಷಿತ ಮಟ್ಟದಲ್ಲಿ ಗಟ್ಟಿಯಾಗಿ ಪ್ರತಿಧ್ವನಿಸಬೇಕಿದೆ. ಇದುವರೆಗೆ ಸರ್ಕಾರಗಳು ತೆಗೆದುಕೊಂಡಿರುವ ನಿರ್ಣಯಗಳು ಜಾರಿಯಾಗದಿರುವ ಕುರಿತು ಆರೋಗ್ಯಕರ ಚರ್ಚೆಯಾಗಿ ಅನುಷ್ಠಾನ ಯೋಗ್ಯ ನಿರ್ಧಾರಗಳನ್ನು ಕೈಗೊಳ್ಳುವ ಅಗತ್ಯವಿದೆ. ಈ ನಡುವೆ ಸದ್ಯ ಕರ್ನಾಟಕದ ಆಡಳಿತ ಚುಕ್ಕಾಣಿ ಹಿಡಿರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರ ನೇತೃತ್ವದಲ್ಲಿ 'ಮಾತಾಡ್ ಮಾತಾಡ್ ಕನ್ನಡ' ಶೀರ್ಷಿಕೆಯಡಿ 'ಕನ್ನಡಕ್ಕಾಗಿ ನಾವು' ಎಂಬ ಅಭಿಯಾನ ಕಾರ್ಯಕ್ರಮದ ವಿವಿಧ ಸ್ಪರ್ಧೆಗಳನ್ನು ಆಯೋಜನೆ ಮಾಡಿ ಕನ್ನಡ ನಾಡು ನುಡಿಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿರುವುದು ಶ್ಲಾಘನಾರ್ಹ.

1948 ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಹೊರನಾಡ ಕನ್ನಡಿಗರ ಅಸ್ಮಿತೆಯಾಗಿರುವ ದೆಹಲಿ ಕರ್ನಾಟಕ ಸಂಘಕ್ಕೆ ಕಳೆದ ಅಕ್ಟೋಬರ್ ಮೂರರಂದು ಚುನಾವಣೆ ನಡೆದು 2021–2023 ರ ಅವಧಿಗೆ ಹೊಸ ಕಾರ್ಯಕಾರಿ ಸಮಿತಿ ಆಯ್ಕೆಯಾಗಿದ್ದು ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಆಡಳಿತ ಸೂತ್ರವನ್ನು ಹಿಡಿದಿದ್ದು, ಅವರ ಸಮರ್ಥ ನೇತೃತ್ವದಲ್ಲಿ ಕನ್ನಡ ಮತ್ತು ಕರ್ನಾಟಕಗಳ ಬಗ್ಗೆ ಅಪಾರ ಕಾಳಜಿ ಹೊಂದಿರುವ ಯುವ ಪ್ರತಿಭೆಗಳಿಂದ ಕೂಡಿದ ಪ್ರಸ್ತುತ ಕಾರ್ಯಕಾರಿ ಸಮಿತಿ ದೆಹಲಿ ಕರ್ನಾಟಕ ಸಂಘದ ಸರ್ವಾಂಗೀಣ ಅಭ್ಯುದಯಕ್ಕೆ ಶ್ರಮಿಸಲಿ ಎಂಬ ಹೊರನಾಡ ಕನ್ನಡಿಗರ ನಿರೀಕ್ಷೆಯನ್ನು ಸಾಕಾರಗೊಳಿಸುವ ವಿಶ್ವಾಸದೊಂದಿಗೆ ಈಗಾಗಲೇ ಸಂಘ ಕಾರ್ಯೋನ್ಮುಖವಾಗಿದೆ.

ಈ ಬಾರಿ ಕರ್ನಾಟಕದ ರಾಜ್ಯೋತ್ಸವದ ಸಿದ್ಧತೆ ಸಂದರ್ಭದಲ್ಲಿಯೇ ಕನ್ನಡಿಗರನ್ನೆಲ್ಲರ ಹೃದಯವನ್ನು ಹಿಂಡಿದ್ದು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ಮರಣ. ಮಾನವೀಯತೆ, ಮಮಕಾರದ ಪ್ರತೀಕವಾಗಿದ್ದ ಕೋಟಿ ಕೋಟಿ ಮನಸ್ಸುಗಳನ್ನು ಗೆದ್ದ ಕನ್ನಡದ ಅನರ್ಘ್ಯ ರತ್ನ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ದೆಹಲಿ ಕರ್ನಾಟಕ ಸಂಘ ನುಡಿನಮನ ಸಲ್ಲಿಸಿದ ವರದಿಯನ್ನು ಒಳಗೊಂಡ ಅನೇಕ ಮಾಹಿತಿಗಳೊಂದಿಗೆ ಅಭಿಮತವನ್ನು ನಿಮ್ಮ ಕೈಗಿಡುತ್ತಿದ್ದೇವೆ.

**ಕನ್ನಡ ಬಳಸೋಣ ಕನ್ನಡ ಬೆಳೆಸೋಣ ಕನ್ನಡ ಉಳಿಸೋಣ**

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 31 ಸಂಚಿಕೆ 1–2
ಅಕ್ಟೋಬರ್–ನವೆಂಬರ್–2021, ಬೆಲೆ ರೂ. 1

# ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳಿಗೆ ಕನ್ನಡ ರಾಜ್ಯೋತ್ಸವ ಮತ್ತು ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು.

ಬಂಧುಗಳೇ, ಸಾವಿರದೊಂಬೈನೂರ ನಲವತ್ತೆಂಟರಲ್ಲಿ ಪ್ರಾರಂಭವಾದ ದೆಹಲಿ ಕರ್ನಾಟಕ ಸಂಘ ಮತ್ತು ಅನಂತರದ ದಶಕದಲ್ಲಿ ಆರಂಭಗೊಂಡ ದೆಹಲಿ ಕನ್ನಡ ವಿದ್ಯಾಸಂಸ್ಥೆ ಕನ್ನಡದ ಹಲವಾರು ಮಹಾನುಭಾವರ ಪ್ರಯತ್ನದಿಂದ ರಾಷ್ಟ್ರ ರಾಜಧಾನಿಯಲ್ಲಿ ತಲೆ ಎತ್ತಿ ನಿಂತಿವೆ. ಸಂಘವನ್ನು ಕಟ್ಟಲು ದುಡಿದಂತಹ ಮಹನೀಯರುಗಳಲ್ಲಿ ರಾಜ್ಯದ ಮೊಟ್ಟ ಮೊದಲ ಮುಖ್ಯಮಂತ್ರಿಗಳಾದ ಶ್ರೀ ಕೆ.ಸಿ. ರೆಡ್ಡಿಯವರು, ಶ್ರೀ ಕೃಷ್ಣಮೂರ್ತಿ ರಾವ್, ಡಾ. ಸರೋಜಿನಿ ಮಹಿಷಿಯವರೂ ಸೇರಿದಂತೆ ಇನ್ನೂ ಅನೇಕ ದಿಗ್ಗಜರುಗಳ ಪರಿಶ್ರಮದಿಂದ ಇಂದು ದೆಹಲಿ ಕರ್ನಾಟಕ ಸಂಘ ವಿಶ್ವದ ಸಾಂಸ್ಕೃತಿಕ ರಾಯಭಾರಿಯಾಗಿ ಬೆಳೆದು ನಿಂತಿದೆ. ಇಂತಹ ಹಿರಿಮೆ ಗರಿಮೆಗಳನ್ನುಳ್ಳ ಸಂಘಕ್ಕೆ ನಾನು ಅಧ್ಯಕ್ಷನಾಗಿ ಬಂದಿರುವುದು ನನ್ನ ಸೌಭಾಗ್ಯ. ಐದು ಬಾರಿ ಪ್ರಧಾನ ಕಾರ್ಯದರ್ಶಿಯಾಗಿ ಸಂಘಕ್ಕೆ ಸೇವೆ ಸಲ್ಲಿಸಿ ಇಂದು ತಮ್ಮೆಲ್ಲರ ಆಶೀರ್ವಾದದಿಂದ ಅಧ್ಯಕ್ಷನಾಗಿ ಯುವ ಕಾರ್ಯಕಾರಿ ಸಮಿತಿಯ ಜೊತೆ ಸಂಘವನ್ನು ಮುನ್ನಡೆಸಲು ಬಂದಿದ್ದೇವೆ. ದೆಹಲಿ–ಎನ್.ಸಿ.ಆರ್. ಕನ್ನಡಿಗರು ನೀಡಿರುವ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿರ್ವಹಿಸಿ ನೀವು ಇಟ್ಟಿರುವ ನಂಬಿಕೆ ಮತ್ತು ಭರವಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸುತ್ತೇವೆ ಎಂಬ ವಿಶ್ವಾಸ ನನ್ನದಾಗಿದೆ. ದೆಹಲಿ ಕರ್ನಾಟಕ ಸಂಘಕ್ಕೆ ಬರುವ ವರ್ಷ ಅಮೃತ ಮಹೋತ್ಸವ ಮಹೋತ್ಸವದ ಸಂಭ್ರಮದ ವರ್ಷವಾಗಿದೆ. ಈ ಅಮೃತ ಮಹೋತ್ಸವ ವರ್ಷದಲ್ಲಿ ಹೆಚ್ಚು ಹೆಚ್ಚು ಉತ್ತಮ ಕಾರ್ಯಕ್ರಮಗಳು, ಕನ್ನಡದ ಚಟುವಟಿಕೆಗಳನ್ನು ಆಯೋಜನೆ ಮಾಡಬೇಕಾಗಿದೆ. ಕರ್ನಾಟಕ ಸಂಘದ ಎಲ್ಲಾ ಸದಸ್ಯರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಮತ್ತು ಅವರಿಗೆ ಅನುಕೂಲವಾಗುವಂತಹ ಕಾರ್ಯಗಳನ್ನು ಮಾಡಬೇಕಾಗಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗೆಂದು ದೆಹಲಿಗೆ ಬರುವ ಮಕ್ಕಳಿಗೆ ವಸತಿ ನಿಲಯ ಮಾಡಬೇಕಿದೆ. ಇದಕ್ಕೆ ಕರ್ನಾಟಕ ಸರ್ಕಾರ ನಮ್ಮ ಜತೆ ನಿಲ್ಲಬೇಕಿದೆ. ಈಗಾಗಲೇ ಕೆಲವು ಮಂತ್ರಿಗಳ ಜತೆ ಸಂಪರ್ಕದಲ್ಲಿದ್ದೇನೆ. ಅವರು ಆಶ್ವಾಸನೆಯನ್ನು ಸಹ ನೀಡಿದ್ದಾರೆ. ಜೊತೆಗೆ ದೆಹಲಿಯ ಅಕ್ಕಪಕ್ಕದಲ್ಲಿರುವ ಕನ್ನಡಪರ ಸಂಘ ಸಂಸ್ಥೆಗಳು ಹಾಗೂ ಎನ್.ಸಿ.ಆರ್. ನ ಸಂಘ ಸಂಸ್ಥೆಗಳಿಗೆ ದೆಹಲಿ ಕರ್ನಾಟಕ ಸಂಘ ಸಹಾಯ ಹಸ್ತ ಚಾಚಬೇಕಿದೆ. ಇಂತಹ ಸಂದರ್ಭದಲ್ಲಿ ನಿಮ್ಮೆಲ್ಲರ ಸಹಕಾರ ಬೇಕಿದೆ.

ನವೆಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ ಪ್ರತಿ ಶನಿವಾರ, ಭಾನುವಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ. ಈ ಕುರಿತು ಆಮಂತ್ರಣವನ್ನು ತಮಗೆ ತಲುಪಿಸಲಾಗುತ್ತದೆ.

ಬಂಧುಗಳೇ, ಮಾರಕ ರೋಗ ಕೊರೊನ ಸಂದರ್ಭದಲ್ಲಿ ಸಂಕಟದಲ್ಲಿದ್ದ ದೆಹಲಿಯ ಕನ್ನಡಿಗರ ಸೇವೆ ಮಾಡಿದವರೆಲ್ಲರಿಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ವಿಶೇಷವಾಗಿ ಕನ್ನಡಿಗರಿಗೆ ದೆಹಲಿಯ ಆಸ್ಪತ್ರೆಗಳಲ್ಲಿ ಸಲ್ಲಿಸಿದ ಸೇವೆಗಾಗಿ ಡಾ. ಅಕ್ಷಯ್ ಹಾಗೂ ಡಾ. ಗುರುರಾಜ್ ಸಂಗೊಂದಿ ಮಠ್ ಈರ್ವರನ್ನು ವಿಶಿಷ್ಟ ವ್ಯಕ್ತಿಗಳಾಗಿ ಗುರುತಿಸಲಾಗಿದೆ. ಇವರಿಗೆ ದೆಹಲಿ ಕರ್ನಾಟಕ ಸಂಘ ಈ ವರ್ಷದ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನೀಡಲು ನಿರ್ಧರಿಸಿದ್ದು ಇದೇ ನವೆಂಬರ್ ತಿಂಗಳಲ್ಲಿ ಇವರನ್ನು ಪುರಸ್ಕರಿಸಲಾಗುತ್ತದೆ.

ಈ ವರ್ಷ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ 66 ಮಹಾನ್ ವ್ಯಕ್ತಿಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ವಿಶೇಷವಾಗಿ ಈ ಕಾರ್ಯಕ್ರಮವನ್ನು ತುಂಬ ಸೊಗಸಾಗಿ ಮಾಡುತ್ತಿರುವ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ಅವರಿಗೆ ಧನ್ಯವಾದಗಳು. ಹೊರನಾಡು ಕನ್ನಡಿಗರ ಕೋಟಾದಲ್ಲಿ ನಮ್ಮವರೇ ಆದ ಸಂಘದ ಸದಸ್ಯರಾಗಿರುವ ಡಾ. ಎಸ್.ಎಂ. ಕಂಟೀಕರ್‌ರವರು ಈ ಬಾರಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಅವರಿಗೂ ಸಹ ಅಭಿನಂದನೆಗಳು.

ಹೊಸ ಕಾರ್ಯಕಾರಿ ಸಮಿತಿ ಬಂದ ನಂತರ ಮೊಟ್ಟ ಮೊದಲಿಗೆ ಅಕ್ಟೋಬರ್ 31 ರಂದು ದಸರಾ ಮತ್ತು ದೀಪಾವಳಿ ಸಂದರ್ಭದಲ್ಲಿ ಕರ್ನಾಟಕದಿಂದ ನೃತ್ಯ ಸಮೂಹ ಮತ್ತು ಸುಗಮ ಸಂಗೀತ ತಂಡವನ್ನು ಆಯೋಜನೆ ಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು. ಜೊತೆಗೆ ನಮ್ಮ ಕನ್ನಡದವರೇ ಆದ ಶ್ರೀ ಸುಹಾಸ್ ಎಲ್. ಯತಿರಾಜ್ ಜಿಲ್ಲಾಧಿಕಾರಿಗಳು ಗೌತಮಬುದ್ಧನಗರ (ಉತ್ತರಪ್ರದೇಶ) ಇವರು ಟೋಕಿಯೋ ಪ್ಯಾರಾಲಿಂಪಿಕ್ಸ್ ಕ್ರೀಡೆಯಲ್ಲಿ ರಜತ ಪದಕ ಪಡೆದಿದ್ದಾರೆ. ಇದೇ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗಿತ್ತು. ದುರದೃಷ್ಟವಶಾತ್ ನಮ್ಮ ನೆಚ್ಚಿನ ಹೀರೋ ಎಲ್ಲ ಕನ್ನಡಿಗರ ಮನಗೆದ್ದ ಕರುಣಾಮಯಿ ದಿವಂಗತ ಪುನೀತ್ ಅವರು ನಿಧನರಾದರು. ಈ ಎಲ್ಲಾ ಕಾರ್ಯಕ್ರಮಗಳನ್ನು ನುಡಿ ನಮನ ರೀತಿಯಲ್ಲಿ ಸಂಘಟಿಸಿ ಅವರಿಗೆ ಶ್ರದ್ಧಾಂಜಲಿಯನ್ನು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ಗೌರವ ಉಪಸ್ಥಿತಿಯಲ್ಲಿ ಆಯೋಜಿಸಿದೆವು. ಶ್ರೀ ಪುನೀತ್ ರಾಜ್‌ಕುಮಾರ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಅವರ ಆಶೀರ್ವಚನದೊಂದಿಗೆ ಕನ್ನಡಿಗರಿಗೆ ಆದ ದುಃಖವನ್ನು ಕಡಿಮೆ ಮಾಡಲು ಪ್ರಯತ್ನ ಮಾಡಿದೆವು. ಈ ಕಾರ್ಯಕ್ರಮದಲ್ಲಿ ಭಾಗಿಯಾದ ಪರಮಪೂಜ್ಯರಿಗೆ ಕೋಟಿ ಶರಣು ಹಾಗೂ ಕಾರ್ಯಕ್ರಮದಲ್ಲಿ ಅತಿಥಿಗಳಾಗಿದ್ದ ಜಿಲ್ಲಾಧಿಕಾರಿಗಳಾದ ಶ್ರೀ ಸುಹಾಸ್ ಎಲ್. ಯತಿರಾಜ್ ರವರು ಮತ್ತು ಮೆಡಿಕಲ್ ಕೌನ್ಸಿಲ್‌ನ ಅಧ್ಯಕ್ಷರಾದ ಶ್ರೀ ಎಂ.ಕೆ. ರಮೇಶ್ ಹಾಗೂ ಚಿತ್ರ ನಿರ್ದೇಶಕ ಶ್ರೀ ರಾಜೇಂದ್ರ ಸಿಂಗ್ ಬಾಬು ರವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಎಲೆ ಮರೆ ಕಾಯಿಯಂತೆ ಎಲ್ಲಾ ನಟರಿಗಿಂತ ವಿಭಿನ್ನವಾಗಿ ಸೇವೆ ಮಾಡಿ ಅಗಲಿದ ಕಲಾವಿದ ಶ್ರೀ ಪುನೀತ್ ರಾಜ್‌ಕುಮಾರ್ ಅವರ ಒಳ್ಳೆಯ ಗುಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ನಾವು ಕಲಿಯಬೇಕಿದೆ, ಕಲಿಯುತ್ತೇವೆ. ನಿಜವಾಗಲೂ ದಿವಂಗತ ಶ್ರೀ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರ ಭಾರತರತ್ನ ಪ್ರಶಸ್ತಿ ಸಿಗಬೇಕಿದೆ.ಅದಕ್ಕಾಗಿ ನಾವೆಲ್ಲ ಪ್ರಯತ್ನ ಮಾಡೋಣ. ಇಂತಹ ಮಹಾನ್ ಚೇತನಕ್ಕೆ ಭಾರತ ರತ್ನ ಲಭಿಸಲಿ ಎಂದು ಆಶಿಸೋಣ...

*ಸಿ.ಎಂ. ನಾಗರಾಜ*
**ಅಧ್ಯಕ್ಷರು**

## ಮುನ್ನೋಟ

ಆತ್ಮೀಯ ಕನ್ನಡಿಗರೇ,

ಈ ಬಾರಿಯ ಸಂಘದ ಚುನಾವಣೆಯಲ್ಲಿ ಭಾಗವಹಿಸಿ, ನೂತನ ತಂಡವೊಂದಕ್ಕೆ ಸಂಘವನ್ನು ಮುನ್ನಡೆಸುವ ಜವಾಬ್ದಾರಿಯನ್ನು ವಹಿಸಿರುವ ತಮಗೆ ಅಭಿನಂದನೆಗಳು ಹಾಗೂ ಈ ತಂಡದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವ ಗುರುತರವಾದ ಕಾರ್ಯವನ್ನು ನನಗೆ ವಹಿಸಿರುವ ತಮಗೆ ನನ್ನ ಹೃತ್ಪೂರ್ವಕ ವಂದನೆಗಳು. ತಮ್ಮಗಳ ಆಶಯದಂತೆ, ಸಂಘದ ಶ್ರೇಯೋಭಿವೃದ್ಧಿಗಾಗಿ, ಸೂಕ್ತ ಮಾರ್ಗದರ್ಶಿ ಸೂತ್ರಗಳ ಮೂಲಕ, ಸಾಹಿತ್ಯ, ಸಂಸ್ಕೃತಿ, ಭಾಷೆ ಮತ್ತು ಭಾಷಿಕರ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆಂದೂ, ತನ್ಮೂಲಕ ಸಂಘದ ಹಿರಿಮೆ ಹೆಚ್ಚಿಸುವುದಾಗಿ ಭರವಸೆ ನೀಡುತ್ತೇನೆ.

ಇನ್ನು ಕೊರೊನಾ ಮಹಾಮಾರಿಯ ಕರಿನೆರಳಿನಿಂದ ಪರಿಸ್ಥಿತಿ ಸಾಮಾನ್ಯ ಸ್ಥಿತಿಗೆ ಮರಳುತ್ತಿರುವುದನ್ನು ಮನಗಂಡು ಕಾರ್ಯಕಾರಿ ಸಮಿತಿ ಸಂಘದ ಕಾರ್ಯಕ್ರಮಗಳಿಗೆ ಚಾಲನೆ ನೀಡಿದೆ. ಎಲ್ಲಾ ಕಾರ್ಯಕ್ರಮಗಳಲ್ಲಿ ಬಹಳ ಉತ್ಸುಕರಾಗಿ, ಜವಾಬ್ದಾರಿಯುತರಾಗಿ ಕೋವಿಡ್ ನಿಯಮಗಳನ್ನು ಪಾಲಿಸುತ್ತಾ ಭಾಗವಹಿಸುವುದರ ಮೂಲಕ ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸುತ್ತೇನೆ.

ಕನ್ನಡ ನಾಡಿನ ವೀರ ಕನ್ನಡಿಗ, ದೊಡ್ಮನೆ ಹುಡುಗ ಕಿರಿಯ ವಯಸ್ಸಿನ ಹಿರಿಯ ಹೃದಯದ ಯುವರತ್ನ, ನಮ್ಮೆಲ್ಲರ ಪ್ರೀತಿಯ ಅಪ್ಪು-ನಮ್ಮ ಮನಸ್ಸಿನ ಅರಸು-ಇಹಲೋಕ ತ್ಯಜಿಸಿರುವುದು ಅತ್ಯಂತ ದುಃಖಕರ ಸಂಗತಿ. ಈ ವಯಸ್ಸಿನಲ್ಲಿ ಅವರಿಗೆ ದೊರೆತ ಪ್ರೀತಿ-ಅವಿಸ್ಮರಣೀಯ. ಈವರೆಗೆ ಸುಮಾರು 30 ಲಕ್ಷ ಅಭಿಮಾನಿಗಳು "ಭಾಗ್ಯವಂತ"ನ ದರ್ಶನ ಪಡೆದಿರುವುದು ಅವರ ಜನಪ್ರಿಯತೆಗೆ ಹಿಡಿದ ಕನ್ನಡಿ. ಅವರ ಅಭಿನಯ, ಗಾಯನ ಹಾಗೂ ನೃತ್ಯದ ಜೊತೆಗೆ ಸರಳತೆ, ಸಾಮಾಜಿಕ ಕಳಕಳಿ, ಪ್ರೀತಿ ಹಾಗೂ ಸಮಾಜಮುಖಿ ಕಾರ್ಯಗಳೇ ಅವರಿಗೆ ಇಷ್ಟೊಂದು ಅಭಿಮಾನಿಗಳನ್ನು ತಂದುಕೊಟ್ಟಿದೆ.

ನಿಮ್ಮೆಲ್ಲರ ಪರವಾಗಿ ಅವರಿಗೆ ಮತ್ತೊಮ್ಮೆ ವಂದಿಸುತ್ತ ಅವರ ಪ್ರೀತ್ಯಾದರ ಮನೋಭಾವನೆಯನ್ನು ಅನುಸರಿಸೋಣ, ಅನುಕರಿಸೋಣ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ಸಂಘದ ಅಕ್ಟೋಬರ್-ನವೆಂಬರ್ ಕಾರ್ಯಕ್ರಮಗಳು

**28** ಅಕ್ಟೋಬರ್ 2021 | ಬೆಳಗ್ಗೆ 11.00 ಗಂಟೆ

**ಸ್ಥಳೀಯ ಕಲಾವಿದರಿಂದ ಲಕ್ಷ ಕಂಠಗಳ ಗೀತ ಗಾಯನ -ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ**

**31** ಅಕ್ಟೋಬರ್ 2021 | ಸಂಜೆ 5.00 ಗಂಟೆ

**ದಿ. ಶ್ರೀ ಪುನೀತ್ ರಾಜ್‌ಕುಮಾರ್ ಅವರಿಗೆ 'ನುಡಿನಮನ' ಹಾಗೂ ಬೆಂಗಳೂರಿನ ನರ್ತನ ಯೋಗ ಫೌಂಡೇಶನ್ ಕಲಾ ತಂಡದಿಂದ ಸಮೂಹ ನೃತ್ಯ ಮತ್ತು ಕಲಾ ಸ್ನೇಹಿ ಟ್ರಸ್ಟ್ ತಂಡದಿಂದ ಸುಗಮ ಸಂಗೀತ**

**01** ನವೆಂಬರ್ 2021 | ಬೆಳಗ್ಗೆ 9.30 ಗಂಟೆ

**ಕನ್ನಡ ರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ**

**06** ನವೆಂಬರ್ 2021 | ಬೆಳಗ್ಗೆ 10.00 ಗಂಟೆ

**ಒಳಾಂಗಣ ಆಟೋಟ ಸ್ಪರ್ಧೆಗಳು. ಸಂಘದ ಆವರಣ ಹಾಗೂ 'ರತ್ನನ್ ಪ್ರಪಂಚ' ಚಲನಚಿತ್ರ ಪ್ರದರ್ಶನ**

**07** ನವೆಂಬರ್ 2021 | ಬೆಳಗ್ಗೆ 9.30 ಗಂಟೆ

**ಆಟೋಟ ಸ್ಪರ್ಧೆಗಳು - ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣ**

**07** ನವೆಂಬರ್ 2021 | ಸಂಜೆ 5.30 ಗಂಟೆ

**'ರಾಜಕುಮಾರ' ಕನ್ನಡ ಚಲನಚಿತ್ರ ಪ್ರದರ್ಶನ**

**10** ನವೆಂಬರ್ 2021

**ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮ**

**14** ನವೆಂಬರ್ 2021

**ಸಂಘದ ಆವರಣದಲ್ಲಿ ಆಯೋಜಿಸಿರುವ -ಕೈರುಚಿ-ಕರ್ನಾಟಕದ ವಿವಿಧ ಜಿಲ್ಲೆಗಳ, ತಿಂಡಿ-ತಿನಿಸುಗಳ ಆಹಾರ ಮೇಳ ಬೆಳಗ್ಗೆ 11.00 ಗಂಟೆಯಿಂದ**

**14** ನವೆಂಬರ್ 2021 | ಸಂಜೆ 5.00 ಗಂಟೆ

**'ಕೋಟಿಗೊಬ್ಬ-3' ಕನ್ನಡ ಚಲನಚಿತ್ರ ಪ್ರದರ್ಶನ**

**20** ನವೆಂಬರ್ 2021

**ಕನ್ನಡ ಚಲನಚಿತ್ರ ಪ್ರದರ್ಶನ**

**21** ನವೆಂಬರ್ 2021

**ರಾಜ್ಯೋತ್ಸವ ಅಂಗವಾಗಿ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ -ಗುರುಗಾಂವ್‌ನಲ್ಲಿ ಕಾರ್ಯಕ್ರಮ**

**28** ನವೆಂಬರ್ 2021

**ರಂದು ಆಯೋಜಿಸಿರುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ದೆಹಲಿ ಹಾಗೂ ಎನ್.ಸಿ.ಆರ್. ಕನ್ನಡ ಸಂಸ್ಥೆಗಳು ಕಾರ್ಯಕ್ರಮವನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಆದ್ದರಿಂದ ಕನ್ನಡ ಸಂಘ ಸಂಸ್ಥೆಗಳು ತಮ್ಮ ತಮ್ಮ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಅದರ ವಿವರಗಳನ್ನು ಕೂಡಲೇ ಸಂಘಕ್ಕೆ ತಿಳಿಸತಕ್ಕದ್ದು.**

## ವಿದ್ಯಾರ್ಥಿ ವೇತನ 2021-22

ದೆಹಲಿ ಕರ್ನಾಟಕ ಸಂಘದಿಂದ 2021-22ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.

ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 28 ನವೆಂಬರ್ 2021 ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.

ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಪ್ರಧಾನ ಕಾರ್ಯದರ್ಶಿ




# ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ದೆಹಲಿ ಕರ್ನಾಟಕ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ದಿನಾಂಕ 26.09.2021 ರಂದು ಸಂಘದ ಸಭಾಂಗಣದಲ್ಲಿ ನಡೆಯಿತು. ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಈ ಕಾರ್ಯಕಾರಿ ಸಮಿತಿಯ ಅವಧಿಯಲ್ಲಿ ಸಂಘದ ಕಾರ್ಯಕ್ರಮಗಳಿಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ವಾರ್ಷಿಕ ವರದಿ ಹಾಗೂ ಕೋಶಾಧಿಕಾರಿ ಶ್ರೀಮತಿ ಆಶಾಲತ ಎಂ. ಅವರು 2021–22ನೇ ಸಾಲಿನ ಬಜೆಟನ್ನು ಮಂಡಿಸಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಹಾಗೂ ಜಂಟಿ ಕಾರ್ಯದರ್ಶಿಗಳಾದ ರಾಧಾಕೃಷ್ಣ ಮತ್ತು ಶ್ರೀಮತಿ ಪೂಜಾ ರಾವ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಮಾಜಿ ಕಾರ್ಯದರ್ಶಿ ಎಸ್. ಕೃಷ್ಣ ಭಟ್, ಆರ್. ರೇಣುಕುಮಾರ್, ಕಾವಲು ಸಮಿತಿಯ ಸದಸ್ಯ ಈಶ್ವರ ಮಡಿವಾಳ, ಮಾಜಿ ಕೋಶಾಧಿಕಾರಿ ಕೆ.ಆರ್. ರಾಮಮೂರ್ತಿ, ಹಿರಿಯ ಕನ್ನಡತಿ ಡಾ. ಅಹಲ್ಯಾಚಿಂತಾಮಣಿ, ಸದಸ್ಯರುಗಳಾದ ಶ್ರೀಹರಿ, ಬಿ. ನಾರಾಯಣ, ಎನ್.ಆರ್. ಶ್ರೀನಾಥ್, ಚಂದ್ರಶೇಖರ ಎನ್.ಪಿ., ಎ.ಟಿ. ಶ್ರೀನಿವಾಸ್, ಡಿ.ಎ. ಶ್ರೀನಿವಾಸಮೂರ್ತಿ, ನರಸಿಂಹಮೂರ್ತಿ, ಕೃಷ್ಣಪ್ಪ ಎಂ., ಮೊದಲಾದವರು ವಿವಿಧ ವಿಷಯ ಚರ್ಚೆಗಳಲ್ಲಿ ಪಾಲ್ಗೊಂಡು ಅಭಿಪ್ರಾಯಗಳನ್ನು ಮಂಡಿಸಿ ಸೂಕ್ತ ಸಲಹೆ ನೀಡಿದರು. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರೂ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಆಜೀವ ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿದರು.

ಇತ್ತೀಚೆಗೆ ಸಂಘದ ಆಜೀವ ಸದಸ್ಯರು ಹಾಗೂ ನಾಡುನುಡಿಗೆ ಸೇವೆ ಸಲ್ಲಿಸಿದ ಕಲಾವಿದರು ಮತ್ತು ಸಾಹಿತಿಗಳ ಅಗಲಿಕೆ ನಿಮಿತ್ತ ಮೃತರ ಗೌರವಾರ್ಥವಾಗಿ ಸಭೆಯಲ್ಲಿ ಮೌನಾಚರಣೆಯೊಂದಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮಹಾಸಭೆಯಲ್ಲಿ ಸದಸ್ಯರು ಮುಂದಿನ ಅವಧಿಯ ಕಾವಲು ಸಮಿತಿಗೆ ಶ್ರೀ ಸಂಜೀವ ದೇಶಪಾಂಡೆ ಹಾಗೂ ಶ್ರೀ ಶಂಭುಲಿಂಗಪ್ಪ ಅವರ ಹೆಸರನ್ನು ಸೂಚಿಸಿದರು.

ಸಂಘದ ಹೊಸ ಕಾರ್ಯಕಾರಿ ಸಮಿತಿ ಆಯ್ಕೆಗೆ 2021 ಅಕ್ಟೋಬರ್ 3 ಕ್ಕೆ ಚುನಾವಣೆ ನಿಗಧಿಯಾಗಿದೆ. ಚುನಾವಣಾಧಿಕಾರಿ ಶ್ರೀ ಅನಂತರಾಮ ಅರಳಿ ಅವರ ನೇತೃತ್ವದಲ್ಲಿ ಚುನಾವಣಾ ಪ್ರಕ್ರಿಯೆಯು ಅದಾಗಲೇ ಆರಂಭಗೊಂಡಿದ್ದು, ಸ್ಪರ್ಧಾ ಕಣದಲ್ಲಿದ್ದ ಅಭ್ಯರ್ಥಿಗಳು ಮಹಾಸಭೆಯಲ್ಲಿ ಸಂಘದ ಆಜೀವ ಸದಸ್ಯರಿಗೆ ತಮ್ಮ ಪರಿಚಯವನ್ನು ಮಾಡಿಕೊಂಡರು.

ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದರು.

## ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು :-

**ಅಧ್ಯಕ್ಷ ಸ್ಥಾನಕ್ಕೆ** ಶ್ರೀ ಸಿ.ಎಂ. ನಾಗರಾಜ ಮತ್ತು ಡಾ. ವೆಂಕಟಾಚಲ ಜಿ. ಹೆಗಡೆ, **ಉಪಾಧ್ಯಕ್ಷ ಸ್ಥಾನಕ್ಕೆ** ಡಾ. ಅವನೀಂದ್ರನಾಥ್ ರಾವ್ ವೈ ಮತ್ತು ಶ್ರೀ ಡಾ. ಎಂ.ಎಸ್. ಶಶಿಕುಮಾರ್ **ಉಪಾಧ್ಯಕ್ಷ (ಮಹಿಳಾ ಮೀಸಲು) ಸ್ಥಾನಕ್ಕೆ** ಶ್ರೀಮತಿ ಪೂಜಾ ಪಿ. ರಾವ್ ಮತ್ತು ಶ್ರೀಮತಿ ಸಿ.ಎಸ್. ಉಮಾಶ್ರೀ **ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ** ಶ್ರೀಮತಿ ಆಶಾಲತಾ ಎಂ, ಶ್ರೀ ಚಂದ್ರಶೇಖರ ಎನ್.ಪಿ. ಮತ್ತು ಶ್ರೀ ಆರ್. ರೇಣು ಕುಮಾರ್, **ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ** ಶ್ರೀ ಸಂತೋಷ ಜೆ. ಮತ್ತು ಶ್ರೀ ಬಿ. ನಾರಾಯಣ **ಜಂಟಿ ಕಾರ್ಯದರ್ಶಿ (ಮಹಿಳಾ ಮೀಸಲು) ಸ್ಥಾನಕ್ಕೆ** ಶ್ರೀಮತಿ ಶೋಭಾ ಗೌಡ ಮತ್ತು ಶ್ರೀಮತಿ ಸುಮಿತಾ ಮುರಗೋಡ ಹಾಗೂ **ಖಜಾಂಚಿ ಸ್ಥಾನಕ್ಕೆ** ಶ್ರೀ ರಾಧಾಕೃಷ್ಣ–(ಅವಿರೋಧ) ಸ್ಪರ್ಧಿಸುತ್ತಿದ್ದಾರೆ.


**ಸದಸ್ಯ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು**

ಶ್ರೀ ಗುರುದತ್ತ ನಾಗಪ್ಪ ಅಂಕೋಲೇಕರ, ಸಿ. ಕುಮಾರ, ಶ್ರೀಮತಿ ಮಾಲಿನಿ ಪ್ರಹ್ಲಾದ್, ಕೆ.ಎಸ್. ಮೂರ್ತಿ, ಮಂಜುನಾಥ ಎಚ್.ಕೆ., ನವೀನ ಕುಮಾರ್ ವಿ., ಪ್ರಭಾಕರ ಮಡ್ಡಿತೋಟ್, ಶಿವಾನಂದ ಸಿರ್ಸಿಕರ್, ಶಿವಪ್ಪ ಎಂ., ಶ್ರೀಹರಿ, ಎ.ಟಿ. ಶ್ರೀನಿವಾಸ ಮತ್ತು ಎನ್. ಸನ್ಮಾನ್ ಸ್ಪರ್ಧಿಸುತ್ತಿದ್ದಾರೆ.

**ಮಹಿಳಾ ಮೀಸಲು ಸದಸ್ಯ ಸ್ಥಾನಕ್ಕೆ**

ಶ್ರೀಮತಿ ಆಶಾ ಶ್ಯಾಮಸುಂದರ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ಶ್ರೀಮತಿ ಸುನಿತಾ ಸ್ಪರ್ಧಿಸುತ್ತಿದ್ದಾರೆ.









**ದಿನಾಂಕ 03.10.2021** ರಂದು ದೆಹಲಿ ಕರ್ನಾಟಕ ಸಂಘದ 2021-23ನೇ ಸಾಲಿನ ಕಾರ್ಯಕಾರಿ ಸಮಿತಿಗೆ ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ **ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ** ಚುನಾವಣೆ ನಡೆಯಿತು.

ಚುನಾವಣಾ ಅಧಿಕಾರಿ ಶ್ರೀ **ಅನಂತರಾಮ ಅರಳಿ** ಅವರ ನೇತೃತ್ವದಲ್ಲಿ ಬಹಳ ಅಚ್ಚುಕಟ್ಟಾಗಿ ನಡೆಯಿತು.

ಈ ಚುನಾವಣೆಯಲ್ಲಿ **ಸಂಘದ 782 ಆಜೀವ ಸದಸ್ಯರು** ತಮ್ಮ ಮತ ಚಲಾಯಿಸಿದರು.



## ಚುನಾವಣೆಯ ಫಲಿತಾಂಶ

**ಅಧ್ಯಕ್ಷ** : ಸಿ.ಎಂ. ನಾಗರಾಜ, **ಉಪಾಧ್ಯಕ್ಷ** : ಡಾ. ಎಂ. ಎಸ್. ಶಶಿಕುಮಾರ್, **ಉಪಾಧ್ಯಕ್ಷೆ** (ಮಹಿಳಾ ಮೀಸಲು) : ಶ್ರೀಮತಿ ಪೂಜಾ ಪಿ. ರಾವ್, **ಪ್ರಧಾನ ಕಾರ್ಯದರ್ಶಿ** : ಶ್ರೀ ಆರ್. ರೇಣುಕುಮಾರ್, **ಜಂಟಿ ಕಾರ್ಯದರ್ಶಿ** : ಶ್ರೀ ಬಿ. ನಾರಾಯಣ, **ಜಂಟಿ ಕಾರ್ಯದರ್ಶಿ** (ಮಹಿಳಾ ಮೀಸಲು) : ಶ್ರೀಮತಿ ಸುಮಿತಾ ಮುರಗೋಡ, **ಖಜಾಂಚಿ** : ಶ್ರೀ ರಾಧಾಕೃಷ್ಣ (ಅವಿರೋಧ ಆಯ್ಕೆ)

**ಸದಸ್ಯರು** : ಶ್ರೀ ಪ್ರಭಾಕರ ಮಡ್ಡಿತೋಟ, ಶ್ರೀ ಶಿವಪ್ಪ ಎಂ, ಶ್ರೀ ಎ.ಟಿ. ಶ್ರೀನಿವಾಸ, ಶ್ರೀ ಕೆ.ಎಸ್. ಮೂರ್ತಿ, ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀ ನವೀನ ಕುಮಾರ್ ವಿ.

**ಮಹಿಳಾ ಮೀಸಲು ಸದಸ್ಯರು** : ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಅಶ್ವಿನಿ ಬಿ.ಎಸ್.

# ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿ-2021-23



**ಅಧ್ಯಕ್ಷ**
**ಸಿ.ಎಂ. ನಾಗರಾಜ**

ಮೂಲತಃ ಕೋಲಾರ ಜಿಲ್ಲೆಯವರಾದ ಇವರು ಎಂ.ಎ. ಪದವೀಧರರೂ ಹಾಗೂ ಸಮೂಹಮಾಧ್ಯಮ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೋಮ ವ್ಯಾಸಂಗ ಮಾಡಿದ್ದು ಪ್ರಸ್ತುತ ದೆಹಲಿ ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಐದು ಬಾರಿ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಒಂದು ಅವಧಿಗೆ ಜಂಟಿ ಕಾರ್ಯದರ್ಶಿಯಾಗಿ ಒಟ್ಟು 18 ವರ್ಷಗಳು ಕಾರ್ಯ ನಿರ್ವಹಿಸಿರುತ್ತಾರೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಇವರು ಕರ್ನಾಟಕ ಸರಕಾರದಿಂದ ಒಂದು ಕೋಟಿ ರೂಪಾಯಿ ಹಣವನ್ನು ತ್ವರಿತಗತಿಯಲ್ಲಿ ಸಂಘಕ್ಕೆ ಬಿಡುಗಡೆಯಾಗುವಂತೆ ಗಮನಾರ್ಹವಾದ ಕೆಲಸವನ್ನು ಮಾಡಿದ್ದಾರೆ. ಅಲ್ಲದೆ ಸಂಘಕ್ಕೆ ಸರಕಾರದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಪ್ರತೀ ವರ್ಷ 25 ಲಕ್ಷಗಳಂತೆ ಕಳೆದ ನಾಲ್ಕು ವರ್ಷದಲ್ಲಿ ಒಂದು ಕೋಟಿ ರೂಪಾಯಿ ಅನುದಾನ ಬರುವಂತೆ ಶ್ರಮವಹಿಸಿ ಕೆಲಸ ಮಾಡಿದ್ದಾರೆ. ಸಂಘ ಮತ್ತು ಕೆನರಾ ಬ್ಯಾಂಕ್ ನಡುವೆ ಇದ್ದ ಬಾಡಿಗೆ ವಿವಾದದಲ್ಲಿ ಜಯಗೊಳಿಸಿ ರೂ. 1.27 ಕೋಟಿ ಮತ್ತು 'ದೆಹಲಿ ತುಳುಸಿರಿ', ಗುರುಗಾಂವ್ ಕನ್ನಡ ಸಂಘಕ್ಕೆ ಧನ ಸಹಾಯ ತರುವಲ್ಲಿ ಯಶಸ್ವಿಯಾಗಿದ್ದಾರೆ. ಇದನ್ನು ಗುರುತಿಸಿ 2011 ರಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಗಂಗಾವತಿಯಲ್ಲಿ ಆಯೋಜಿಸಿದ ಸಾಹಿತ್ಯ ಸಮ್ಮೇಳನದಲ್ಲಿ ಗೌರವಿಸಿ ಪುರಸ್ಕರಿಸಲಾಗಿದೆ. 2016ರ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಪ್ರತಿಷ್ಠಿತ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ'ಯನ್ನು ಪಡೆದಿರುತ್ತಾರೆ.

ದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ಸ್ಥಾಪಕ ಅಧ್ಯಕ್ಷರು. ಈ ಸಂಸ್ಥೆಯು ಕರ್ನಾಟಕದಿಂದ ದೆಹಲಿಗೆ ಯು.ಪಿ.ಎಸ್.ಸಿ. ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಬರುವ ವಿದ್ಯಾರ್ಥಿಗಳಿಗೆ ಸೂಕ್ತ ನೆಲೆ, ಪ್ರತಿಭಾ ಪುರಸ್ಕಾರ ಮತ್ತು 50 ರಿಂದ 60 ಅರ್ಹ ಮತ್ತು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡುತ್ತ ಬಂದಿದೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಸ್ತುತ ಆಡಳಿತ ಮಂಡಳಿ ಸದಸ್ಯರೂ ಆಗಿದ್ದಾರೆ.

**ಉಪಾಧ್ಯಕ್ಷ**
**ಡಾ. ಎಂ.ಎಸ್. ಶಶಿಕುಮಾರ್**



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ಲಿನ ಇವರು ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ವಿಜ್ಞಾನಿಯಾಗಿ (ಜಂಟಿ ನಿರ್ದೇಶಕರು) ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ 21 ವರ್ಷಗಳಿಂದ ದೆಹಲಿಯಲ್ಲಿರುವ ಇವರು ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಸಸ್ಯಶಾಸ್ತ್ರ ವಿಭಾಗದಲ್ಲಿ ಎಂ.ಎಸ್ಸಿ. ಮತ್ತು ಸಸ್ಯಗಳ ಪಳೆಯುಳಿಕೆ ವಿಷಯದಲ್ಲಿ ಪಿ.ಎಚ್.ಡಿ. ಪಡೆದಿದ್ದಾರೆ. ಗ್ರಾಮೀಣ ಮತ್ತು ದುರ್ಬಲವರ್ಗದ ಮಹಿಳೆಯರು ಹಾಗೂ ಅನಿವಾರ್ಯವಾಗಿ ಶಾಲೆಯನ್ನು ಬಿಟ್ಟಿರುವ ಬಾಲಕಿಯರಿಗಾಗಿ ವಿಕಸನ ಮತ್ತು ಸಶಕ್ತಗೊಳಿಸುವಿಕೆಗಾಗಿ ಹಲವಾರು ಸರಕಾರೇತರ ಸಂಸ್ಥೆಗಳಿಗೆ, ಸಮಾಜ ಸೇವಾ ಸಂಘಟನೆಗಳಿಗೆ ತರಬೇತಿ ಮತ್ತು ತಾಂತ್ರಿಕ ಮಾರ್ಗದರ್ಶನ ಮಾಡಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ 28 ವರ್ಷಗಳ ಸಂಶೋಧನಾ ಅನುಭವ ಹೊಂದಿದ್ದಾರೆ. ಕೇಂದ್ರ ಸರಕಾರದ ಅನೇಕ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸಣ್ಣ ಮತ್ತು ಮಧ್ಯಮ ಹೊಸ ಬಯೋಟೆಕ್ ಸಂಸ್ಥೆಗಳನ್ನು ಆರಂಭಿಸಲು ಬೇಕಾದ ಮಾರ್ಗದರ್ಶನ ಮತ್ತು ಸರಕಾರದ ಅನುದಾನವನ್ನು ನೀಡುವಲ್ಲಿ ವಿಶೇಷ ಪಾತ್ರವನ್ನು ವಹಿಸಿದ್ದಾರೆ. ಹಲವು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಮ್ಮೇಳನ ಮತ್ತು ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಸ್ತುತ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿ ಹಾಗೂ ದೆಹಲಿ ಕನ್ನಡ ಶಾಲೆಯ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.



**ಉಪಾಧ್ಯಕ್ಷೆ**
**ಶ್ರೀಮತಿ ಪೂಜಾ ಪಿ. ರಾವ್**

ದೆಹಲಿ ಕರ್ನಾಟಕ ಸಂಘ, ಕಾನ್ಸ್ಟಿಟ್ಯೂಷನ್ ಕ್ಲಬ್ ಆಫ್ ಇಂಡಿಯ, ಚಿನ್ಮಯ ಮಿಷನ್ ಮೊದಲಾದ ಕಡೆ ಅನೇಕ ಸಾಂಸ್ಕೃತಿಕ ಹಾಗೂ ಸಭಾ ಕಾರ್ಯಕ್ರಮಗಳನ್ನು ನಿರೂಪಿಸಿದ ಖ್ಯಾತಿ ಪೂಜಾ ರಾವ್ ಅವರದ್ದು. ಮೂಲತಃ ಮಂಗಳೂರಿನವರು. ಕಾರ್ಕಳದ ಭುವನೇಂದ್ರ ಕಾಲೇಜಿನಿಂದ ಬಿ.ಬಿ.ಎಂ. ಪದವಿಯನ್ನು ಪಡೆದಿರುತ್ತಾರೆ. ಬೆಂಗಳೂರು ಮತ್ತು ದೆಹಲಿ ದೂರದರ್ಶನದಲ್ಲೂ ಕಾರ್ಯಕ್ರಮ ನಿರೂಪಕಿಯಾಗಿ ಸೇವೆ ಸಲ್ಲಿಸಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ಜಂಟಿಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತದಲ್ಲಿ ಪರಿಣತಿಯನ್ನು ಹೊಂದಿದ್ದಾರೆ. ದೆಹಲಿ ಕರ್ನಾಟಕ ಸಂಘದ ಸ್ಥಳೀಯ ಕಾರ್ಯಕ್ರಮಗಳಲ್ಲಿ ಕನ್ನಡದ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತ ಪ್ರೇರಣೆ ನೀಡಿದ್ದಾರೆ.

**ಪ್ರಧಾನ ಕಾರ್ಯದರ್ಶಿ**
**ಆರ್. ರೇಣುಕುಮಾರ್**



ಕರ್ನಾಟಕ ಭವನದ ನಿವಾಸಿ ಆಯುಕ್ತರ ಕಚೇರಿಯಲ್ಲಿ ಉಪಸಮನ್ವಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಇವರು ಹಿಂದೆ ಸಂಘದ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಆಯೋಜಿಸಲಾಗಿದ್ದ ಬೃಹತ್ 'ದೆಹಲಿ ಉತ್ಸವ' ಸ್ಮರಣೀಯ ದಾಖಲೆಯಾಗಿದೆ. ದೆಹಲಿಯ ಕರ್ನಾಟಕ ಭವನದ ಹೌಸಿಂಗ್ ಸೊಸೈಟಿಯ ಹಾಲಿ ಅಧ್ಯಕ್ಷರಾಗಿ ಇವರ ಕೊಡುಗೆ ಅಪಾರ. ಕನ್ನಡ ಮತ್ತು ಕನ್ನಡಿಗರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ ಇವರು ಜನಾನುರಾಗಿಯಾಗಿದ್ದಾರೆ.



**ಖಜಾಂಚಿ**
**ಶ್ರೀ ರಾಧಾಕೃಷ್ಣ (ಅವಿರೋಧ ಆಯ್ಕೆ)**

ಕಳೆದ ಮೂರು ದಶಕಗಳಿಂದ ದೆಹಲಿಯಲ್ಲಿ ನೆಲೆಸಿರುವ ಇವರು ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದಾ ಹಸನ್ಮುಖಿಯಾದ ಇವರು ಮೂಲತಃ ಉಡುಪಿ ಜಿಲ್ಲೆಯ ಪ್ರಖ್ಯಾತ ಕುಂದರಾಜವರ್ಮ ಆಳಿದ ಕುಂದಾಪುರ ತಾಲ್ಲೂಕಿನ ಪಂಚ ಗಂಗಾನದಿ ತಟದ ಕೋಡಿ ಗ್ರಾಮದವರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕರ್ನಾಟಕ ಸಂಘದಲ್ಲಿ ಹಲವು ಬಾರಿ ಆಡಳಿತ ಮಂಡಳಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿರುವ ಇವರು ದೆಹಲಿ/ಎನ್.ಸಿ.ಆರ್.ನ ಕನ್ನಡಿಗರಲ್ಲಿ ಅನ್ನದಾತರೆಂದೇ ಜನಮನ್ನಣೆಗಳಿಸಿದ್ದಾರೆ.



**ಜಂಟಿ ಕಾರ್ಯದರ್ಶಿ**

**ಶ್ರೀ ಬಿ. ನಾರಾಯಣ**

ಮೂಲತಃ ರಾಮನಗರ ಜಿಲ್ಲೆಯ ಕನಕಪುರದವರಾಗಿದ್ದು, ಕಳೆದ ಎರಡು ದಶಕಗಳಿಂದ ದೆಹಲಿಯ ಕರ್ನಾಟಕ ಭವನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ರಂಗಭೂಮಿ ಕಲಾವಿದರಾಗಿ ಹಲವಾರು ನಾಟಕಗಳಲ್ಲಿ ಅಭಿನಯಿಸಿ ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾಗಿರುತ್ತಾರೆ ಹಾಗೂ ಹಲವಾರು ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಇವರು ಈ ಹಿಂದೆ ದೆಹಲಿ ಒಕ್ಕಲಿಗ ಗೌಡ ಸಂಘದ ಖಜಾಂಚಿಯಾಗಿ, ಎರಡುಬಾರಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತಮಂಡಳಿಯ ಸದಸ್ಯರಾಗಿ ಹಾಗೂ ಒಮ್ಮೆ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಉತ್ತಮ ಕಾರ್ಯನಿರ್ವಹಿಸಿದ್ದಾರೆ.



**ಜಂಟಿ ಕಾರ್ಯದರ್ಶಿ**

**ಶ್ರೀಮತಿ ಸುಮಿತಾ ಮುರಗೋಡ**

ಧಾರವಾಡದಲ್ಲಿ ಜನನ. ಹಾಸನದ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರದಲ್ಲಿ ಎಂ.ಎ. ಕಳೆದ ಇಪ್ಪತ್ತು ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದಾರೆ. ದೆಹಲಿವಾರ್ತೆ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದ್ದು ಈಗ ಸ್ವಂತ ಉದ್ಯೋಗ ಮಾಡುತ್ತಿದ್ದಾರೆ. ಸಂಗೀತ, ನಾಟಕ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೊಂದಿರುವ ಇವರು ದೆಹಲಿಯ ಗಂಧರ್ವ ಮಹಾವಿದ್ಯಾಲಯದಲ್ಲಿ ವಯಲಿನ್ ಸಂಗೀತ ತರಬೇತಿ ಪಡೆಯುತ್ತಿದ್ದಾರೆ. ದೆಹಲಿ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯ ಹಾಗೂ ಇನ್ನೂ ಹಲವಾರು ಸಮಾಜ ಸೇವಾ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಯೋಗ ಮತ್ತು ನ್ಯಾಚುರೋಪತಿಯಲ್ಲಿ ಡಿಪ್ಲೊಮಾ ಅಧ್ಯಯನಮಾಡಿರುವ ಇವರುಪ್ರಸ್ತುತಇವರು ಯೋಗ ಮತ್ತು ಪ್ರಕೃತಿ ಚಿಕಿತ್ಸಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

## ಸದಸ್ಯರುಗಳು



**ಶ್ರೀ ಪ್ರಭಾಕರ ಮಡ್ಡಿತೋಟ್ :** ಮೂಲತಃ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿಯವರು. ಗುರುಗ್ರಾಮ್‌ನಲ್ಲಿ ಹೀರೊ ಮೋಟೋಕಾರ್ಪ್ (ಹೀರೊ ಹೋಂಡಾ) ಕಂಪನಿಯ ತಾಂತ್ರಿಕ ಪರಿಣಿತರಾಗಿ ಸುಮಾರು 23 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಗುರುಗಾಂವ್ ಕನ್ನಡ ಸಂಘದಲ್ಲಿ ಸಕ್ರಿಯರಾಗಿದ್ದುಕೊಂಡು ಒಬ್ಬ ಒಳ್ಳೆಯ ಸಂಘಟಕನಾಗಿ, ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷ ಸ್ಥಾನವೂ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿ ಅನುಭವ ಪಡೆದಿರುವ ಇವರು ಕಾರ್ಯಕಾರಿ ಸಮಿತಿಯಲ್ಲಿ ಇರಲಿ ಇಲ್ಲದೇ ಇರಲಿ ಗುರಗಾಂವ್ ಕನ್ನಡ ಸಂಘದಲ್ಲಿ ಕ್ರಿಯಾಶೀಲರಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಆರಂಭಿಕ ಘಟ್ಟದಲ್ಲಿ ಗುರುಗಾಂವ್ ಕನ್ನಡಸಂಘದಲ್ಲಿ ಕಲಾವಿದರನ್ನು ಕರೆಸಿ ಸಂಭಾವನೆ ನೀಡಿ ಕಾರ್ಯಕ್ರಮ ಮಾಡಿಸುವಷ್ಟು ಆರ್ಥಿಕ ಸ್ಥಿತಿಗತಿ ಉತ್ತಮವಾಗಿಲ್ಲದಿದ್ದ ಸಮಯದಲ್ಲಿ ಸ್ವತಃ ಹಾಸ್ಯ ಕಲಾವಿದನಾಗಿ ಹಾಸ್ಯ ಚಟಾಕಿ, ನಾಟಕ, ನೃತ್ಯ ಇತ್ಯಾದಿ ಯಾವುದೇ ಇರಬಹುದು ಎಲ್ಲದರಲ್ಲೂ ತಮ್ಮದೇ ಛಾಪುಮೂಡಿಸುತ್ತಿದ್ದ ಅನನ್ಯ ಪ್ರತಿಭೆ ಪ್ರಭಾಕರ ಅವರದು.

ದೆಹಲಿ ಎನ್.ಸಿ.ಆರ್.ನ ಕನ್ನಡ ಚಲನಚಿತ್ರ ಅಭಿಮಾನಿಗಳಿಗೆ ಅವರಿಗೆ ಇಷ್ಟವಾದ ಕನ್ನಡ ಚಲನಚಿತ್ರವನ್ನು ತರಿಸಿ ತೋರಿಸುವ ಕೆಲಸವನ್ನು ಸುಮಾರು ವರ್ಷಗಳ ಕಾಲ ಮಾಡಿದ್ದಾರೆ. ನಾವಿರುವೆವು ನಿಮಗಾಗಿ (We are with you) ತಂಡದೊಂದಿದೆ ಸಾಮಾಜಿಕ ಕಳಕಳಿಯ ಕೆಲಸ ಮಾಡಿರುವ ಸರಳ ಸಜ್ಜನಿಕೆಯ ಮೃದು ಸ್ವಭಾವ, ಸದಾ ಹಸನ್ಮುಖಿ ಯಾವಾಗಲೂ ತಾವು ನಕ್ಕು ಜೊತೆಗಿರುವವರನ್ನು ನಗಿಸುತ್ತಾ, ಹೊರನಾಡ ಕನ್ನಡಿಗರ ನೋವು ನಲಿವಿಗೆ ಸ್ಪಂದಿಸುವುದನ್ನೇ ಕನ್ನಡದ ಕಾಯಕವನ್ನಾಗಿಸಿಕೊಂಡಿದ್ದಾರೆ.



**ಶ್ರೀ ಶಿವಪ್ಪ ಎಂ. :** ಕಳೆದ 26 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿರುವ ಇವರು ರಾಷ್ಟ್ರೀಯ ಮಾನವ ಹಕ್ಕು ಮತ್ತು ಅಧಿಕಾರಿಗಳ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕಡೂರಿನವರಾದ ಇವರು ಪರಿಶ್ರಮಿ ಕಾರ್ಯಕರ್ತರಾಗಿದ್ದು ರಂಗಚಟುವಟಿಕೆ ಸಂಗೀತ ಹಾಗೂ ಆಟೋಟಗಳಲ್ಲಿ ವಿಶೇಷ ಆಸಕ್ತಿ ಹೊಂದಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಾಸಂಗಿಕವಾಗಿ ತತ್‌ಕ್ಷಣ ಯಾವುದೇ ಜವಾಬ್ದಾರಿಯನ್ನು ಆಸಕ್ತಿಯಿಂದ ತೆಗೆದುಕೊಂಡು ನಿರ್ವಹಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ 2019-21ರ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸಿ ಆಟೋಟಗಳು ಹಾಗೂ ಆಹಾರ ಮೇಳ ಯಶಸ್ವಿಯಾಗುವಲ್ಲಿ ಸಹಕರಿಸಿದ್ದಾರೆ.



**ಶ್ರೀ ಎ.ಟಿ. ಶ್ರೀನಿವಾಸ್ :** ದೆಹಲಿ ಪೋಲಿಸ್‌ನಲ್ಲಿ ಕಳೆದ ಮೂರು ದಶಕಗಳಿಂದ ಸೇವೆಯಲ್ಲಿದ್ದಾರೆ. ದೆಹಲಿ ಪೋಲಿಸ್ ಕನ್ನಡಿಗರ ಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿ ದುಡಿದಿದ್ದಾರೆ. ಅದರ ಅಧ್ಯಕ್ಷರಾಗಿಯೂ ಮುನ್ನಡೆಸಿದ್ದಾರೆ. 'ಸ್ವರಾಂಜಲಿ' ಗಾಯನ ತಂಡದ ಸಂಚಾಲಕರಾಗಿ, ಗಾಯಕರಾಗಿಯೂ ಜನಪ್ರಿಯರಾಗಿದ್ದಾರೆ. ರಂಗಕಲಾವಿದರಾಗಿ ರಂಗಾಯಣ ಮತ್ತು ರವೀಂದ್ರ ಕಲಾಕ್ಷೇತ್ರಗಳಲ್ಲೂ ತಮ್ಮ ಪ್ರದರ್ಶನ ನೀಡಿದ್ದಾರೆ. ದೆಹಲಿ ಒಕ್ಕಲಿಗ ಗೌಡ ಸಂಘದ ಜಂಟಿ ಕಾರ್ಯದರ್ಶಿಯಾಗಿಯೂ ಸೇವೆಸಲ್ಲಿಸಿದ್ದಾರೆ.



**ಶ್ರೀಮತಿ ಮಾಲಿನಿ ಪ್ರಹ್ಲಾದ್ :** 1985 ರಿಂದ ದೆಹಲಿಯಲ್ಲಿ ವಾಸವಾಗಿರುವ ಇವರು ಬಿ.ಕಾಂ. ಪದವೀಧರೆ. ಹಿಂದ್ರೆಕ್ಟಿಫೈಯರ್ಸ್ ಲಿಮಿಟೆಡ್‌ನಲ್ಲಿ ಅಫೀಸ್ ಅಸಿಸ್ಟೆಂಟ್ ಆಗಿ ಕೆಲಸ ಮಾಡಿದ ಅನುಭವ ಹಾಗೂ ದೆಹಲಿ ತುಳುಸಿರಿಯ ಜಂಟೀಕಾರ್ಯದರ್ಶಿ ಮತ್ತು ಜನಕಪುರಿ ಮಹಿಳಾ ಮಂಡಳಿಯಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ಉಪಾಧ್ಯಕ್ಷರು. ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಸಮೂಹ ನೃತ್ಯ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದಾರೆ. ಇತ್ತೀಚೆಗೆ ಬಿಡುಗಡೆಗೊಂಡ 'ಜೀವನರೇಖೆ' ಕಿರುಚಿತ್ರದಲ್ಲಿ ಅಭಿನಯಿಸಿ ಜನಮೆಚ್ಚುಗೆ ಪಡೆದಿದ್ದಾರೆ.



**ಶ್ರೀ ಕೆ.ಎಸ್.ಮೂರ್ತಿ :** ಒಬ್ಬ ಪ್ರತಿಭಾವಂತ ಸಿವಿಲ್‌ಇಂಜಿನಿಯರ್. ಸ್ನಾತಕೋತ್ತರ ಪದವೀಧರ. ಬೆಂಗಳೂರು ವಿಶ್ವವಿದ್ಯಾಲಯದ ಪ್ರತಿಷ್ಠಿತ ಯುನಿವರ್ಸಿಟಿ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನಿಂದ 1989ರಲ್ಲಿ ಬಿ.ಇ. ಹಾಗೂ 1991 ರಲ್ಲಿ ಎಂ.ಇ. ಪದವಿಯನ್ನು ಪಡೆದಿರುತ್ತಾರೆ. ಕಳೆದ ಇಪ್ಪತ್ತೊಂಬತ್ತು ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿದ್ದಾರೆ. ಮೂಲತಃ ಇವರು ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಪ್ರದೇಶದವರು ಮತ್ತು ರೈತ ಕುಟುಂಬದಿಂದ ಬಂದವರು. ಸರಳ ಸಜ್ಜನಿಕೆ ನಿಷ್ಠಾವಂತ ಮತ್ತು ಕಾರ್ಯಶೀಲ ವ್ಯಕ್ತಿ. ಪ್ರಸ್ತುತ ಇವರು ದೆಹಲಿ ಒಕ್ಕಲಿಗ ಗೌಡ ಸಂಘದ ಉಪಾಧ್ಯಕ್ಷರಾಗಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಕಾರ್ಯದರ್ಶಿಯಾಗಿದ್ದಾರೆ. ಪ್ರಖ್ಯಾತ ಕಟ್ಟಡ ನಿರ್ಮಾಣ ಕಂಪೆನಿಗಳಾದ ಎಸ್.ಪಿ.ಎಮ್.ಎಲ್., ಸಿಂಪ್ಲೆಕ್ಸ್ ಮತ್ತು ನಾಗಾರ್ಜುನ ಕನ್‌ಸ್ಟ್ರಕ್ಷನ್‌ನಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿರುತ್ತಾರೆ. ಪ್ರಸ್ತುತ ನೊಯ್ಡಾದ ಪ್ರತಿಷ್ಠಿತ

ಇಂಜಿನಿಯರಿಂಗ್ ಅಂಡ್ ಕನ್‌ಸ್ಟ್ರಕ್ಷನ್ ಕಂಪೆನಿ ಜೆ.ಪಿ. ಗ್ರೂಪ್‌ನಲ್ಲಿ ಅಡಿಷನಲ್ ಜಿ.ಎಂ. (ನಿಯೋಜನೆ) ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತಿರುವ ಸಿವಿಲ್ ಕೆಲಸಗಳಿಗೆ ತಮ್ಮ ಸಮಯ, ತಾಂತ್ರಿಕ ಮಾರ್ಗದರ್ಶನ ಹಾಗೂ ಸಹಕಾರ ನೀಡುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.



**ನವೀನ್ ಕುಮಾರ್ ವಿ. :** ಮೂಲತಃ ಬೆಂಗಳೂರಿನವರಾದ ಇವರು ರೈಲ್ವೇ ಇಲಾಖೆಯಲ್ಲಿ ಕಳೆದ ಏಳು ವರ್ಷಗಳಿಂದ ತಾಂತ್ರಿಕ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಉತ್ತಮ ಕ್ರೀಡಾಪಟುವಾಗಿದ್ದಾರೆ. ಪ್ರತೀವರ್ಷ ದೆಹಲಿ ಕರ್ನಾಟಕ ಸಂಘವು ನಡೆಸುವ ಆಟೋಟ ಸ್ಪರ್ಧೆಗಳಲ್ಲಿ ಬೆಳ್ಳಿಯಪ್ಪ ಗ್ರೂಪ್ ತಂಡವನ್ನು ಪ್ರತಿನಿಧಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇವರು ಉತ್ತಮ ಸಂಘಟಕರಾಗಿದ್ದು, ಹಲವಾರು ಕನ್ನಡ ಪರ ಚಟುವಟಿಕೆಗಳಲ್ಲಿ ಭಾಗವಹಿಸಿರುತ್ತಾರೆ.



**ಶ್ರೀಮತಿ ಸವಿತಾ ನೆಲ್ಲಿ :** ಮೂಲತಃ ಉಡುಪಿಯವರಾದ ಇವರು ಬಿ.ಕಾಂ. ಪದವೀಧರೆ. ಭರತ ನಾಟ್ಯ ಪ್ರವೀಣೆಯಾದ ಇವರು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಸುತ್ತಮುತ್ತಲಿನ ಹಲವಾರು ಕಡೆಗಳಲ್ಲಿ ಭರತನಾಟ್ಯ ನೃತ್ಯಪ್ರದರ್ಶನ ನೀಡಿರುವುದಲ್ಲದೆ ನೃತ್ಯ ಸಂಯೋಜನೆಯನ್ನೂ ಮಾಡಿರುತ್ತಾರೆ. ದೆಹಲಿ, ಮೈಸೂರು ಮತ್ತು ಇತರ ಕಡೆ ನಾಟಕಗಳಲ್ಲಿ ನಟಿಸಿರುತ್ತಾರೆ. ಜನಕಪುರಿ ಮಹಿಳಾಮಂಡಳಿಯ ಸಕ್ರಿಯ ಸದಸ್ಯೆಯಾಗಿರುವ ಇವರು ಮಹಿಳಾ ಮಂಡಳಿಯ ಕಾರ್ಯದರ್ಶಿಯಾಗಿದ್ದಾಗ ಬೆಳ್ಳಿಹಬ್ಬ ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಿರುತ್ತಾರೆ. ಇವರ ಕವನಗಳು ಅಭಿಮತದಲ್ಲಿ ಪ್ರಕಟವಾಗಿವೆ. ಸಂಘದ ಕ್ರೀಡಾಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.




**ಶ್ರೀಮತಿ ಅಶ್ವಿನಿ ಬಿ.ಎಸ್. :** ದೆಹಲಿಯಲ್ಲಿ ಕಳೆದ 28 ವರ್ಷಗಳಿಂದ ವಾಸವಾಗಿದ್ದಾರೆ. ಹತ್ತು ವರ್ಷಗಳಿಂದ ಸಂಘದ ಸದಸ್ಯರಾಗಿದ್ದಾರೆ. 2013–15ರ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿದ್ದರು. ಹಲವು ನಾಟಕಗಳಲ್ಲಿ ಕಲಾವಿದೆಯಾಗಿ ಭಾಗವಹಿಸಿರುವ ಇವರು ದೆಹಲಿ ಫ್ರೆಂಡ್ಸ್ ಎಂಬ ತಂಡದ ಮೂಲಕ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಯಲ್ಲಿ ಪ್ರದರ್ಶನ ನೀಡಿದ್ದಾರೆ. ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಪದಾಧಿಕಾರಿಯಾಗಿ ಮತ್ತು ನಂತರ ಉಪಾಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ್ದಾರೆ.



**ಶ್ರೀ ಸಂತೋಷ ಜೆ. :** ಮೂಲತಃ ಕೃಷಿ ಕುಟುಂಬದ ಹಾಸನ ಜಿಲ್ಲೆಯ ಇವರು ಸುಮಾರು 17 ವರ್ಷಗಳಿಂದ ಗುರುಗ್ರಾಮದಲ್ಲಿರುವ ಹೋಂಡಾ ಕಂಪೆನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗುರುಗಾಂವ್ ಕನ್ನಡ ಸಂಘದಲ್ಲಿ ನೃತ್ಯ, ನಾಟಕ, ಕ್ರೀಡೆ ಹಾಗೂ ಸಂಘದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಇವರು ಪ್ರಸ್ತುತ ಗುರುಗಾಂವ್ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಎರಡು ಅವಧಿಯ 5 ವರ್ಷಗಳ ಕಾಲ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ತುಂಬಾ ಉತ್ಸಾಹದಿಂದ ಸಮಯ ನೀಡಿ ಕಾರ್ಯನಿರ್ವಹಿಸುತ್ತಿರುವ ಇವರು ಕ್ರೀಡಾ ಸಮಿತಿಯ ಸಂಚಾಲಕರಾಗಿ ಕರೋನಾ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಇತಿಹಾಸದಲ್ಲಿ ಮೊದಲ ಬಾರಿಗೆ 15 ಕ್ರಿಕೆಟ್ ತಂಡಗಳು ಭಾಗವಹಿಸಿದ್ದ ಪಂದ್ಯಾವಳಿಯನ್ನು ಹಾಗೂ ವಾಲೀಬಾಲ್, ಕಬಡ್ಡಿ ಮತ್ತು ಥ್ರೋ ಬಾಲ್ ಹಾಗೂ ಇತರ ಆಟೋಟ ಸ್ಪರ್ಧೆಗಳನ್ನು ಹಿರಿಯರ ಮಾರ್ಗದರ್ಶನದೊಂದಿಗೆ ತುಂಬಾ ಶಿಸ್ತು ಬದ್ಧವಾಗಿ ನಿರ್ವಹಿಸಿದ್ದಾರೆ.



**ಶ್ರೀ ಚಂದ್ರಶೇಖರ ಎನ್.ಪಿ. :** ಕರ್ನಾಟಕದ ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಇವರು ಪ್ರಾಥಮಿಕ ಹಂತದಿಂದ ಹಿಡಿದು ಪದವಿವರೆಗಿನ ವಿದ್ಯಾಭ್ಯಾಸವನ್ನು ಕನಕಪುರದಲ್ಲಿ ಮುಗಿಸಿ ನಂತರ ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಎಂ.ಎ. (ಕನ್ನಡ) ಮತ್ತು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಿಂದ ಎಂ.ಎಡ್. ಪದವಿ ಅಧ್ಯಯನ ಮಾಡಿದ್ದಾರೆ. ತಮ್ಮ ಆಯ್ಕೆಯ ಅಧ್ಯಯನ ವಿಭಾಗದಲ್ಲಿ ಒಳ್ಳೆಯ ನೈಪುಣ್ಯತೆ ಹೊಂದಿರುವ ಚಂದ್ರಶೇಖರ ಅವರದು ಸಕಾರಾತ್ಮಕ ಚಿಂತನೆಯನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿತ್ವ.

ರಾಮನಗರ ಜಿಲ್ಲೆಯ ಬಿ.ಎಸ್.ವಿ.ಪಿ. ಮಹಿಳಾ ಪ್ರಥಮ ದರ್ಜೆ ಕಾಲೇಜು ಮತ್ತು ರೂರಲ್ ಕಾಲೇಜು, ಕನಕಪುರದಲ್ಲಿ ಉಪನ್ಯಾಸಕರಾಗಿ ಸೇವೆ ಆರಂಭಿಸಿ, ನಂತರ 2004 ರಲ್ಲಿ ಮಧ್ಯಪ್ರದೇಶ ದನರಸಿಂಗ್‌ಪುರ ಜಿಲ್ಲೆಯ ಜವಾಹರ್ ನವೋದಯ ವಿದ್ಯಾಲಯದಲ್ಲಿ ಶಿಕ್ಷಕರಾಗಿ ನೇಮಕಗೊಂಡ ನಂತರ ಹೊರನಾಡ ಕನ್ನಡಿಗರಾದರು. ನವೋದಯ ಶಾಲೆಗಳಲ್ಲಿ ತ್ರಿಭಾಷ ಸೂತ್ರವನ್ನು ಅನುಸರಿಸುವುದರಿಂದ ಅಲ್ಲಿ ಕನ್ನಡ ಶಿಕ್ಷಕರಾಗಿ ಚಂದ್ರಶೇಖರ ಅವರು ಕನ್ನಡೇತರ ವಿದ್ಯಾರ್ಥಿಗಳಿಗೆ ಅವರು ಕನ್ನಡವನ್ನು ಕಲಿಸುವ ಮೂಲಕ ಕನ್ನಡ ತಾಯಿಯ ಸೇವೆಗೈಯುತ್ತಾ ಬಂದ ಇವರು ಈಗ ಭಾರತದ ಸಂಸತ್ತಿನಲ್ಲಿ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಾಹಿತ್ಯಾಸಕ್ತರಾದ ಚಂದ್ರಶೇಖರ ಅವರು ದೆಹಲಿಯ ವಿವಿಧ ಸಾಂಸ್ಕೃತಿಕ ಸಂಘಟನೆಗಳ ಜೊತೆ ಸಕ್ರಿಯವಾಗಿದ್ದು ಜನಕಪುರಿ ಕನ್ನಡ ಕೂಟದ ಖಜಾಂಚಿಯಾಗಿ, ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾಗಿ, ದೆಹಲಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾಗಿದ್ದಾರಲ್ಲದೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಸ್ಥಾಪಕ ಅಧ್ಯಕ್ಷರಾಗಿ ದೆಹಲಿ ಎನ್.ಸಿ.ಆರ್.ನಲ್ಲಿರುವ ಗುರುಗ್ರಾಮ, ಭೀವಾಡಿ, ನೋಯ್ಡಾ, ಫರೀದಾಬಾದ್‌ನಲ್ಲಿರುವ ಕನ್ನಡಿಗರನ್ನು ಸಂಘಟಿಸಿ ಸಂಸ್ಥೆಯನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಕರ್ನಾಟಕ ಸಂಘ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಸಾಂಸ್ಕೃತಿಕ ಚಟುವಟಿಕೆ, ಶೈಕ್ಷಣಿಕ ಪ್ರಗತಿ, ಅಭಿಮತ ಪತ್ರಿಕೆಯ ಸಂಪಾದಕ ಸದಸ್ಯ ಹಾಗೂ ಅಭಿವ್ಯಕ್ತ ಮಾಸಪತ್ರಿಕೆಯ ಪ್ರಧಾನ ಸಂಪಾದಕರಾಗಿಯೂ ಸೇವೆಸಲ್ಲಿಸುತ್ತಿದ್ದಾರೆ ಹಾಗೂ ಶರಣ ಸಾಹಿತ್ಯ ಪರಿಷತ್ ದೆಹಲಿ ಘಟಕದ ವತಿಯಿಂದ ಪ್ರತಿ ತಿಂಗಳು ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡು ಕನ್ನಡ ಸಾಹಿತ್ಯ ಕಲೆ ಮತ್ತು ಸಂಸ್ಕೃತಿಯನ್ನು ರಾಷ್ಟ್ರ ರಾಜಧಾನಿಯಲ್ಲಿ ಪ್ರಸರಿಸುವ ಮತ್ತು ಪ್ರಚಾರ ಪಡಿಸುವ ಕೆಲಸವನ್ನು ಸಮಾನ ಮನಸ್ಕ ಗೆಳೆಯರ ಜೊತೆಗೂಡಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಶ್ರೀ ಚಂದ್ರಶೇಖರ ಅವರು ಐಎಎಸ್ ಮತ್ತು ಕೆಎಎಸ್ ಆಕಾಂಕ್ಷಿಗಳಿಗೆ ಪರೀಕ್ಷೆಗಳಿಗೆ ತರಬೇತಿ ನೀಡುವುದು ಮತ್ತು ಅಣುಕು ಸಂದರ್ಶನದ ಮೂಲಕ ವ್ಯಕ್ತಿತ್ವ ಪರೀಕ್ಷೆಗೆ ತಯಾರಾಗಲು ಅಭ್ಯರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುತ್ತಾ ವಿವಿಧ ಉನ್ನತ ಸಂಸ್ಥೆಗಳಲ್ಲಿ ಭಾಷಾ ತಜ್ಞರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಚಂದ್ರಶೇಖರ ಅವರು ತಮ್ಮ ಕಾಲೇಜು ದಿನಗಳಿಂದಲೇ ಲೇಖನಗಳನ್ನು ಬರೆಯಲು ಪ್ರಾರಂಭಿಸಿದ್ದು ಕನ್ನಡಸಾಹಿತ್ಯ ಸೇರಿದಂತೆ ವಿವಿಧ ವಿಷಯಗಳ ಕುರಿತು ಪ್ರಬಂಧಗಳನ್ನು ಸಿದ್ದಪಡಿಸಿ ಮಂಡಿಸಿದ್ದಾರೆ. ಮುಖ್ಯವಾಗಿ–'ಮಾತೃಭಾಷೆಗಳು ಮತ್ತು ರಾಷ್ಟ್ರ ನಿರ್ಮಾಣ ಕುರಿತ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ತ್ರಿಭಾಷಾಸೂತ್ರದ ಮಹತ್ವ ಮತ್ತು ಪಾತ್ರ ಕುರಿತ ಪ್ರಬಂಧ ಮಂಡಿಸಿದ್ದಾರೆ.'–ಸಮಕಾಲೀನ ಜಗತ್ತಿನಲ್ಲಿ ವಚನಸಾಹಿತ್ಯದ ಪ್ರಸ್ತುತತೆ.– ಸಂಸತ್ತಿನಲ್ಲಿ ಜೆ.ಹೆಚ್. ಪಟೇಲ್ ಮೊಳಗಿಸಿದ ಕನ್ನಡ ಕಹಳೆಗೆ ತುಂಬಿತು ಐವತ್ತು (1967–2017) ಇತ್ಯಾದಿ. ಶ್ರೀ ಚಂದ್ರಶೇಖರ ಅವರು ಕನ್ನಡ–ಇಂಗ್ಲಿಷ್ ಮತ್ತು ಹಿಂದಿಯಿಂದ ಕನ್ನಡಕ್ಕೆ ಹಾಗೂ ಕನ್ನಡದಿಂದ ಇಂಗ್ಲಿಷ್‌ಗೆ ಅನೇಕ ಕಥೆಗಳು ಮತ್ತು ಪುಸ್ತಕಗಳನ್ನು ಅನುವಾದಿಸಿದ್ದಾರೆ. ಅವುಗಳೆಂದರೆ– 'ದೇಗುಲಶ್ರೀ (ಕನ್ನಡದಿಂದ ಇಂಗ್ಲಿಷ್)', 'ಬಕಾಸುರದಿಕಿಂಗ್‌ಆಫ್ಹರಪ್ಪನ್' (ಇಂಗ್ಲಿಷ್ ನಿಂದ ಕನ್ನಡ), 'ಮಂತ್ರಮಹರ್ಷಿ ಗುರೂಜಿ' (ಕನ್ನಡದಿಂದ ಇಂಗ್ಲಿಷ್), 'ಶ್ರೀಸದ್ಗುರುದರ್ಶನ', (ಕನ್ನಡದಿಂದ ಇಂಗ್ಲಿಷ್) 'ಅಪ್ಪನಿಗೊಂದು ಪತ್ರ' (ಹಿಂದಿಯಿಂದ– ಕನ್ನಡ), 'ಅನುಪಮಾ ಸೌಂದರ್ಯ' ಇಂಗ್ಲಿಷ್‌ನಿಂದ– ಕನ್ನಡ) ಮೊದಲಾದವು ಅವರ ಅನುವಾದಗಳು.

# “ಹೃದಯವಂತ, ನಗುಮುಖದ ಅಪ್ಪು ಪಂಚಭೂತಗಳಲ್ಲಿ ಪರಿವರ್ತನೆಯಾಗಿದ್ದಾರೆ.”

## - ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ




ಕಿರಿಯ ಹರೆಯದಲ್ಲೇ ಹಿರಿದಾದ ಸಾಧನೆ ಮಾಡಿ ಕೋಟ್ಯಂತರ ಜನರ ಹೃದಯ ಸಾಮ್ರಾಟನಾಗಿದ್ದ ಖ್ಯಾತ ಕಲಾವಿದ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು “ಅಪ್ಪು ಅವರು ಪಂಚ ಭೂತಗಳಾಗಿ ಪರಿವರ್ತನೆಗೊಂಡಿದ್ದಾರೆಂದು” ಆದಿಚುಂಚನಗಿರಿ ಸಂಸ್ಥಾನದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದ ಸ್ವಾಮೀಜಿ ಸಂತಾಪ ವ್ಯಕ್ತಪಡಿಸಿದರು.

ದೆಹಲಿ ಕರ್ನಾಟಕ ಸಂಘ ಅಕ್ಟೋಬರ್ 31ರಂದು ಸಂಜೆ 05:00 ಗಂಟೆಗೆ ಏರ್ಪಡಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ದೆಹಲಿ ಕನ್ನಡಿಗರು ಅಗಲಿದ ನಟನಿಗೆ ಮೊಂಬತ್ತಿ ಹಚ್ಚಿ ಮೌನಾಚರಣೆ ಮಾಡುವ ಮೂಲಕ ಗೌರವ ಸಲ್ಲಿಸಿದರು. ಸಾನ್ನಿಧ್ಯ ವಹಿಸಿದ ಪರಮಪೂಜ್ಯ ಸ್ವಾಮೀಜಿಯವರು ಮಾತನಾಡಿ ಜಗತ್ತಿಗೆ ನಾವು ಜನ ಆಗಂತುಕರಾಗಿ ಬರುತ್ತೇವೆ, ಅತಿಥಿಗಳಾಗಿ ಉಳಿಯುತ್ತೇವೆ. ಎಷ್ಟೋ ಜನ ಆಗಂತುಕಾರರಾಗಿಯೇ, ಅತಿಥಿಗಳಾಗಿಯೇ ಹಾಗೆಯೇ ಹೊರಟು ಬಿಡುತ್ತಾರೆ ಆದರೆ ಸ್ನೇಹಪರರೂ ಮತ್ತು ಜನ ಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡ ವ್ಯಕ್ತಿಗಳನ್ನು ಈ ಸಮಾಜ ಮತ್ತು ದೇಶ ಯಾವತ್ತು ಮರೆಯುವುದಿಲ್ಲ. ಬೆಳ್ಳಿ ತೆರೆಯ ಮೇಲಷ್ಟೇ ಅಲ್ಲದೇ, ನಿಜ ಬದುಕಿನುದ್ದಕ್ಕೂ ಬೆಳ್ಳಿ ತಾರೆಯಂತೆ ಬೆಳಗಿದ ಪುನೀತ್ ರಾಜ್‌ಕುಮಾರ್ ಅವರು ಇದಕ್ಕೆ ತಕ್ಕ ನಿದರ್ಶನ ಎಂದರು. ಶ್ರೀ ಮಠದ ಶಾಲಾ ಕಾಲೇಜುಗಳ ಕಾರ್ಯಕ್ರಮಗಳಿಗೆ ಅತಿಥಿಯಾಗಿ ಬಂದಾಗ ನೃತ್ಯ ಕಾರ್ಯಕ್ರಮ ನಡೆಸಿಕೊಡುವಂತೆ ಕೋರುತ್ತಿದ್ದ ವಿದ್ಯಾರ್ಥಿಗಳಿಗೆ ಸ್ವಾಮೀಜಿಗಳ ಸಮ್ಮುಖದಲ್ಲಿ ಹಾಗೂ ಮಠದ ಪವಿತ್ರ ಜಾಗದಲ್ಲಿ ನೃತ್ಯ ಮಾಡುವುದು ಬೇಡ, ಅದಕ್ಕಾಗಿ ಮತ್ತೊಮ್ಮೆ ಬರುವೆ ಎಂದು ನಮ್ರವಾಗಿ ಪುನೀತ್ ಅವರು ಹೇಳುತ್ತಿದ್ದುದನ್ನು ನೆನಪಿಸಿಕೊಂಡರಲ್ಲದೆ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಲು ಎಷ್ಟೇ ದೂರ ಇದ್ದರೂ ಕಾರ್ಯಕ್ರಮಗಳಿಗೆ ಬರುತ್ತೇನೆ. ಎಷ್ಟೇ ದೂರವಾದರೂ ಅದು ನನ್ನ ಗಣನೆಗೆ ಬರುವದಿಲ್ಲ ಎಂದು ಹೇಳಿದ್ದ ಅಪ್ಪುವನ್ನು ಸ್ವಾಮೀಜಿ ಸ್ಮರಿಸಿದರು. ಹೀಗಾಗಿ ಈಗ ನಾನು ಪುನೀತ್ ಅವರಿಗೆ ನುಡಿನಮನ ಸಲ್ಲಿಸಲು ದೂರದ ದೆಹಲಿಗೆ ಬಂದಾಗ ಅವರ ಮಾತುಗಳು ನೆನಪಿಗೆ ಬರುತ್ತಿದೆ ಎಂದು ತಿಳಿಸಿದರು.

ಮಲ್ಲಿಗೆ ಹೂವಿನ ಪರಿಮಳದಂತೆ, ಸಾಧಕರ ಸಾಧನೆ, ಆ ವ್ಯಕ್ತಿಗಳಿಗಿಂತ ಹೆಚ್ಚಾಗಿ ಸಮಾಜಕ್ಕೆ ಉಪಯೋಗವಾಗುತ್ತದೆ. ಪುನೀತ್ ಅವರು ಕೂಡ ಆ ಸಾಲಿನಲ್ಲಿ ಬಂದು ನಿಲ್ಲುತ್ತಾರೆ. ದೊಡ್ಡಮನೆ ಎಂಬ ಕೌಟುಂಬಿಕ ಹಿನ್ನೆಲೆ ಇದ್ದರೂ ಕೂಡ ಪುನೀತ್ ಅವರದು ಸ್ವಂತ ಪ್ರತಿಭೆ ಮತ್ತು ಸಾಧನೆ. ಅಪ್ಪು ನಟ ಮಾತ್ರನಾಗಿದ್ದರೆ ಜನ ಅವರ ಸಾವಿಗೆ ಇಷ್ಟು ಕಂಬನಿ ಮಿಡಿಯುತ್ತಿರಲಿಲ್ಲ ಅವರು ಒಂದು ಕೈಯಿಂದ ಕೊಟ್ಟಿದ್ದನ್ನು ಇನ್ನೊಂದು ಕೈಗೆ ತಿಳಿಯಬಾರದೆಂಬ ಭಾವನೆಯಿಂದ ನೊಂದವರ, ಅನಾಥರ, ವೃದ್ಧರ ಸೇವೆ ಮಾಡಿದ್ದರಿಂದ ಅವರು ಜನಸಾಮಾನ್ಯರ ಹೃದಯದಲ್ಲಿದ್ದಾರೆ. ಅವರ ಹೆಸರಿಗೆ ತಕ್ಕಂತೆ ಬಾಳಿನಲ್ಲೂ ಸಾವಿನಲ್ಲೂ ಪುನೀತ್ ಪುನೀತರಾಗಿಯೇ ಹೋಗಿದ್ದಾರೆ. ವಿಜ್ಞಾನದ ಸೂತ್ರಗಳು ಹೇಳುವ ಹಾಗೇ ಪುನೀತರನ್ನು ಒಂದು ಶಕ್ತಿಯೆಂದು ತಿಳಿದುಕೊಂಡರೆ ಅವರು ಎಲ್ಲೂ ಹೋಗಿಲ್ಲ, ಬದಲಾಗಿ ಪಂಚಭೂತಗಳಲ್ಲಿ ರೂಪಾಂತರಗೊಂಡಿದ್ದಾರೆ ಎಂದುಕೊಂಡೆ ನಾವು ಸಮಾಧಾನ ಪಟ್ಟುಕೊಳ್ಳಬಹುದು ಎಂದು ನುಡಿನಮನ ಕಾರ್ಯಕ್ರಮದಲ್ಲಿ ಸ್ವಾಮೀಜಿಗಳು ನುಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಉತ್ತರ ಪ್ರದೇಶ ರಾಜ್ಯದ ಗೌತಮ ಬುದ್ಧ ನಗರ ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಕಳೆದ ತಿಂಗಳು ಜಪಾನಿನ ಟೋಕಿಯೊದಲ್ಲಿ ನಡೆದ ಪ್ಯಾರಾಲಿಂಪಿಕ್ಸ್‌ನ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ವಿಜೇತರಾದ ಸುಹಾಸ್ ಎಲ್. ಯತಿರಾಜ್ ಕಳೆದ ಅಕ್ಟೋಬರ್ ತಿಂಗಳಲ್ಲಿ ಸಹಕುಟುಂಬ ಮಾತನಾಡಿ ಪರಿವಾರದೊಂದಿಗೆ ಪವರ್ ಸ್ಟಾರ್ ಪುನೀತ್ ಅವರನ್ನು ಭೇಟ್ಟಿಯಾಗುವ ಸೌಭಾಗ್ಯ ನನ್ನದಾಗಿತ್ತು.

ಪುನೀತ್ ರಾಜ್‌ಕುಮಾರ್ ಅವರ ಮಾತು ಹಾಗೂ ಅವರ ನಡವಳಿಕೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ನನ್ನದು ಅವರದು ಯಾವುದೋ ಜನ್ಮದ ಸಂಬಂಧವೇ ಸರಿ ಎಂಬ ಭಾವನೆಯಲ್ಲಿ ತೇಲಿ ಹೋಗಿದ್ದೆ, ಇಂತಹ ಗೆಳೆಯನನ್ನು ಕೊಟ್ಟಿದ್ದಕ್ಕೆ ದೇವರೇ ನಿನಗೆ ಧನ್ಯವಾದಗಳು ಎಂದು ಕೈಜೋಡಿಸಿ ವಂದಿಸಿದ್ದೆ ಎಂದರು.

ನಾನು ಟೋಕಿಯೋದಲ್ಲಿ ಇದ್ದಾಗ ಒಲಂಪಿಕ್ಸ್‌ನಲ್ಲಿ ಭಾಗವಹಿಸಿ ಗೆಲುವನ್ನು ಸಾಧಿಸಲು ಪುನೀತ್ ರಾಜ್‌ಕುಮಾರ್ ಅವರ ‘ವಂಶಿ’ ಚಿತ್ರದ

ಭುವನಮ್ ಶರಣಂ ಹಾಡಿನದೇ ಸ್ಫೂರ್ತಿ ಎಂದು ಸ್ಮರಿಸಿದರು. ಅಗಲಿದ ಗೆಳೆಯನಿಗೆ ತಮ್ಮ ಅಂತರಾಳದ ಮಾತುಗಳ ಮೂಲಕ ನುಡಿನಮನ ಹೇಳಿದ್ದು ಹೀಗೆ–

ಪ್ರಿಯ ಅಪ್ಪು, ಜೀವನದ ಪ್ರಯಾಣದಲ್ಲಿ ನನ್ನ ಪ್ರೀತಿಯ ಗೆಳೆಯನಾದ ನಿಮಗೆ ಇಷ್ಟು ಬೇಗ ವಿದಾಯ ಹೇಳುತ್ತೇನೆ ಎಂದು ಕನಸಿನಲ್ಲಿಯೂ ನೆನೆದಿರಲಿಲ್ಲ. ಅಣ್ಣಾವ್ರು ಹೇಳಿದ ಹಾಗೆ "ಆಡಿಸುವಾತ ಬೇಸರ ಮೂಡಿ ಆಟ ಮುಗಿಸಿದ, ಕಂಬನಿ ಧಾರೆ ಹರಿಸಲು ನನ್ನ ಜೀವ ಉಳಿಸಿದ" ಎಂಬ ಗೀತೆ ನೆನಪಾಗುತ್ತಿದೆ. ಕರ್ನಾಟಕ ಸಂಸ್ಕೃತಿಯ ರಾಯಭಾರಿಯಾಗಿ, ಕರುನಾಡ ಜನರ ಕಣ್ಮಣಿಯಾಗಿ, ತಂದೆಗೆ ತಕ್ಕ ಮಗನಾಗಿ, ಕರುಣಾಮಯಿಯಾಗಿ, ಸಹೃದಯಿಯಾಗಿ, ಸರ್ವೋತ್ತಮನಾದ ನಿನಗೆ ವಿಧಿಯು ಅಂತಿಮ ಕಾಲಕ್ಕೆ ಕರೆದೊಯ್ದಿದೆ. ಸ್ವಯಂ ಸಾಧಕರಾದ ನೀವು ಪ್ಯಾರಾಲಿಂಪಿಕ್ಸ್ ಸಾಧನೆಯ ಬಗ್ಗೆ ಆಸಕ್ತಿಯಿಂದ ವಿಚಾರಿಸಿದನ್ನು ನೋಡಿದಾಗ ಆಡು ಮುಟ್ಟದ ಸೊಪ್ಪಿಲ್ಲ ಪುನೀತ್ ರಾಜಕುಮಾರ್ ಆಸಕ್ತಿ ವಹಿಸದ ವಿಚಾರಗಳು ಇಲ್ಲ ಎಂಬ ಭಾವನೆ ನನ್ನ ಮನದಲ್ಲಿ ಮೂಡಿತು.

ಇಷ್ಟು ಸಾಧನೆ ಮಾಡಿ ಹೇಗೆ ಅಷ್ಟು ಸರಳವಾಗಿ ಇರ್ತೀರಾ? ಎಂದು ನಾನು ನಿಮ್ಮನ್ನು ಕೇಳಿದೆ ನೀವು ನಕ್ಕುಬಿಟ್ಟಿರಿ, ಆ ನಗುವೇ ಈಗ ನೆನಪಾಗಿದೆ. ಕರುನಾಡ ಸಿರಿನುಡಿಯ ನಂದಾದೀಪವಾಗಿ ನೀ ಎಂದೆಂದೂ ಬೆಳಗಲಿ ಎಂದು ಕನ್ನಡದ ಕೋಟ್ಯಾನುಕೋಟಿ ಅಭಿಮಾನಿಗಳು ಪ್ರಾರ್ಥಿಸಿದ್ದಾರೆ.

ನೀವು ಆಡಿದ ಮಾತೇ ನೆನಪಾಗಿದೆ. ಆ ನಗುವೇ ಕಣ್ಣಲ್ಲಿ ತುಂಬಿಕೊಂಡಿತ್ತು. ನಿನ್ನ ನುಡಿಯನ್ನು ನಿನ್ನ ನಗುವನ್ನು ಹೃದಯದ ಒಂದು ಮೂಲೆಯಲ್ಲಿ ಬಚ್ಚಿಟ್ಟುಕೊಂಡು ಕಾಪಾಡುವೆ. ನಿನ್ನ ಒಲವನ್ನು ನಿನ್ನ ಗುಣವನ್ನು ಪ್ರತಿದಿನವು ನೆನೆದು ನಲಿದಾಡುವೆ.

"ನೀ ಹೋಗಿ ಬಾ ಗೆಳೆಯ" ಎಂದು ಹೇಳುವಾಗ ಭಾವುಕರಾಗಿದ್ದನ್ನು ಕಂಡು ನೆರೆದವರು ಮನದಲ್ಲಿಯೇ ಮರುಗುವಂತ ವಾತಾವರಣ ನಿರ್ಮಾಣವಾಗಿತ್ತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನವದೆಹಲಿಯ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮಂಡಳಿ ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷರಾದ ಡಾ. ಎಂ.ಕೆ. ರಮೇಶ್ ಮಾತನಾಡಿ ಪುನೀತ್ ಅವರ ನಿಧನಕ್ಕೆ ಮಿಡಿದು ಬಂದ ಸಾರ್ವತ್ರಿಕ ಶೋಕ ಈ ಹಿಂದೆ ತನ್ನ 36ನೇಯ ವಯಸ್ಸಿನಲ್ಲಿ ಮರಣ ಹೊಂದಿದ್ದ ಕನ್ನಡದ ಖ್ಯಾತ ನಟ, ನಿರ್ದೇಶಕ ದಿವಂಗತ ಶಂಕರನಾಗ್ ಅವರ ಅಗಲಿಕೆಯನ್ನು ನೆನಪಿಸುತ್ತದೆ. ಎಲ್ಲ ವಯೋಮಾನದ ಅಭಿಮಾನಿಗಳ ಬಳಗ ಹೊಂದಿದ್ದವರು ಪುನೀತ್ ರಾಜಕುಮಾರ್. ಆವರು ಸಮಾಜಮುಖಿಯಾಗಿದ್ದರು. ದೈಹಿಕವಾಗಿ ಅಷ್ಟು ಗಟ್ಟಿಯಾಗಿದ್ದರೂ ಸಹ 46 ಮರಣದ ವಯಸಲ್ಲ. ಹಾಗಾಗಿ ಜನರಿಗೆ, ಅಭಿಮಾನಿಗಳಿಗೆ ಪುನೀತ್ ಅವರ ಈ ಆಕಸ್ಮಿಕ ಸಾವನ್ನು ಅರಗಿಸಿಕೊಳ್ಳುವ ಧೈರ್ಯ ಸಿಗಲಿ, ಪುನೀತ್ ಅವರು ಮತ್ತೊಮ್ಮೆ ಈ ನಮ್ಮ ಕನ್ನಡ ನಾಡಿನಲ್ಲಿ ಹುಟ್ಟಿ ಬರಲಿ ಎಂದು ಆಶಿಸಿ ತಮ್ಮ ದುಃಖ ವ್ಯಕ್ತಪಡಿಸಿದರು.









ಕನ್ನಡದ ಖ್ಯಾತ ಚಲನಚಿತ್ರ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಮಾತನಾಡಿ ಪುನೀತ್ ಅವರ ಸಾವಿಗೆ ರಾಷ್ಟ್ರೀಯ ಮಾಧ್ಯಮಗಳು ಸೇರಿ, ಗೂಗಲ್, ಮತ್ತು ಅಂತರರಾಷ್ಟ್ರೀಯ ಬಿಬಿಸಿ ಸುದ್ದಿ ಸಂಸ್ಥೆಗಳು ಕೂಡ ಕಂಬನಿ ಮಿಡಿದಿವೆ. ಇದು ಅವರ ಪ್ರಸಿದ್ಧಿ ಮತ್ತು ಸರಳತನಕ್ಕೆ ಹಿಡಿದ ಕೈಗನ್ನಡಿ. ಲಕ್ಷಾಂತರ ಜನ ಬೆಳಗಾವಿ, ಹುಬ್ಬಳ್ಳಿ, ಕಲ್ಬುರ್ಗಿಗಳಿಂದ ಸ್ವತಃ ಬಸ್ಸುಗಳ ಮೂಲಕ ಬೆಂಗಳೂರಿಗೆ ಹೋಗಿ ಪುನೀತ್ ಅವರ ಅಂತಿಮ ದರ್ಶನ ಪಡೆದಿದ್ದಾರೆ. ಹೊರಭಾಷೆ ಚಲನಚಿತ್ರಗಳಿಗೆ ಸೆಡ್ಡು ಹೊಡೆದು ನಿಲ್ಲುತ್ತಿದ್ದ ಪುನೀತ್ ಅವರ ಚಿತ್ರಕಥೆಗಳನ್ನು ನಾವು ಕಳೆದುಕೊಂಡಿದ್ದೇವೆ ಎಂದು ದುಃಖ ವ್ಯಕ್ತಪಡಿಸಿದರು.

ಹಿರಿಯ ಕನ್ನಡಿಗ ಬಸವರಾಜ್ ಕಲ್ಲೂರು, ವೈದ್ಯರಾದ ಡಾ. ಗುರುರಾಜ್ ಸಂಗೊಂದಿ ಮಠ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಚಂದ್ರಶೇಖರ ಎನ್.ಪಿ. ಮತ್ತಿತರ ದೆಹಲಿ ಕನ್ನಡಿಗರು ನುಡಿನಮನ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ನುಡಿನಮನ ಕಾರ್ಯಕ್ರಮವನ್ನು ನಿರೂಪಿಸಿದರು. ಬಳಿಕ ನಡೆದ ಬೆಂಗಳೂರಿನ ನರ್ತನ ಯೋಗ ಫೌಂಡೇಶನ್ ಕಲಾ ತಂಡ ಮತ್ತು ಕಲಾ ಸ್ನೇಹಿ ಟ್ರಸ್ಟ್ ತಂಡದ ಕಲಾವಿದರಿಂದ ಸಮೂಹ ನೃತ್ಯ ಮತ್ತು ಸುಗಮ ಸಂಗೀತ ಕಾರ್ಯಕ್ರಮವನ್ನು ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ಅರ್ಪಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ನಿರೂಪಿಸಿದರು.

***ಯಲ್ಲಾಲಿಂಗ ಕೊಪ್ಪದ***

**ಸಾಧನೆ-ಅಭಿನಂದನೆ**

# ಕಾರಂತರಿಗೆ ನಮನ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಕೆ. ಶಿವರಾಮ ಕಾರಂತರ 119ನೇ ಜನ್ಮದಿನದ ಪ್ರಯುಕ್ತ ಅಂತರ್ಜಾಲದ ಮೂಲಕ 'ಕಾರಂತರಿಗೆ ನಮನ' ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಕಾರ್ಯಕ್ರಮದಲ್ಲಿ ಕಾರಂತರ ಶಿಶುಗೀತೆಗಳು– ಪ್ರತಿಮೇಶ್, ಮೊಹಮ್ಮದ್ ಸಾಹಿಲ್, ಕಾರಂತಜ್ಜ ಹೇಳಿದ ಕತೆ–ಕುಮಾರಿ ನಂದಿತಾ ಉಭಾಳೆ, ಕಾರಂತರ ನುಡಿಮುತ್ತುಗಳು–ಕೀರ್ತನ್ ಪಿ., ಕಾರಂತರ ಚಿಂತನೆಗಳು–ಕಾವ್ಯಾಂಶ್, ನಾನು ಮೆಚ್ಚಿದ ಕಾರಂತರ ಕೃತಿ–ಶ್ರೀಮತಿ ಎಂ. ಎಸ್. ಲಾವಣ್ಯ, ಕಾರಂತರ ಬದುಕು– ಹೀಗೆ ಬರಹಗಳ ಕುರಿತಾದ ಒಂದಿಷ್ಟು ವಿಚಾರಗಳನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶಾಲಾ ಗೌರವ ವ್ಯವಸ್ಥಾಪಕರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಮಾತನಾಡಿ ಕಾರಂತರ ಕುತೂಹಲ, ಛಲ, ತೆರೆದ ಮನಸ್ಸು ಕನ್ನಡ ಸಾಹಿತ್ಯಕ್ಕೆ ವರವಾಯಿತು. ಕಾರಂತರ ಸಾಹಿತ್ಯ ಅಥವಾ ಇನ್ನಿತರ ಚಟುವಟಿಕೆಗಳಲ್ಲಿ ಮಾನವೀಯ ಮುಖವನ್ನು ಕಾಣುತ್ತೇವೆ. ಮಕ್ಕಳ ಮನಸ್ಸನ್ನು ಸೂಕ್ಷ್ಮವಾಗಿ ಅರಿತಿದ್ದರಿಂದಲೇ ಮಕ್ಕಳಿಗೆ ಅವರು ಪ್ರೀತಿಯ ಕಾರಂತಜ್ಜರಾದರು. ಈ ನೆಲೆಯಲ್ಲಿ ಕಾರಂತರ ಜೊತೆಗೆ ಕನ್ನಡದ ಮಹನೀಯ ಕವಿ ಸಾಹಿತಿಗಳ ಬದುಕು ಬರಹಗಳನ್ನು ಇಂತಹ ಕಾರ್ಯಕ್ರಮಗಳ ಮೂಲಕ ತಿಳಿಯುತ್ತಿರುವುದು ಅನುಕರಣೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಚಂದ್ರಶೇಖರ ಎನ್.ಪಿ. ಅವರು ಕನ್ನಡದ ಕ್ರಿಯಾಶೀಲ ಬರಹಗಾರರಲ್ಲಿ ಕಾರಂತರು ಅಗ್ರಮಾನ್ಯರು. ಸಾಹಿತ್ಯ, ಪರಿಸರ, ವಿಜ್ಞಾನ, ಕಲೆ, ಶಿಕ್ಷಣ, ರಾಜಕೀಯ ಹೀಗೆ ಕಾರಂತರು ಪ್ರವೇಶಿಸದ ರಂಗವೇ ಇಲ್ಲವೆನ್ನಬಹುದು. ಕಾರಂತರ ಲೋಕದೃಷ್ಟಿಯೇ ಅಸಾಧಾರಣವಾದದ್ದು. ತನ್ನ ಬದುಕನ್ನೇ ಬರಹವನ್ನಾಗಿಸಿದ ವಾಸ್ತವವಾದಿ. ಕಾರಂತರನ್ನು ಮತ್ತೆಮತ್ತೆ ಓದಿ ತಿಳಿಯುವ ಮೂಲಕ ಅವರಿಗೆ ನಮನಗಳನ್ನು ಸಲ್ಲಿಸೋಣ ಎಂದರು.

ಸಂಸ್ಥೆಯ ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಆಡಳಿತ ಮಂಡಳಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಜಯಶ್ರೀ ಬಸವರಾಜ್ ಉಪಸ್ಥಿತರಿದ್ದರು. ಶಾಲಾ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಕನ್ನಡ ಶಿಕ್ಷಕರಾದ ಅರವಿಂದ ಬಿಜೈ ವಂದಿಸಿದರು. ವಿದ್ಯಾರ್ಥಿನಿ ಕುಮಾರಿ ಆಶಾ ಕಾರ್ಯಕ್ರಮ ನಿರೂಪಿಸಿದರು.■

*ಅರವಿಂದ ಬಿಜೈ*

## ಕಾರಂತರಿಗೆ ನಮನ

**ಕಡಲು ಭೋರ್ಗರೆದಂತೆ ಭೋರ್ಗರೆದ ಭಾರ್ಗವ,**
**ಗೆಜ್ಜೆಗಳ ನಾದವಿಲ್ಲದೆ ಎಲ್ಲವೂ ನೀರವ**
**ನುಡಿದಂತೆ ಬದುಕಲ್ಲಿ ನಡೆದ ಭವ್ಯ ಚೇತನ,**
**ಶಬ್ದಗಳ ಮೂಲಕ ಇದೋ ಮಾಡುವೆವು ನಮನ**

**ವಿನಾಶದಂಚಿನಲೂ, ಬದುಕಿನ**
**ಭರವಸೆಯ ಅರಸ ಬೇಕೆನ್ನುವ ತತ್ವ ಜೀವನ**
**ಸಂಪ್ರದಾಯದ ಕೋಟೆಗಳ ಮುರಿದ ಪ್ರಚಂಡ, ಅಖಂಡ,**
**ವಿಚಾರವಾದ**
**ಭಿನ್ನ ವಿಭಿನ್ನ ನಿರ್ಭೀತ ಆತ,**
**ಯಾರಿಗೂ ಬೆದರದೇ ಬದುಕಬೇಕೆಂದಾತ**

**ಕಡಲತಡಿ ನೆಲದಡಿ ಎಟುಕದ ಸಾಗರ.**
**ಕಾಲ್ಗೆಜ್ಜೆ ತಕಧಿಮಿ, ನೀ ಎಲ್ಲ ಕಲೆಯ ಆಗರ**
**ಮಕ್ಕಳ ಚಿತ್ತಾರ, ದುಡಿಯ ಚಿತ್ತಾರ**
**ಅಳದ ಮೇಲೆ ಏನಿಲ್ಲ, ಮೂಕಜ್ಜಿಯ ಕನಸು**
**ಬೆಟ್ಟದಜೀವ, ಮರಳಿಮಣ್ಣಿಗೆ, ಔದಾರ್ಯದ ಉರುಳಲ್ಲಿ**
**ಜ್ಞಾನಪೀಠ, ಸಾಹಿತ್ಯ ಪರಿಷದ್, ಸಂಗೀತ, ನಾಟಕ, ಸಂತ ತುಳಸಿ**
**ಸನ್ಮಾನ**
**ಮೌನ, ಕೋಪ, ನಿರಂತರ ಯೋಚನೆ, ಗಂಭೀರ ಬಿಗುಮಾನ,**
**ಯಕ್ಷಕಿನ್ನರ, ಕಾದಂಬರಿ, ನಾಟಕ, ಚಿತ್ರ ಏನು ಎಲ್ಲ ಏನಿಲ್ಲ**
**ಸಾಮಾಜಿಕ ಪ್ರಾಕೃತಿಕ ಕಳಕಳ, ಹಳ್ಳಹಳ್ಳ ಉದ್ಧಾರ**
**ಹೊಸ ಶಿಕ್ಷಣ ಪದ್ಧತಿ ಬಿಡಲಿಲ್ಲ**

**ಬಸರಿಕಟ್ಟೆ ಬೂದಿ ಕಟ್ಟೆಯ ನಡುವೆ ಬಾಳನ ಕಟ್ಟಿ**
**ಓಡಾಡಿಕೊಂಡಿರುವೆ**
**"ಸಾವಿಗೇ ಅಂಜದವ ಬದುಕಿಗೆ ಹೆದರದವ ಆತನೇ ಬದುಕಬಲ್ಲವ"**
**ಎಂದೆಲ್ಲಾ ಹೇಳದವ ಇನ್ನಾರು ಬೇರಾರು**
**ಅವರೇ ನಮ್ಮ ಪ್ರೀತಿಯ ಕಾರಂತರು, ಖಾರಂತರು**

*ಪ್ರೇಮಲತಾ ಬಿ*

## ದೆಹಲಿ ಗುರುಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ "ಪರೀಕ್ಷಾ ನಿಯಂತ್ರಕ"ರಾಗಿ ಡಾ. ಎಸ್.ಎಲ್. ಭಂಡಾರಕರ್ ನೇಮಕ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಹಾಗೂ ಶಿಕ್ಷಣ ತಜ್ಞರೂ ಆಗಿರುವ ದೆಹಲಿ ಕನ್ನಡಿಗರಾದ ಡಾ. ಎಸ್.ಎಲ್. ಭಂಡಾರ್‌ಕರ್ ಅವರು ದೆಹಲಿಯ ಪ್ರತಿಷ್ಠಿತ ಗುರುಗೋವಿಂದ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರಾಗಿ (ಮೌಲ್ಯಮಾಪನದ ಕುಲ ಸಚಿವರು) ನೇಮಕಗೊಂಡಿದ್ದಾರೆ. ದೆಹಲಿ ದ್ವಾರಕಾದಲ್ಲಿರುವ ಗುರುಗೋವಿಂದ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯವು ದೆಹಲಿಯ ಸರ್ಕಾರದ ಏಕಮಾತ್ರ ಅಫಿಲಿಯೇಟೆಡ್ ವಿಶ್ವವಿದ್ಯಾಲಯವಾಗಿದೆ. ಇವರು ದೆಹಲಿ ಸರ್ಕಾರದ ತಾಂತ್ರಿಕ ಶಿಕ್ಷಣ ಮಂಡಳಿಯ ಪರೀಕ್ಷಾ ನಿಯಂತ್ರಕರಾಗಿಯೂ, ದೆಹಲಿ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಏಳು ವರ್ಷಗಳವರೆಗೆ ಉಪ ನಿರ್ದೇಶಕರಾಗಿ ಹಾಗೂ 2010 ರಿಂದ 2012ರವರೆಗೆ ಕಲಬುರಗಿಯಲ್ಲಿನ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಪ್ರಥಮ ಉಪ ಕುಲಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿಯ ಪೂಸಾ ಇನ್‌ಸ್ಟಿಟ್ಯೂಟ್‌ನಲ್ಲಿ ಸಹ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು ಅಟೋಮೊಬೈಲ್ ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಪುಸ್ತಕ ಮತ್ತು ಲೇಖನಗಳನ್ನು ಬರೆದಿದ್ದಾರೆ. ಡಾ. ಎಸ್.ಎಲ್. ಭಂಡಾರ್‌ಕರ್ ಅವರು ಕೂಟ ರತ್ನ, ಅತ್ಯುತ್ತಮ ಶಿಕ್ಷಕ, ಶಿಕ್ಷಣ ರತ್ನ ಹಾಗೂ ದೆಹಲಿ ಕರ್ನಾಟಕ ಸಂಘ ಕೊಡಮಾಡುವ ವಿಶಿಷ್ಟ ಕನ್ನಡಿಗ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.■

*ಸವಿತಾ ಇನಾಮದಾರ್*

# ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಎಸ್.ಎಂ. ಕಂಟೀಕರ್ ಅವರಿಗೆ ಅಭಿನಂದನೆ



ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾಗಿರುವ ಹಾಗೂ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಡಾ. ಸಿದ್ದರಾಮೇಶ್ವರ ಎಂ. ಕಂಟೀಕರ್ ಅವರು ಹೊರನಾಡು ಕನ್ನಡಿಗರ ವಿಭಾಗದಡಿಯಲ್ಲಿ ಈ ಬಾರಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ವೃತ್ತಿಯಲ್ಲಿ ವೈದ್ಯರು ಹಾಗೂ ಕಾನೂನು ಪದವೀಧರರು ಆಗಿರುವ ಡಾ. ಕಂಟೀಕರ್ ಅವರು ಈ ಮೊದಲು ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರಿಗೆ ದೆಹಲಿ ಕರ್ನಾಟಕ ಸಂಘದ ಹಾಗೂ ಸಮಸ್ತ ಹೊರನಾಡು ಕನ್ನಡಿಗರ ಪರವಾಗಿ ಅಭಿನಂದನೆಗಳು.

# ಬಿಂದಿಯಾ ಶೆಟ್ಟಿ ಅವರಿಗೆ ಅಭಿನಂದನೆ



ಪ್ರತಿಭಾನ್ವಿತ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್) ಯಡಿಯಲ್ಲಿ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿ ಮಾನ್ಯ ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸಿದ ಕುಮಾರಿ ಬಿಂದಿಯಾ ಎಲ್. ಶೆಟ್ಟಿ ಅವರನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಅಭಿನಂದಿಸಲಾಯಿತು.

ಅಭಿನಂದನೆ ಸಲ್ಲಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ರಾಷ್ಟ್ರಪ್ರಶಸ್ತಿ ಪುರಸ್ಕೃತೆ ಬಿಂದಿಯಾ ಎಲ್. ಶೆಟ್ಟಿ ಅವರು ಅಧ್ಯಯನದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಮಾಜಸೇವೆಗೂ ಆದ್ಯತೆ ನೀಡುವ ಇವರು ಇಂದಿನ ಯುವ ತಲೆಮಾರಿಗೆ ಮಾದರಿ ಹಾಗೂ ಆದರ್ಶವಾಗಿದ್ದಾರೆ ಎಂದರು.

ಪ್ರಸ್ತುತ ಸುರತ್ಕಲ್ ಗೋವಿಂದದಾಸ್ ಕಾಲೇಜಿನ ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿನಿಯಾಗಿದ್ದು, ಜೊತೆಗೆ ಸಿಎ ವ್ಯಾಸಂಗವನ್ನೂ ಮಾಡುತ್ತಿರುವ ಬಿಂದಿಯಾ ಎಲ್. ಶೆಟ್ಟಿ ಅವರು ತುಳುನಾಡಿನ ವೀರ ಅಗೋಳಿ ಮಂಜಣ್ಣ ಮನೆತನದ ಕಟ್ಲ ಲೀಲಾಧರ ಶೆಟ್ಟಿ ಹಾಗೂ ಸುಜಾತ ಶೆಟ್ಟಿ ದಂಪತಿಯ ಪುತ್ರಿ. ಅವರು ಹತ್ತನೇ ತರಗತಿಯಲ್ಲಿ ರಾಜ್ಯಕ್ಕೆ 6ನೇ ಸ್ಥಾನ ಹಾಗೂ ಪಿ.ಯು.ಸಿ.ಯಲ್ಲಿ ರಾಜ್ಯಕ್ಕೆ 5ನೇ ಸ್ಥಾನ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿನಿ. ಬಾಲ್ಯದಲ್ಲಿಯೇ ಭಾಷಣ, ನೃತ್ಯ, ನಾಟಕ ಮುಂತಾದ ಕಲೆಗಳಲ್ಲಿ ಪರಿಣತಿ ಪಡೆದ ಇವರು 'ಮಾನಿಷಾದ' ಯಕ್ಷಗಾನ ಪ್ರಸಂಗದಲ್ಲಿ ಸೀತೆಯ ಪಾತ್ರದಲ್ಲಿ ಮಿಂಚಿದ ಇವರು ದೇಶವಿದೇಶಗಳಲ್ಲಿಯೂ ಯಕ್ಷಗಾನವನ್ನು ಪ್ರದರ್ಶಿಸಿದವರು. ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ಯಕ್ಷಗಾನವನ್ನು ಪ್ರದರ್ಶಿಸಿದ ಖ್ಯಾತಿ ಇವರದ್ದಾಗಿದೆ.2019ರಲ್ಲಿ ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದರು. ಜಾರ್ಖಂಡ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಯೋಜನಾ ಶಿಬಿರದಲ್ಲೂ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಟಿ.ಎಂ. ಮೈಲಾರಪ್ಪ, ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿ ಕುಮಾರ್, ಗೌರವ ಖಜಾಂಚಿ ಟಿ. ಪಿ. ಬೆಳ್ಳಿಯಪ್ಪ, ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಉಪಸ್ಥಿತರಿದ್ದರು.

**ಅರವಿಂದ ಬಿಜೈ**

## ಸುದ್ದಿ ಸ್ವಾರಸ್ಯ

# ಸಂಘದಲ್ಲಿ ಗಣೇಶೋತ್ಸವ

ದೆಹಲಿ ಕರ್ನಾಟಕ ಸಂಘದಲ್ಲಿ ಗಣೇಶ ಸಾಂಸ್ಕೃತಿಕ ಉತ್ಸವವನ್ನು ದಿನಾಂಕ 10.09.2021 ರಂದು ಆಚರಿಸಲಾಯಿತು. ಬೆಳಗ್ಗಿನ ಗಣೇಶ ಪ್ರತಿಷ್ಠಾಪನಾ ಪೂಜೆಯನ್ನು ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮತ್ತು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ನಡೆಸಿಕೊಟ್ಟರು. ವಿಸರ್ಜನಾ ಕಾರ್ಯಕ್ರಮ ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ. ಅವರು ಮುತುವರ್ಜಿ ವಹಿಸಿ ನಡೆಸಿಕೊಟ್ಟರು. ಕೊರೊನಾ ಕಾರಣದಿಂದ ಈ ಬಾರಿ ಉತ್ಸವವನ್ನು ಸರಳವಾಗಿ ಆಚರಿಸಲಾಯಿತು.





# 'ಶರೀಫರ ಗಣಪ' 31 ನೇ ಗಣೇಶೋತ್ಸವ

ದಿನಾಂಕ 10.09.2021 ರಂದು ಗಣೇಶ ಚತುರ್ಥಿ ಅಂಗವಾಗಿ ದೆಹಲಿಯ ಸರ್.ಎಂ. ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣದ ಬದಿಯಲ್ಲಿರುವ ಅರಳಿಕಟ್ಟೆಯಲ್ಲಿ ಗಣೇಶ ಸ್ಥಾಪನೆ ಮತ್ತು ಸಂಪ್ರಾದಾಯಿಕ ಪೂಜೆಯನ್ನು ಶ್ರೀಹರಿಯವರು ಮುಂದೆ ನಿಂತು ನೆರವೇರಿಸುವಲ್ಲಿ ಶ್ರದ್ಧಾ ಭಕ್ತಿ ತೋರಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಗಣೇಶ ಮಿತ್ರ ಮಂಡಳಿ ಅಧ್ಯಕ್ಷ ಉಸ್ಮಾನ್ ಅಬ್ದುಲ್ ಶರೀಫ್, ದೆಹಲಿ ಕನ್ನಡಿಗರಾದ ಬಿ. ನಾರಾಯಣ, ಅಶೋಕ್ ಕುಮಾರ್, ಹರಿಪ್ರಿಯ ಎಸ್., ಶಿವಪ್ಪ ಎಂ., ಕಾಶೀನಾಥ್ ಬಿರಾದಾರ, ಕೃಷ್ಣರಾಜ್ ಕೆ.ಎನ್. ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಳೆದ 31 ವರ್ಷಗಳಿಂದ ದೆಹಲಿಯ ಶ್ರೀ ಗಣೇಶ ಮಿತ್ರ ಮಂಡಳಿಯ ಗೆಳೆಯರು ಗಣೇಶ ಚತುರ್ಥಿಯ ದಿನ ಪೂಜೆಯನ್ನು ನಡೆಸುತ್ತಾ ಶ್ರೀ ವಿನಾಯಕನ ಕೃಪೆಗೆ ಪಾತ್ರರಾಗುತ್ತಿದ್ದಾರೆ.

*ಹರಿಪ್ರಿಯ ಎಸ್*



# ಗುರುಗಾಂವ್ ಕನ್ನಡ ಸಂಘದಲ್ಲಿ ಗಣೇಶೋತ್ಸವ





ಈ ವರ್ಷ ಗುರುಗಾಂವ್ ಕನ್ನಡ ಸಂಘ ಗಣೇಶ ಚತುರ್ಥಿಯನ್ನು ಸರಳ ಸಂಭ್ರಮ ಮತ್ತು ಸಂತೋಷದಿಂದ ಆಚರಿಸಿತು. ಕಳೆದ ವರ್ಷ ಕರೋನ ಸಂಕ್ರಮಣದಿಂದ ಗಣೇಶ ಚತುರ್ಥಿಯನ್ನು ಆಚರಿಸಲು ಸಾಧ್ಯವಾಗಿರಲಿಲ್ಲ. ಗಣೇಶ ಆಚರಣೆ ಬಗ್ಗೆ ನಿರ್ಣಯ ತೆಗೆದುಕೊಂಡು ಅದಕ್ಕೆ ವ್ಯವಸ್ಥಿತ ತಯಾರಿ ಮಾಡಿಕೊಂಡು ಕರೋನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿಕೊಂಡು ಸ್ಥಳೀಯ ಆಡಳಿತ ಯಂತ್ರದಿಂದ ಅಗತ್ಯವಾದ ಅನುಮತಿ ಪಡೆದುಕೊಂಡು ಸೆಪ್ಟೆಂಬರ್ 10ನೇ ತಾರೀಖಿನಂದು ನ್ಯೂ ಕಾಲೋನಿಯ ಶ್ರೀ ರಾಧ ಕೃಷ್ಣ ದೇವಾಲಯದಲ್ಲಿ ಮೂರ್ತಿಯನ್ನು ಭಕ್ತಿಯಿಂದ ಪ್ರತಿಷ್ಠಾಪಿಸಲಾಯಿತು.

ಗಣೇಶ ಪ್ರತಿಷ್ಠಾಪನೆಯಿಂದ ಹಿಡಿದು ಗಣೇಶ ವಿಸರ್ಜನೆವರೆಗೂ, ತುಂತುರು ಜಿನಿ ಜಿನಿ ಮಳೆಯು ನಮ್ಮನ್ನು ಸ್ವಾಗತ ಮಾಡುತ್ತಾ ವಾತವಾರಣವನ್ನು ಆಹ್ಲಾದಕರವಾಗಿ ಮಾಡಿತ್ತು. ಶುಕ್ರವಾರದ ಪ್ರತಿಷ್ಠಾಪನೆ ಪೂಜೆಯಿಂದ ಹಿಡಿದು ಭಾನುವಾರ ಸೆಕ್ಟರ್ 09 ಕೆರೆಯಲ್ಲಿ ವಿಸರ್ಜನೆ ಮಾಡುವವರಿಗೆ ಪೂಜೆಯ ಬೆಳಗ್ಗೆ ಮತ್ತು ಸಾಯಂಕಾಲದವರಿಗೆ ಗಣೇಶನ ಜೈ ಜೈ ಕಾರಗಳ ಮಧ್ಯೆ ಭಕ್ತಿ ಪರವಶೆಯಲ್ಲಿ ಸುಸಂಪನ್ನವಾಗಿ ನೆರವೇರಿತು. ಈ ಭಕ್ತಿಮಯ ಆಚರಣೆಯಲ್ಲಿ ಸುಮಾರು 400 ಕನ್ನಡಿಗರು ಭಾಗವಹಿಸಿ ಶ್ರೀ ಗಣೇಶನ ಹತ್ತಿರ ಪ್ರಾರ್ಥನೆ ಸಲ್ಲಿಸಿ ತಮ್ಮ ಕೋರಿಕೆಗಳನ್ನು ಕೋರಿಕೊಂಡರು. ಶ್ರೀ ಗಣೇಶನು ಭಕ್ತರ ಕೋರಿಕೆಗಳನ್ನು ನೆರವೇರಿಸಬೇಕೆಂದು ನಮ್ಮ ಪ್ರಾರ್ಥನೆ. ಶ್ರೀ ಗಣೇಶನ ಚತುರ್ಥಿಯಲ್ಲಿ ಸ್ಥಳಿಯರು ಕೂಡ ಭಾಗವಹಿಸಿದ್ದರು.

ನಮ್ಮ ಜೊತೆ ಗಣೇಶ ಚತುರ್ಥಿ ಆಚರಣೆಯಲ್ಲಿ ದೆಹಲಿಯ ಡಾ. ಎಂ.ಎಸ್. ಶಶಿ ಕುಮಾರ್, ಸಿ.ಎಂ. ನಾಗರಾಜ ಪರಿವಾರ, ಎನ್.ಪಿ. ಚಂದ್ರಶೇಖರ, ಶ್ರೀಮತಿ ಆಶಾಲತಾ ಪರಿವಾರ ಮತ್ತು ಡಾ. ವೆಂಕಟಾಚಲ ಹೆಗಡೆ, ಡಾ. ಅವನೀಂದ್ರನಾಥ್ ರಾವ್ ಇನ್ನೂ ಅನೇಕರು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ನಾವು ಒಂದು ತಂಡವನ್ನು ಶ್ಲಾಘನೆ ಮಾಡಬೇಕು. ಅದುವೆ ಅಡುಗೆ ತಂಡ ಗೋಪಾಲ ತಳವಾರ, ರಮೇಶ ನೇತೃತ್ವದಲ್ಲಿ ಲಕ್ಷ್ಮಣ ಕಟ್ಟಿಮನಿ, ಗಿರೀಶ ಕುಲಕರ್ಣಿ, ಸಿದ್ದು ಸಾಹುಕಾರ, ರಾಜೇಂದ್ರ ಐನಾಪೂರ ಎಲ್ಲಾ ಕನ್ನಡಿಗರಿಗೆ ರುಚಿ ಶುಚಿಯಾದ ಅಡುಗೆ ಮಾಡಿ ಬಡಿಸಿ ಶ್ರೀ ಗಣೇಶನ ಕೃಪೆಗೆ ಪಾತ್ರರಾದರು.

ಕೊರೊನಾದ ಭಯಭೀತಿಯ ಮಧ್ಯೆ ಗಣೇಶ ಚತುರ್ಥಿಯನ್ನು ಯಶಸ್ವಿಯಾಗಿ ಮಾಡಿದ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶಾಂತಕುಮಾರ ನಿಂಬಾಳ, ಪ್ರಧಾನ ಕಾರ್ಯದರ್ಶಿ ಸಂತೋಷ ಗೌಡ ಮತ್ತು ಖಜಾಂಚಿ ಮರಿಬಸಪ್ಪ ಹಾಗು ಸಮಸ್ತ ಪದಾಧಿಕಾರಿಗಳು ಅಭಿನಂದನಾರ್ಹರು. □

*ಚಂದ್ರಶೇಖರ ಜೋಳದರಾಶಿ*

# ದೆಹಲಿ ಕನ್ನಡ ವಿದ್ಯಾ ಸಂಸ್ಥೆಯಲ್ಲಿ ಗಣೇಶ ಚತುರ್ಥಿ



ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ 'ಗಣೇಶ ಚತುರ್ಥಿ' ಹಬ್ಬವನ್ನು ದಿನಾಂಕ 10-09-2021ರಂದು ಭಕ್ತಿ ಪೂರ್ವಕವಾಗಿ ಹಾಗೂ ಸರಳವಾಗಿ ಆಚರಿಸಲಾಯಿತು.

ಜ್ಞಾನ, ಆಸೆ, ಯಶಸ್ಸುಗಳನ್ನು ನೆರವೇರಿಸುವ ಅಧಿಪತಿಯಾದ ಗಣಪನಿಗೆ ಸಂಸ್ಥೆಯ ಸಂಸ್ಕೃತ ಶಿಕ್ಷಕರು, ಪಂಡಿತರೂ ಆದ ಗಣೇಶ ಹೆಗಡೆ ಅವರ ಪೌರೋಹಿತ್ಯದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿ ಕುಮಾರ್, ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ಸಿ.ಎಂ. ನಾಗರಾಜ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಶ್ರದ್ಧಾಭಕ್ತಿಯ ಈ ಆಚರಣೆಯಲ್ಲಿ ಸಂಸ್ಥೆಯ ಶಿಕ್ಷಕ, ಶಿಕ್ಷಕೇತರ ವೃಂದದವರು ಪಾಲ್ಗೊಂಡು ಶ್ರೀ ವಿನಾಯಕನ ಕೃಪೆಗೆ ಪಾತ್ರರಾದರು. ಬಳಿಕ ಸೂರ್ಯಾಸ್ತದ ಸಮಯದಲ್ಲಿ ಪೂಜಾ ವಿಧಿವಿಧಾನಗಳನ್ನು ಪಡೆದ ಗಣಪನನ್ನು ಶಾಲಾ ಆವರಣದಲ್ಲಿಯೇ ವಿಸರ್ಜನೆ ಮಾಡಲಾಯಿತು. □

*ಅರವಿಂದ ಬಿಜೈ*

# "ಕನ್ನಡವನ್ನು ಅಕ್ಷರ ರೂಪದಲ್ಲಿ ಕಲಿಸುವ ದೆಹಲಿ ಕನ್ನಡ ಶಾಲೆ ಹಾಗೂ ಸಂಸ್ಕೃತಿ, ಕಲೆಗಳನ್ನು ಪ್ರತಿನಿಧಿಸುವ ದೆಹಲಿ ಕರ್ನಾಟಕ ಸಂಘ ಹೊರನಾಡ ಕನ್ನಡಿಗರ ಅಸ್ಮಿತೆಗಳು"





"ಕನ್ನಡವನ್ನು ಅಕ್ಷರ ರೂಪದಲ್ಲಿ ಕಲಿಸುವ ದೆಹಲಿ ಕನ್ನಡ ಶಾಲೆ ಹಾಗೂ ಸಂಸ್ಕೃತಿ, ಕಲೆಗಳನ್ನು ಪ್ರತಿನಿಧಿಸುವ ದೆಹಲಿ ಕರ್ನಾಟಕ ಸಂಘ ಎರಡೂ ಹೊರನಾಡ ಕನ್ನಡಿಗರ ಅಸ್ಮಿತೆಗಳು" ಎಂದು ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಎನ್.ಪಿ. ಹೇಳಿದರು. 1961ರಲ್ಲಿ ವಿಜಯದಶಮಿಯ ಶುಭದಿನದಂದು ಆರಂಭಗೊಂಡ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಗೆ 60 ಸಂವತ್ಸರಗಳು ತುಂಬಿದ ಹಿನ್ನೆಲೆಯಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸಂಸ್ಥಾಪನಾ ದಿನಾಚರಣೆಯನ್ನು ದಿನಾಂಕ 15.10.2021 ರಂದು ವಿಜಯದಶಮಿಯ ದಿನ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ದೀಪ ಪ್ರಜ್ವಲನಗೊಳಿಸಿ, ಕನ್ನಡ ತಾಯಿ ಭುವನೇಶ್ವರಿಗೆ ಮತ್ತು ಸಂಸ್ಥಾಪಕ ಅಧ್ಯಕ್ಷರಾದ ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆರಂಭಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಚಂದ್ರಶೇಖರ ಅವರು ಕಲೆ, ಸಂಸ್ಕೃತಿಯನ್ನು ಅಕ್ಷರ ರೂಪದಲ್ಲಿ ಕಲಿಸುವಂತಹ ಕಾರ್ಯ ಔಪಚಾರಿಕ ಶಿಕ್ಷಣದ ಮೂಲಕ ದೆಹಲಿ ಕನ್ನಡ ವಿದ್ಯಾಸಂಸ್ಥೆಯ ಮೂಲಕ ನಡೆದರೆ, ಕಲೆ, ಸಂಸ್ಕೃತಿಯ ಪ್ರದರ್ಶನದ ಮೂಲಕ ಅನೌಪಚಾರಿಕ ಶಿಕ್ಷಣವನ್ನು ನೀಡುತ್ತಿರುವ ದೆಹಲಿ ಕರ್ನಾಟಕ ಸಂಘ ಇವೆರಡು ಐವತ್ತರ ದಶಕದಲ್ಲಿ ಹುಟ್ಟಿಕೊಂಡಂತಹವು. ಎಸ್.ವಿ. ಕೃಷ್ಣಮೂರ್ತಿ ರಾವ್ ಹಾಗೂ ಅವರ ಸಮಕಾಲೀನರು ಸೇರಿ ಹೊರನಾಡ ಕನ್ನಡಿಗರ ಮಕ್ಕಳಿಗೆ ಕನ್ನಡವನ್ನು ಕಲಿಸುವ, ಕನ್ನಡೇತರರಿಗೂ ಕನ್ನಡವನ್ನು ಕಲಿಸುವುದರ ಜೊತೆಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಧ್ಯೇಯದೊಂದಿಗೆ ಈ ಸಂಸ್ಥೆಯನ್ನು ಕಟ್ಟಿದರು. ಎಸ್.ವಿ. ಕೃಷ್ಣಮೂರ್ತಿ ರಾವ್ ಅವರು ಓರ್ವ ಶಿಕ್ಷಣತಜ್ಞ, ಸಂವಿಧಾನತಜ್ಞ, ಕನ್ನಡ ನಾಡುನುಡಿಯ ಕುರಿತಾದ ಆಳವಾದ ಜ್ಞಾನವನ್ನು ಹೊಂದಿದವರು. ಸಂವಿಧಾನ ಕರಡು ಸಮಿತಿಯ ಸದಸ್ಯರಾಗಿದ್ದಾಗ, ಹಿಂದಿ ಭಾಷೆಯನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡುವ ಕುರಿತು ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಹಿಂದಿ ಭಾಷೆಯನ್ನು ಭಾರತದ ಅಧೀಕೃತ ಭಾಷೆಯನ್ನಾಗಿ ಒಪ್ಪಿಕೊಳ್ಳೋಣ ಆದರೆ ರಾಷ್ಟ್ರಭಾಷೆಯಾಗಿ ಅಲ್ಲ, ಹಾಗೆಯೇ ಪ್ರಾಂತೀಯ ಭಾಷೆಗಳಿಗೂ ಸರ್ಕಾರ ಅಷ್ಟೇ ಉತ್ತೇಜನ ನೀಡಬೇಕೆಂದು ಕೃಷ್ಣಮೂರ್ತಿ ಅವರು ಆಗ್ರಹಿಸಿದವರು. ದ್ರಾವಿಡ ಭಾಷೆಗಳನ್ನಾಡುವ ನಾವು ಭಾರತೀಯ ಭಾಷೆಗಳನ್ನು ಒಪ್ಪಿಕೊಂಡರೂ ನಾವು ನಮ್ಮ ಭಾಷೆಯನ್ನು, ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯಬೇಕೆಂಬುವುದನ್ನು ಎಸ್. ವಿ. ಕೃಷ್ಣಮೂರ್ತಿ ರಾವ್ ಪ್ರತಿಪಾದಿಸಿದ್ದರು. ಈ ಮೂಲಕ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಕಾಲಘಟ್ಟದಲ್ಲಿ ನಾಡುನುಡಿಯ ಬಗ್ಗೆ ಪ್ರಬಲವಾದ ಧ್ವನಿ ಎತ್ತಿದ ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಮಾತಿನಲ್ಲಿ ಕನ್ನಡಿಗರು ಆಕ್ರಮಣಶೀಲರಲ್ಲ, ಸಮನ್ವಯಶೀಲರು, ಸಂವೇದನಾಶಿಲರು ಎಂಬ ಭಾವವನ್ನು ಕಾಣಬಹುದು. ತಾಯಿ ಭುವನೇಶ್ವರಿಯ ಮಕ್ಕಳಾದ ಎಲ್ಲರೂ ಅನಾದಿ ಕಾಲದಿಂದಲೂ ಇಂತಹ ಮಹತ್ಕಾರ್ಯಗಳನ್ನು ಮಾಡಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಹೊರನಾಡಿನ ಮಹನೀಯ ಕನ್ನಡಿಗರು ಮಾಡಿರುವ ಸೇವೆ ನಮಗೆಲ್ಲರಿಗೂ ಆದರ್ಶವಾಗಿದೆ. ಇದನ್ನು ಮುಂದುವರಿಸುವ, ಬೆಳೆಸುವತ್ತ ನಾವೆಲ್ಲರೂ ಜೊತೆಗೂಡಿ ಮುನ್ನಡೆಯಬೇಕೆಂದು ಅವರು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ರಾಷ್ಟ್ರೀಯ ಮಾಹಿತಿ ಕೇಂದ್ರ, ಮಾಹಿತಿ ಮತ್ತು ತಂತ್ರಜ್ಞಾನ ಮಂತ್ರಾಲಯ, ನವದೆಹಲಿ ಇದರ ವಿಜ್ಞಾನಿಗಳಾದ ಶ್ರೀ ಜಗದೀಶ್ ಭಂಗಾರಿ ಅವರು ಮಾತನಾಡಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮೂಲೋದ್ದೇಶದೊಂದಿಗೆ ಹಿರಿಯ ಕನ್ನಡಿಗರು ಈ ಸಂಸ್ಥೆಯನ್ನು ಕಟ್ಟಿದ್ದಾರೆ. ಇಲ್ಲಿ ನಮ್ಮ ಮಾತೃಭಾಷೆಯಾದ ಕನ್ನಡದ ಕಲಿಕೆ ನಡೆಯುತ್ತಿರುವುದು ಅಭಿಮಾನವೆನಿಸುತ್ತಿದೆ. ಒಂದು ಭಾಷೆಯನ್ನು ಕಲಿಯುವುದೆಂದರೆ ಅದರ ಸಂಸ್ಕೃತಿ, ಸಂಸ್ಕಾರವನ್ನು ಕಲಿತಂತೆ. ಶಾಲಾ ಪಠ್ಯಕ್ರಮವು ಮಗುವಿನ ಬೌದ್ಧಿಕ ಬೆಳವಣಿಗೆ ಮತ್ತು ಸುಸಂಸ್ಕೃತ ನಾಗರಿಕನಾಗಿಸುವಲ್ಲಿ ಭಾಷಿಕ ವಾತಾವರಣ ಅಗತ್ಯ ಕೂಡ ಅಷ್ಟೇ ಮುಖ್ಯ. ಹಾಗೆಯೇ ಆಧುನಿಕತೆಗೆ ಮೊರೆ ಹೋಗುವ ಅನಿವಾರ್ಯತೆಯಲ್ಲಿ ಕೌಟುಂಬಿಕ ಹಾಗೂ ಸಾಮಾಜಿಕ ಸಂಬಂಧಗಳನ್ನೇ ಕಳೆದುಕೊಳ್ಳುವ ಅಪಾಯದಲ್ಲಿದ್ದೇವೆ. ಈ ನೆಲೆಯಲ್ಲಿ ಹಿರಿಯರಾದ ನಾವು ಮಕ್ಕಳಲ್ಲಿ ನಮ್ಮ ನಾಡಿನ ಹಬ್ಬ, ಆಚರಣೆಗಳು, ಪರಂಪರೆ, ಇತಿಹಾಸದ ಜೊತೆಗೆ ತಿಂಡಿ–ತಿನಿಸು ಇವೆಲ್ಲವನ್ನು ಪರಿಚಯಿಸುವ ಮೂಲಕ ನಾಡು ನುಡಿಯ ಸೇವೆ ಮಾಡಬೇಕು. ಸೇವಕರಾಗುವ ಮನೋಭಾವ ಇದ್ದವರು ನಾಯಕರಾಗುತ್ತಾರೆ ಎಂದು ತಿಳಿಸಿದರು.

ಸಂಸ್ಥೆಯ ಆಡಳಿತ ವ್ಯವಸ್ಥಾಪನಾ ಸಮಿತಿಯ ಶಿಕ್ಷಣತಜ್ಞ ಪರಿಣಿತರಾದ ಶ್ರೀ ಜಯಕುಮಾರ್ ಉಪಾಧ್ಯಾಯ ಅವರು ಕಾರ್ಯಕ್ರಮದ ಕುರಿತಾಗಿ ಹಿತನುಡಿಗಳನ್ನಾಡಿದರು.

ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾಗಿ ಚುನಾಯಿತರಾದ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸಮಿತಿ ಸದಸ್ಯರಾಗಿರುವ ಶ್ರೀ ಸಿ.ಎಂ. ನಾಗರಾಜ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷರಾದ ಟಿ.ಎಂ. ಮೈಲಾರಪ್ಪ, ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ತಿಮ್ಮಪ್ಪ ಜಿ.ಆರ್., ಮಾಲಿನಿ ಪ್ರಹ್ಲಾದ್, ಗಿರೀಶ್ ಎಸ್., ಬಿ.ಎನ್. ಮೋಹನ್ ಕುಮಾರ್ ಹಾಗೂ ಶಾಲೆಯ ಶಿಕ್ಷಕ–ಶಿಕ್ಷಕೇತರ ವೃಂದದವರು, ವಿದ್ಯಾರ್ಥಿಗಳು, ಪೋಷಕರು, ಸಂಸ್ಥೆಯ ಅಭಿಮಾನಿಗಳು ಉಪಸ್ಥಿತರಿದ್ದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಹಾಗೂ ಶಾಲೆಯ ವ್ಯವಸ್ಥಾಪಕರೂ ಆದ ಡಾ. ಎಂ.ಎಸ್. ಶಶಿಕುಮಾರ್ ಸ್ವಾಗತಿಸಿದರು. ಶಾಲೆಯ ಪ್ರಭಾರ ಪ್ರಾಂಶುಪಾಲರಾದ ಶ್ರೀಮತಿ ಎನ್. ವಿಜಯಕುಮಾರಿ ವಂದನಾರ್ಪಣೆ ಮಾಡಿದರು. ಕನ್ನಡ ಶಿಕ್ಷಕರಾದ ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮವನ್ನು ಫೇಸ್‌ಬುಕ್ ಮೂಲಕ ನೇರಪ್ರಸಾರ ಮಾಡಲಾಯಿತು.

*ಅರವಿಂದ ಬಿಜ್ಜೈ*

# “ವಚನ ಚಳುವಳಿ ಹೆಣ್ಣು-ಗಂಡಿನ ಸಮಾನತೆಗೆ ಶೀರ್ಷಿಕೆ ಬರೆದ ಆಂದೋಲನ”

## -ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀ ಹೆಚ್. ರಾಜೇಶ್ ಪ್ರಸಾದ್

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಪ್ರದೇಶ ಘಟಕದ ವತಿಯಿಂದ ಕಳೆದ ತಿಂಗಳು ದಿನಾಂಕ 19–09–2021 ಭಾನುವಾರ ಸಂಜೆ 07:00 ಗಂಟೆಗೆ “ವಚನ ವಾಖ್ಯಾನ” ವಿಷಯದ ಕುರಿತು ಹಮ್ಮಿಕೊಂಡಿದ್ದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ದೆಹಲಿ ಸರ್ಕಾರದ ಶಿಕ್ಷಣ ಹಾಗೂ ಕಾರ್ಮಿಕ ಇಲಾಖೆಯ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ರಾಜೇಶ್ ಪ್ರಸಾದ್ ಅವರು ಹನ್ನೆರಡನೇ ಶತಮಾನದ ವಚನಕಾರರ ಚಳವಳಿ ಪ್ರಾದೇಶಿಕತೆ, ಜಾತೀಯತೆ ಮತ್ತು ಹೆಣ್ಣು–ಗಂಡಿನ ಸಮಾನತೆಗೆ ಶೀರ್ಷಿಕೆ ಬರೆದ ಆಂದೋಲನ. ದೇಶದಲ್ಲಿ ಹನ್ನೆರಡನೇ ಶತಮಾನದಲ್ಲಿದ್ದ ಸಮಸ್ಯೆಗಳನ್ನು ಇನ್ನೂ ಕೂಡ ದೇಶದ ಮೂಲೆ ಮೂಲೆಯಲ್ಲೂ ಕಾಣುತ್ತಿದ್ದೇವೆ. ವಚನಕಾರರು ಅಂದು ಗುರುತಿಸಿದ್ದ ಸಮಸ್ಯೆಗಳನ್ನು ಇವತ್ತೂ ಕೂಡ ಕಾಣುತ್ತಿದ್ದೇವೆ. ಇದು ಅತ್ಯಂತ ಖೇದನೀಯ ಎಂದರು. ವಚನಕಾರರು ಸರ್ವರ ಸಮಾನತೆಗಾಗಿ ನಡೆಸಿದ ಹೋರಾಟ, ಆಂದೋಲನ ಹನ್ನೆರಡನೆಯ ಶತಮಾನಕ್ಕಿಂತಲೂ ಹೆಚ್ಚಾಗಿ ಈಗ ಪ್ರಸ್ತುತವಾಗಿದೆ. ಬಸವಣ್ಣನವರು ಹೇಳಿದ ಕಾಯಕವೇ ಕೈಲಾಸ ಎಂಬ ಉಕ್ತಿಯು ಸರ್ವಶ್ರೇಷ್ಠ ಉಕ್ತಿಯಾಗಿದೆ. ಬಸವಣ್ಣನವರು ಸಾರಿದ “ದಯೆ ಬೇಕು ಸಕಲ ಜೀವಿಗಳಿಗೆ” ಎಂಬ ತತ್ವವನ್ನೇ ಪ್ರಾಚೀನ ಕಾಲದ ಭಗವಾನ್ ಬುದ್ಧ, ಮಹಾವೀರ ಎಲ್ಲರು ಸಾರಿ ಹೇಳಿದ್ದಾರೆ. ಬಸವಣ್ಣನವರು ಹೇಳಿದಂತೆ ಆತ್ಮವೇ ಲಿಂಗವಾಗಿದ್ದು, ದೇಹವೇ ದೇಗುಲವಾಗಿದೆ, ಆ ಮೂಲಕ ಎಲ್ಲ ಜನರನ್ನು ಪ್ರೀತಿ, ವಿಶ್ವಾಸದ ಮೂಲಕ ಕಾಣುವ ಒಂದು ಸಮಾಜದವನ್ನು ನಾವು ನಿರ್ಮಿಸಬೇಕಾಗಿದೆ. ಈ ವಿಷಯದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅತಿ ಹೆಚ್ಚಿನ ಕೆಲಸ ಮಾಡುತ್ತಿದೆ ಎಂದು ಪರಿಷತ್ತಿನ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ. ಎನ್.ಎಸ್. ಚಂದ್ರಮೌಳಿ ಅವರು ವಚನಕಾರ ಉರಿಲಿಂಗಪೆದ್ದಿ ಯವರ “ಅಮೃತಕ್ಕೆ ಹಸಿವುಂಟೇ...” ಎಂಬ ವಚನವನ್ನು ವ್ಯಾಖ್ಯಾನಿಸುತ್ತಾ ಭಕ್ತಿಯ ಮಾರ್ಗದಲ್ಲಿ ನಡೆಯುವ ಮಹಾನ್ ಭಕ್ತ ಯಾವುದಕ್ಕೂ ಬೇಡಿಕೆ ಇಡುವವನಲ್ಲ. ಇದೇ ಮಾದರಿಯ ಭಕ್ತಿ ಮಾರ್ಗವನ್ನು ದಾಸವರೇಣ್ಯರು ಕೂಡ ತಮ್ಮ ಕೀರ್ತನೆಗಳಲ್ಲಿ ತಿಳಿಸಿದ್ದಾರೆಂದು ವ್ಯಾಖ್ಯಾನಿಸಿದರು.

ಶ್ರೇಷ್ಠ ವಚನಕಾರ ಅಲ್ಲಮಪ್ರಭು ರಚಿತ “ಎತ್ತಣ ಮಾಮರ ಎತ್ತಣಕೋಗಿಲೆ...” ಎಂಬ ವಚನವನ್ನು ಗಾಯನ ಮಾಡಿ ಅದರ ಅರ್ಥವನ್ನು ವ್ಯಾಖ್ಯಾನಿಸಿದ ಶ್ರೀಮತಿ ಸವಿತಾ ಇನಾಮದಾರ್ ಅವರು ನಮ್ಮ ಸಮಾಜ ಮತ್ತು ಸಂಸ್ಕೃತಿಯಲ್ಲಿ ಮಾನವೀಯ ಹಾಗೂ ಜೀವನ ಮೌಲ್ಯಗಳು ಸಂಪದ್ಭರಿತವಾಗಿದೆ. ನಾವು ನಮ್ಮ ಮಕ್ಕಳಿಗೆ ವಿದೇಶಗಳ ಪರಿಚಯ



ಮಾಡುವುದಕ್ಕಿಂತ ನಮ್ಮ ಸಂಸ್ಕೃತಿಯ ಮೂಲ ಬೇರುಗಳನ್ನು, ಪ್ರಮುಖ ಐತಿಹಾಸಿಕ ಮಹತ್ವದ ಸ್ಥಳಗಳನ್ನು ಕುರಿತು ಪರಿಚಯಿಸಬೇಕು ಎಂದರು.

ಶ್ರೀ ವಿ.ವಿ. ಬಿರಾದಾರ್ ಅವರು ಅಂಬಿಗರ ಚೌಡಯ್ಯ ಬರೆದಿರುವ “ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ..... ಎಂಬ ವಚನ ವಿಶ್ಲೇಷಣೆ ಮಾಡುತ್ತಾ ಬದುಕಿನ ನೋವು ನಲಿವು, ಕಷ್ಟ ಸುಖಗಳ ಹಂದರ ಯಾವ ರೀತಿ ಬೆಸೆದುಕೊಂಡು ಸಾಗುತ್ತಿದೆ ಎಂಬುದನ್ನು ವಿಸ್ತಾರವಾಗಿ ಹೇಳಿದರು.

ಡಿ.ಎಸ್.ಇ.ಯು. ನ ಪ್ರಾಧ್ಯಾಪಕರಾದ ಡಾ. ಎಸ್.ಎಲ್. ಭಂಡಾರ್‌ಕರ್ ಅವರು ಮಾತನಾಡಿ ವಚನ ಸಾಹಿತ್ಯ ಯಾವುದೇ ರಾಜಾಶ್ರಯವನ್ನು ಪಡೆಯದೇ ಮತ್ತು ರಾಜರ ಕೃಪೆಗಾಗಿ ಕೃತಿ–ಕಾವ್ಯಗಳನ್ನು ರಚಿಸದೇ ಸಮಾಜದ ಸಮಾನತೆ ಮತ್ತು ಸ್ವಾತಂತ್ರ್ಯ, ಸಮಾಜದ ಮೌಢ್ಯಗಳನ್ನು ಹೊಡೆದುರುಳಿಸುವದಕ್ಕಾಗಿ ವಚನ ಸಾಹಿತ್ಯದ ರಚನೆ ಮಾಡಿದರು. ಸಾಫ್ಟ್‌ವೇರ್ ಇಂಜಿನಿಯರ್ ಶ್ರೀಮತಿ ಆರಾಧನ ಕೆ.ಸಿ. ಅವರು ಬಸವಣ್ಣನವರ ಚಕೋರಂಗೆ ಚಂದ್ರಮನ ಚಿಂತೆ....ಎಂಬ ವಚನವನ್ನು ಅರ್ಥೈಸುತ್ತಾ ಸಮಾಜ ವಿವಿಧ ವೃತ್ತಿಗಳಲ್ಲಿರುವವರು ವಿಶೇಷವಾಗಿ ಶಿಕ್ಷಕರು, ಪೋಷಕರು, ಕೃಷಿಕರು, ಗೃಹಿಣಿಯರು ಹೀಗೆ ಎಲ್ಲರಿಗೂ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಉತ್ತಮಪಡಿಸಿಕೊಳ್ಳುವ ಕಾತರ ಮತ್ತು ಕಾಳಜಿಯನ್ನು ಹೊಂದಿರುತ್ತಾರೆಂದು ಉದಾಹರಣೆ ಸಹಿತ ವ್ಯಾಖ್ಯಾನಿಸಿದರು.

ಶ್ರೀಮತಿ ಸೌಮ್ಯ ಕೊಟ್ರೇಶ್ ಅವರು ಬಸವಣ್ಣನವರ ಮನಮನ ಬೆರೆಸಿದಲ್ಲಿ ತನು ಕರಗಿದಿದ್ದಡೆ...ಎಂಬ ವಚನವನ್ನು ವ್ಯಾಖ್ಯಾನಿಸುತ್ತಾ ಮನುಷ್ಯನಲ್ಲಿ ಅಹಂಕಾರ, ದ್ವೇಷಗಳು ಅಡಗಿ ಪ್ರೀತಿ ವಿಶ್ವಾಸಗಳನ್ನು ಹೃದಯದಲ್ಲಿ ಬೆಳೆಸಬೇಕು ಎಂದು ವಿವರಿಸಿದರು.

ತಮ್ಮ ಸುಶ್ರಾವ್ಯ ವಚನ ಗಾಯನದ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಿ, ವಚನ ವ್ಯಾಖ್ಯಾನವನ್ನೂ ಮಾಡಿದ ಸಾಹಿತ್ಯ ಚಿಂತಕರಾದ ಶ್ರೀ ಸಖಾರಾಮ್ ಉಪ್ಪೂರು ಅವರು ತಮ್ಮ “ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ..” ಎಂಬ ವಚನದ ನಿದರ್ಶನದ ಮೂಲಕ ಮಾತನಾಡಿ ನಮ್ಮ ಭಕ್ತಿ ಶುದ್ಧವಾಗಿರಬೇಕು, ಅದಕ್ಕೆ ಚಿನ್ನದ ದೇಹ, ದೇಗುಲಗಳ ಅವಶ್ಯಕತೆವಾಗಿರುವದಿಲ್ಲ. ಹೀಗಾಗಿಯೇ ಇಲ್ಲಿ ಸ್ಥಾವರಕ್ಕೆ ಅಳಿವಿದೆ ಹೊರತಾಗಿ ಜಂಗಮಕ್ಕೆ ಮತ್ತು ಭಕ್ತಿಗೆ ಅಳಿವಿಲ್ಲ ಎಂಬ ವಿಚಾರಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ಡಾ. ಗುರುರಾಜ್ ಸಂಗೊಂದಿಮಠ್ ಅವರು ಹನ್ನೆರಡನೇ ಶತಮಾನದಲ್ಲಿ ರಚನೆಯಾದ ವಚನ ಸಾಹಿತ್ಯ ವಿಶ್ವದ ಉದಾತ್ತ ಸಂದೇಶದ ಜೊತೆಗೆ ಮನುಷ್ಯನ ಒಳಗೆ ಹೊರಗೆರಡನ್ನು ಕೂಡ ಶುದ್ಧೀಕರಿಸುತ್ತಾ ಸಾಗುತ್ತಿದೆ. ಶರಣರ ವಚನಗಳು ಮಾನವೀಯ ಮೌಲ್ಯಗಳನ್ನು, ಜೀವ ಪರ ಮತ್ತು ಜನಪರ ಆಶಯಗಳನ್ನು ಒಳಗೊಂಡಿವೆ ಎಂದು ಹೇಳಿದರು.

ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವಚನ ವಾಚನ ಮಾಡಲು ದೆಹಲಿ ಕನ್ನಡ ಪುಟಾಣಿಗಳಾದ ಕುಮಾರ್ ಮಹಮ್ಮದ್ ಸಾಹಿಲ್, ನಿಟಿಲಾಕ್ಷ ಬಸವರಾಜ್, ಹಾರ್ದಿಕ್ ಕೆ. ಇಟಗಿ, ಕಾವ್ಯಾಂಶ್ ಮತ್ತು ಕುಮಾರಿ ನೂತನ ಕೈಕಾಡೆ ಆಸಕ್ತಿಯಿಂದ ಪಾಲ್ಗೊಂಡು ಕಾರ್ಯಕ್ರಮಕ್ಕೆ ಮೆರುಗು ತಂದರು.

ಶ್ರೀ ಯಲ್ಲಾಲಿಂಗ ಕೊಪ್ಪದ ಕಾರ್ಯಕ್ರಮವನ್ನು ನಿರೂಪಿಸಿದರು, ಶ್ರೀಮತಿ ಜಯಶ್ರೀ ಬಸವರಾಜ್ ಸ್ವಾಗತಿಸಿದರು ಮತ್ತು ಶ್ರೀ ಮಹದೇವ್ ಪ್ರಸಾದ್ ಅವರು ವಂದನಾರ್ಪಣೆ ಮಾಡಿದರು ಹಾಗೂ ಶ್ರೀ ರಾಜಕುಮಾರ ನಿಲೂರ ಅವರು ಕಾರ್ಯಕ್ರಮ ಸಂಯೋಜಕರಾಗಿದ್ದರು.

***ಯಲ್ಲಾಲಿಂಗ ಕೊಪ್ಪದ***

# ಪೇಜಾವರ ಮಠದಲ್ಲಿ ಸಂಸ್ಕೃತ-ವೇದಾಭ್ಯಾಸ

ನಾವು ಧರ್ಮವನ್ನು ಕಾಪಾಡಿದರೆ ಧರ್ಮ ನಮ್ಮನ್ನು ಕಾಪಾಡುತ್ತದೆ, ಇದು ನಮ್ಮ ಸನಾತನ ಪುರಾತನರ ಉಕ್ತಿ ಮತ್ತು ನಂಬುಗೆ. ಇದನ್ನು ಎಷ್ಟೋ ಜನ ನಂಬಿದರೆ, ಕೆಲವರು ಮಾತ್ರ ಆಚರಿಸುತ್ತಾರೆ. ಆದರೆ, ಇಂದಿನ ಕಾಲದಲ್ಲೂ ಧರ್ಮವನ್ನು ಪೂಜಿಸುವ ಮತ್ತು ಆಚರಿಸುವ ಮಹಾನ್ ವ್ಯಕ್ತಿಗಳು ನಮ್ಮ ನಡುವೆ ಇರುವುದಂತೂ ಸತ್ಯ. ಸಮಾಜ ಸೇವೆ ಮತ್ತು ಸಮಾಜದ ಮೇಲಿನ ಕಾಳಜಿ ಧರ್ಮದ ಒಂದು ಭಾಗ ಎಂದರೆ ತಪ್ಪಲ್ಲ.

ನವದೆಹಲಿಯ ವಸಂತ್ ಕುಂಜ್‌ನಲ್ಲಿರುವ ಪೇಜಾವರ ಮಠದ 'ಶ್ರೀಕೃಷ್ಣ ಧಾಮ'ದಲ್ಲಿ ನಮ್ಮ ದೇಶದ ವಿವಿಧ ರಾಜ್ಯಗಳಿಂದ ಬಂದಿರುವ ಮೂವತ್ತು ಮಕ್ಕಳು ಸಂಸ್ಕೃತ ಮತ್ತು ವೇದಾಭ್ಯಾಸವನ್ನು ಮಾಡುತ್ತಿದ್ದಾರೆ.

ಈ ಸಂಸ್ಕೃತ ಪಾಠ ಶಾಲೆಗೆ ಬೇಕಾದ ಎಲ್ಲಾ ರೀತಿಯ ಅನುಕೂಲಗಳನ್ನು ಒದಗಿಸುವ ಜವಾಬ್ದಾರಿಯನ್ನು ಮಠದ ವ್ಯವಸ್ಥಾಪಕರಾದ ಶ್ರೀ ದೇವಿಪ್ರಸಾದ್ ಅವರು ಶ್ರೀಕೃಷ್ಣನ ಕೃಪೆ ಮತ್ತು ಪೇಜಾವರ ಮಠದ ಶ್ರೀಗಳ ಆಶೀರ್ವಾದ ಮತ್ತು ಮಾರ್ಗದರ್ಶನದೊಂದಿಗೆ ನಿರ್ವಹಿಸುತ್ತಾ ಬರುತ್ತಿದ್ದಾರೆ. ದೇವಿಪ್ರಸಾದ್ ಅವರು ಮಕ್ಕಳಲ್ಲಿ ಇಟ್ಟಿರುವ ಅಭಿಮಾನ ಮತ್ತು ಪ್ರೀತಿ ವಿಶ್ವಾಸಗಳನ್ನು ಬರೆದು ಹೇಳುವುದು ಸುಲಭವಲ್ಲ. ಮಿಗಿಲಾಗಿ ಅವರಿಗೆ ಇದು ಇಷ್ಟವಾಗುವುದೂ ಇಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ದೇವಿಪ್ರಸಾದ್ ಅವರ ನೇತೃತ್ವದಲ್ಲಿ ಮಕ್ಕಳ ವಿದ್ಯಾಭ್ಯಾಸ ಮತ್ತು ಪೋಷಣೆ ಸಮರ್ಥವಾಗಿ ನಡೆಯುತ್ತಾ ಬರುತ್ತಿದೆ.

ಇನ್ನು ಧರ್ಮದ ಬಗ್ಗೆ ಹೇಳಲೇ ಬೇಕಾದ ವಿಷಯವೆಂದರೆ, ಈ ಮಠದಲ್ಲಿರುವ ಮಕ್ಕಳ ವಿಷಯದಲ್ಲಿ ಅಭಿಮಾನ, ಅಕ್ಕರೆ ಮತ್ತು ಕಾಳಜಿ ತೋರುವ ಅನೇಕರಲ್ಲಿ ವಸಂತ್ ಕುಂಜ್ ನಿವಾಸಿಯಾದ ಶ್ರೀ ಗ್ಯಾನ್ ಅರೋರ ಎಂಬುವರು ಒಬ್ಬರು. ಶ್ರೀಯುತರು ಆಗಾಗ್ಗೆ ಮಠದ ಮಕ್ಕಳಿಗೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿಯಲ್ಲಿ ಇನ್ನು ಕೆಲವೇ ವಾರಗಳಲ್ಲಿ ಚಳಿಗಾಲ ಶುರುವಾಗಲಿದೆ. ಇದನ್ನು ಗಮನದಲ್ಲಿರಿಸಿಕೊಂಡು, ಶ್ರೀ ಗ್ಯಾನ್ ಅರೋರ ಅವರು ಮಕ್ಕಳಿಗಾಗಿ ಕಂಬಳಿ, ಒಂದು ಶಾಲಾ ಬ್ಯಾಗ್, ಪುಸ್ತಕಗಳನ್ನು ನೀಡಿದರು. ಈಗ್ಗೆ ಕೆಲವು ತಿಂಗಳ ಹಿಂದಷ್ಟೇ ಮಠದ ಮಕ್ಕಳಿಗೆ ಶೈಕ್ಷಣಿಕ ಚಟುವಟಿಕೆಗೆ ಬೇಕಾದ ಅನೇಕ ಉಪಕರಣಗಳನ್ನೂ ನೀಡಿದ್ದರು. ಕೊರೊನಾ ಮಹಾಮಾರಿ ಹುಟ್ಟಿಹಾಕಿರುವ ಸಂಕಷ್ಟದಲ್ಲೂ ಗ್ಯಾನ್ ಅರೋರ ಅವರಂತಹ ಧರ್ಮಿಗಳು ಇರುವುದು ಒಂದು ಗಮನಾರ್ಹ ಸಂಗತಿಯೇ ಸರಿ. ಅರೋರ ಅವರು ತಮ್ಮ ಪತ್ನಿಯನ್ನು ಕಳೆದ ವರ್ಷ ಕೊರೊನಾ ಕಾರಣದಿಂದ ಕಳೆದುಕೊಂಡರು. ಅವರ ಪತ್ನಿಯ ಜ್ಞಾಪಕಾರ್ಥವಾಗಿ ಇಂತಹ ಸೇವೆಯನ್ನು ಇನ್ನು ಹೆಚ್ಚು ಮಾಡಬೇಕು ಎಂಬುದು ಅರೋರಾ ಅವರ ಬಯಕೆ. ಧರ್ಮವನ್ನು ನಂಬಿ ಇಂತಹ ಒಳ್ಳೆಯ ಕೆಲಸವನ್ನು ಮಾಡುತ್ತಿರುವ ಶ್ರೀ ಗ್ಯಾನ್ ಅರೋರ ಅವರನ್ನು ಹಾಗೂ ಅವರ ಬಂಧು ಮಿತ್ರರನ್ನು ಧರ್ಮ ರಕ್ಷಿಸಲಿ ಎಂದು ಆ ದೇವರಲ್ಲಿ ಪ್ರಾರ್ಥಿಸೋಣ.

*ವಿನೇಶ್*

# ಗೋಕರ್ಣ ಮಂಡಳದ ಶಾರದಾ ಪೂಜೆ ಹಾಗೂ ವಾರ್ಷಿಕ ಸಭೆ

ಗೋಕರ್ಣ ಮಂಡಳವು ದೆಹಲಿಯಲ್ಲಿರುವ ಹವ್ಯಕರ ಸಂಘವಾಗಿದ್ದು ಹವ್ಯಕ ಸಮಾಜದ ಆಗುಹೋಗುಗಳಿಗೆ ಯಾವತ್ತೂ ಸ್ಪಂದಿಸುತ್ತಾ ಬಂದಿದೆ. ಪ್ರತಿವರ್ಷವೂ ಸಹ ಹತ್ತು ಹಲವು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿರುವ ಮಂಡಳದ ವಾರ್ಷಿಕ ಶಾರದಾ ಪೂಜೆಯನ್ನು ಇತ್ತೀಚೆಗೆ ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕೊರೊನಾ ಮಹಾಮಾರಿಯ ನಂತರದಲ್ಲಿ ಮೊದಲಬಾರಿಗೆ ಎಲ್ಲರೂ ಒಟ್ಟಾಗಿ ಪೂಜೆಯಲ್ಲಿ ಭಾಗವಹಿಸಿದ್ದು ಈ ಬಾರಿಯ ವಿಶೇಷವಾಗಿತ್ತು. ವೇದಮೂರ್ತಿ ಸತೀಶ ಭಟ್ಟರ ಆಚಾರ್ಯತ್ವದಲ್ಲಿ ಶ್ರೀ ಗಣೇಶ ಭಟ್ ದಂಪತಿಗಳು ಪೂಜೆಯನ್ನು ಸಾಂಗೋಪಾಂಗವಾಗಿ ನೆರವೇರಿಸಿದರು. ನಂತರ ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕರ್ನಾಟಕದ ನಲವತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ ಮತ್ತು ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಮಂಡಳದ ಹಿರಿಯ ಸದಸ್ಯರ ಸಮಕ್ಷಮದಲ್ಲಿ ಮುಂದಿನ ಅವಧಿಯ ಅಧ್ಯಕ್ಷರಾಗಿ ಶ್ರೀಮತಿ ಶಾಲಿನಿ ಪ್ರಶಾಂತ್, ಉಪಾಧ್ಯಕ್ಷರಾಗಿ ಶ್ರೀ ಗಣೇಶ ಭಟ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಗಣೇಶ ಹೆಗಡೆ, ಜಂಟಿ ಕಾರ್ಯದರ್ಶಿಯಾಗಿ ಶ್ರೀಮತಿ ಆರತಿ ಹೆಗಡೆ, ಕೋಶಾಧಿಕಾರಿಗಳಾಗಿ ಶ್ರೀಮತಿ ಲಲಿತಾ ಹೆಗಡೆ, ಮತ್ತು ಸದಸ್ಯರುಗಳಾಗಿ ಶ್ರೀಮತಿ ಪೂರ್ಣಿಮಾ ಹೆಗಡೆ, ಶ್ರೀಮತಿ ಮಮತಾ ಹೆಗಡೆ, ಶ್ರೀಮತಿ ರೋಹಿಣಿ ಭಟ್, ಶ್ರೀಮತಿ ವಿಜಯಾ ಭಟ್, ಶ್ರೀಮತಿ ನಮಿತಾ ಹೆಗಡೆ, ಶ್ರೀಮತಿ ಪ್ರಭಾ ಉಪಾಧ್ಯಾಯ, ಶ್ರೀಮತಿ ಅನುರಾಧಾ



ಭಟ್ ಹಾಗೂ ಶ್ರೀ ದೀಪಕ್ ಶರ್ಮಾ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

*ಗಣೇಶ ಹೆಗಡೆ*




ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ : 011–26109615 / 26104818

# ಕಲ್ಯಾಣ ಕರ್ನಾಟಕ ಉತ್ಸವ: ಸಚಿವ ಖೂಬಾರಿಂದ ಧ್ವಜಾರೋಹಣ



ಪ್ರತಿವರ್ಷ ನನ್ನ ಬೀದರ ಜಿಲ್ಲೆಯಲ್ಲಿ ನೆರವೇರುವ ಧ್ವಜಾರೋಹಣ ಈ ದಿನ ತಪ್ಪಿತಲ್ಲಾ ಎಂದುಕೊಂಡು ಬೇಸರಿಸಿದ್ದ ನನಗೆ ಕರ್ನಾಟಕ ಸಂಘದಲ್ಲಿ ಧ್ವಜಾರೋಹಣದ ಈ ಶುಭ ಕಾರ್ಯದಲ್ಲಿ ಭಾಗಿಯಾಗುತ್ತಿರುವುದು ಬಹಳ ಸಂತೋಷವಾಗಿದೆ ಎಂದು ಕೇಂದ್ರ ಮಂತ್ರಿ ಶ್ರೀ ಭಗವಂತ ಖೂಬಾ ಅಭಿಪ್ರಾಯ ಪಟ್ಟರು.

ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಿದ್ದ ಕಲ್ಯಾಣ ಕರ್ನಾಟಕದ ಉತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೇಂದ್ರ ಸರ್ಕಾರದ ನವೀಕರಿಸಬಹುದಾದ ಇಂಧನ ಹಾಗೂ ರಸಗೊಬ್ಬರ ಇಲಾಖೆ ಸಚಿವ ಭಗವಂತ ಖೂಬಾ ಅವರು ಸ್ವತಂತ್ರ ಭಾರತದ 75 ವರುಷಗಳ ನಂತರ ದಿನಾಂಕ 17.09.2021 ರಂದು ಮುಂಜಾನೆ 9.30ಕ್ಕೆ ಧ್ವಜಾರೋಹಣ ನೆರವೇರಿಸಿ, ಉಕ್ಕಿನ ಮನುಷ್ಯರೆಂದೇ ಖ್ಯಾತರಾದ ಸರದಾರ್ ವಲ್ಲಭಬಾಯಿ ಪಟೇಲರ ಭಾವಚಿತ್ರಕ್ಕೆ ಪೂಜೆ ಮಾಲಾರ್ಪಣೆ ಪುಷ್ಪವನ್ನು ಅರ್ಪಿಸಿ ನಮನ ಸಲ್ಲಿಸಿ ಮಾತನಾಡಿದರು. ಸಚಿವರು ನಮ್ಮ ಭಾರತ ದೇಶ 15ನೇ ಆಗಸ್ಟ್ 1947ರಂದು ಸ್ವಾತಂತ್ರ್ಯವಾಯಿತು, ದೇಶದ ಮೂಲೆ ಮೂಲೆಗಳಲ್ಲಿ ಸಂತೋಷ ಸಂಭ್ರಮ ಸಡಗರ ನಡೆಯುತ್ತಿರುವಾಗ ನಿಜಾಮನ ಆಡಳಿತಕ್ಕೆ ಒಳಪಟ್ಟ ಬೀದರ, ಕಲಬುರ್ಗಿ, ರಾಯಚೂರು, ಬಳ್ಳಾರಿ, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಸ್ವತಂತ್ರ ಸಿಗದೆ ಇಲ್ಲಿ ಅಮಾನವೀಯ ಘಟನೆಗಳಿಂದ ಜನ ನರಕಯಾತನೆ ಅನುಭವಿಸುತ್ತಿದ್ದರು. ರಜಾಕಾರರ ಹಾವಳಿಯ ಕುರಿತು ಹಿರಿಯರಿಂದ ಜನಪದ ಭುಲಾಯಿ ಹಾಗೂ ಸಾಹಿತ್ಯದಿಂದ ಗಹನವಾಗಿ ಪರಿಶೀಲಿಸಿದಾಗ ಮಹಿಳೆ, ಮಕ್ಕಳ ಮೇಲೆ ಜರಗುವ ಅತ್ಯಾಚಾರ, ಅನ್ಯಾಯ, ಕೊಲೆ, ಸುಲಿಗೆ, ಚಿಂತಾಕ್ರಾಂತವಾಗಿದೆ ಎಂದು ವ್ಯಕ್ತಪಡಿಸಿದರು. ಗೋರಟಾ ಹಾಗೂ ಮುಚಳಂಬ ಗ್ರಾಮದಲ್ಲಿ ಜಲಿಯಾನಬಾಗದಂತೆ ಅನೇಕ ಜನಕೊಲೆಗೈದ ಸಂಕೇತವಿದೆ ಎಂದು ತಿಳಿಸಿದರು. ಸಚಿವರು ತಮ್ಮ ಗುರುಗಳಾದ ಚನ್ನಬಸವ ಪಟ್ಟದ್ದೇವರಿಗೆ ಹೊರಗೆ ಉರ್ದು ಬೋರ್ಡ್ ಹಾಕಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಿ, ಕನ್ನಡ ಉಳಿಸಿ ಬೆಳೆಸಿದ ಕೀರ್ತಿ ಸಲ್ಲುತ್ತದೆ ಎಂದು ಗುರುವಂದನೆ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಹಾಗೂ ಕಾನೂನು ತಜ್ಞರಾದ ಡಾ. ವೆಂಕಟಾಚಲ ಹೆಗಡೆಯವರು, ಮಾನ್ಯ ಸಚಿವರಿಗೆ ಶಾಲು ಹೊದಿಸಿ ಪುಷ್ಪಗುಚ್ಛ ಮತ್ತು ಸಂಘದ ಸ್ಮರಣಿಕೆ ನೀಡಿ ಗೌರವಾರ್ಪಣೆ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಇಂದು ಕೊರೊನಾದ ಅಂತ್ಯದಲ್ಲಿ ತಮ್ಮ ಅಮೂಲ್ಯ ಸಮಯವನ್ನು ನೀಡಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿ ಕನ್ನಡಮ್ಮನ ಕೀರ್ತಿಗೆ ಭಾಜನರಾಗಿದ್ದಾರೆ ಎಂದರು. ಇವರು ಪ್ರಾರಂಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ಹಂತಹಂತವಾಗಿ ಮೇಲೇರುತ್ತಾ 2014ರಲ್ಲಿ ಭಾರತೀಯ ಜನತಾಪಕ್ಷದಿಂದ ಸ್ಪರ್ಧಿಸಿ ಲೋಕಸಭಾ ಚುನಾವಣೆಯಲ್ಲಿ ಆಯ್ಕೆಯಾದರು. 2019ರಲ್ಲಿ ಮತ್ತೊಮ್ಮೆ ನಿಂತು ಚುನಾಯಿತರಾಗಿ ರೈತರ ಫಸಲ್ ಬಿಮಾ ಯೋಜನೆ, ರೈಲ್ವೆ, ರಸ್ತೆ ಸಾರಿಗೆ ಹೆದ್ದಾರಿ, ವಿಮಾನ ನಿಲ್ದಾಣಕ್ಕೆ ಸಂಬಂಧಪಟ್ಟಂತೆ ಕೆಲಸಮಾಡಿದ ಹೆಗ್ಗಳಿಗೆ ಇವರದಾಗಿದೆ. ಇವರ ಕಾರ್ಯವೈಖರಿ ಕಂಡು ಪ್ರಧಾನಿಯವರ ಸಚಿವ ಸಂಪುಟದಲ್ಲಿ ಎರಡು ಇಲಾಖೆಗಳ ಸಚಿವರಾಗಿ ಆಯ್ಕೆಗೊಂಡು ಸೇವೆ ಸಲ್ಲಿಸುತ್ತಿದ್ದಾರೆ. ದೇಶದ ಏಳಿಗೆಗಾಗಿ ಹಗಲಿರುಳೂ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು. ಹಾಗೆಯೇ ಹಿರಿಯರಾದ ವೈಜಿನಾಥ ವಿ. ಬಿರಾದಾರರವರು ಈ ಕಾರ್ಯಕ್ರಮಕ್ಕೆ ದೆಹಲಿ ಕನ್ನಡಿಗರನ್ನು ಒಗ್ಗೂಡಿಸಿ ಸಚಿವರನ್ನು ಕರೆಯಿಸಿ ಸಂಘದ ಘನತೆ ಹೆಚ್ಚಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಅತಿಥಿಯಾಗಿದ್ದ ಶ್ರೀ ವೈಜಿನಾಥ ವಿ. ಬಿರಾದಾರ ಅವರು ಮಾತನಾಡುತ್ತಾ ಸಚಿವರು ಸದ್ಗುಣ ಸಂಪನ್ನರು, ಸರಳ ಸಜ್ಜನಿಕೆಯ ನಾಯಕರು, ಶರಣರನಾಡಿನ ಕುಲತಿಲಕರು, ರೈತಬಂಧು, ಕಲ್ಯಾಣ ಕರ್ನಾಟಕದ ಪ್ರಥಮ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸುತ್ತಿರುವುದು ನಮ್ಮ ಕನ್ನಡಿಗರ ಭಾಗ್ಯವೆಂದು ಹೇಳಿದರು. ಇವರು ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನದಿಂದ ಸಚಿವ ಸ್ಥಾನದಲ್ಲಿದ್ದರೂ ಕೂಡಾ ಮೊದಲಿಗೆ ಇದ್ದ ಸರಳತೆಯನ್ನು ಉಳಿಸಿ ಬೆಳೆಸಿ ಶರಣರ ವಚನಗಳನ್ನು ಹಾಸು ಹೊಕ್ಕಾಗಿ ನಡೆಸಿಕೊಂಡು ಬರುತ್ತಿರುವ ಧೀಮಂತ ನಾಯಕ ಎನ್ನಬಹುದು. ರೈತರಲ್ಲಿ ರೈತರಿಗಾಗಿ, ಬಡವರಲ್ಲಿ ಬಡತನದ ಅರ್ಥಮಾಡಿಕೊಂಡು ಸಚಿವನಾಗಿಹೆನೆಂಬ ಗರ್ವವ ಬಾರದೆ ನಮ್ರತೆಯಿಂದ ಅವರವರ ಕೆಲಸ ಕಾರ್ಯಗಳ ಪರಿಶೀಲನೆ ನಡೆಸಿ ಪರಿಹಾರಕ್ಕೆ ಆದೇಶ ನೀಡಿ ಸಕ್ರಿಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರತಿ ವರ್ಷ ತಪ್ಪದೆ ಈ ಧ್ವಜಾರೋಹಣ ಕಾರ್ಯಕ್ರಮ ದೆಹಲಿ ಹಾಗೂ ಎನ್.ಸಿ.ಆರ್. ಕನ್ನಡ ಸಂಸ್ಥೆಗಳಲ್ಲಿ ಆಚರಿಸಬೇಕೆಂದು ಸಚಿವರಲ್ಲಿ ಎಲ್ಲ ಕನ್ನಡಿಗರನ್ನುದ್ದೇಶಿಸಿ ಮನವಿ ಸಲ್ಲಿಸಿದರು. ಕರ್ನಾಟಕ ಸಂಘದ ಇತಿಹಾಸದಲ್ಲಿ ಈ ದಿನ ಸುವರ್ಣ ಅಕ್ಷರಗಳಲ್ಲಿ ಬರೆದಿಡುವ ದಿನವೆಂದು ಹೇಳಬಹುದು. ಅವರಿಗೆ ಕರ್ನಾಟಕ ಸಂಘದ ವತಿಯಿಂದ ಅದ್ದೂರಿ ಸ್ವಾಗತ ಮಾಡಲಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿ ಗಣ್ಯರಿಗೆ ಹಾಗೂ ಎಲ್ಲರಿಗೂ ಧನ್ಯವಾದಗಳನ್ನು ಸಮರ್ಪಿಸಿದರು. ❑

**ವೈಜಿನಾಥ ವಿ. ಬಿರಾದಾರ**

# ಮಹರ್ಷಿ ವಾಲ್ಮೀಕಿ ರಾಮಾಯಣ ಮಹಾಕಾವ್ಯ ನೀಡಿದ ಬದುಕಿನ ಮೌಲ್ಯಗಳು ಎಂದೆಂದಿಗೂ ಪ್ರಸ್ತುತ : ಡಾ. ವೆಂಕಟಾಚಲ ಹೆಗಡೆ




ಇಪ್ಪತ್ನಾಲ್ಕು ಸಾವಿರ ಶ್ಲೋಕಗಳಿಂದ ಒಳಗೊಂಡಿರುವ ರಾಮಾಯಣ ಶ್ರೇಷ್ಠ ಕಾವ್ಯವಾಗಿದ್ದು, ರಾಮಾಯಣದಂತಹ ಮಹಾಕಾವ್ಯದ ಅಂಶಗಳು ಹಾಗೂ ಆದರ್ಶಗಳು ನಮಗೆಲ್ಲರಿಗೂ ದಾರಿದೀಪವಾಗಲಿ ಎಂದು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆದ ಡಾ. ವೆಂಕಟಾಚಲ ಹೆಗಡೆ ಅವರು ಹೇಳಿದರು. ದಿನಾಂಕ ಅಕ್ಟೋಬರ್ 19 ರಂದು ದೆಹಲಿ ರಾಜವೀರ ಮದಕರಿ ನಾಯಕ ಸಂಘದ ವತಿಯಿಂದ ದೆಹಲಿಯ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾಂಗಣದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ದೀಪ ಬೆಳಗಿಸಿ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ರಾಮಾಯಣದಲ್ಲಿನ ತತ್ವಾದರ್ಶಗಳು ಭವಿಷ್ಯಕ್ಕೆ ಭದ್ರಬುನಾದಿಯಾಗಿವೆ. ಆದಿ ಕವಿಯ ಕೊಡುಗೆ ಅಪಾರ ಹಾಗು ಅನನ್ಯ ಇಂದಿಗೂ ಈ ಮಹಾಕಾವ್ಯವು ಮೌಲ್ಯಯುತವಾದ ಸಾಹಿತ್ಯಕ್ಕೆ ಪ್ರೇರಣದಾಯಕವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ದೆಹಲಿ ರಾಜವೀರ ಮದಕರಿ ನಾಯಕ ಸಂಘದ ಅಧ್ಯಕ್ಷ ಬಿ.ಕೆ. ಬಸವರಾಜ್ ಅವರು ಆದಿ ಕವಿ ಮಹರ್ಷಿ ವಾಲ್ಮೀಕಿ ಅವರ ಜಯಂತಿಯ ಶುಭಾಶಯಗಳನ್ನ ತಿಳಿಸಿ ಈ ಸಂಘವನ್ನು 2008ರಲ್ಲಿ ದೆಹಲಿಯಲ್ಲಿ ಸ್ಥಾಪಿಸಲಾಗಿದ್ದು ಅಂದಿನಿಂದ ಪ್ರತಿವರ್ಷ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಮೂಲಕ ಅವರ ಸ್ಮರಣೆ ಮಾಡುವ ಕಾರ್ಯ ನಿರಂತರವಾಗಿ ಮಾಡುತ್ತಾ ಬರಲಾಗುತ್ತಿದೆ. ಇಂತಹ ಕಾರ್ಯಕ್ರಮ ಆಯೋಜನೆ ಮೂಲಕ ರಾಮಾಯಣ ಮಹಾಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿ ಅವರ ವಿಚಾರಧಾರೆಗಳನ್ನು ವಿನಿಮಯ ಮಾಡಿಕೊಳ್ಳುವ ಸುಸಂದರ್ಭ ಒದಗಿರುತ್ತದೆ. ಇಂತಹ ಕಾರ್ಯಕ್ರಮದ ಮೂಲಕ ನಾವೆಲ್ಲ ಸಕ್ರೀಯರಾಗುತ್ತಿರುವುದು ಸಂತಸದ ಸಂಗತಿ ಎಂದರು. ದೆಹಲಿ ವಕೀಲರಾದ ಗುರುದೀಪ್ ಸಿಂಗ್ ಅವರು ಮಾತನಾಡಿ, ರಾಮಾಯಣದಂತಹ ಮಹಾ ಕಾವ್ಯವನ್ನು ರಚಿಸಿದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ಪಾಲ್ಗೊಂಡಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಹಾಗೂ ದೆಹಲಿ ಕನ್ನಡಿಗರಾದ ಶ್ರೀಹರಿ ಅವರು ಮಾತನಾಡಿದರು.

ಶ್ರೀಮತಿ ಉಮಾಶ್ರೀ ಶ್ರೀನಿವಾಸ್ ಅವರ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದ ಸ್ವಾಗತವನ್ನು ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯದ ಅಭಿಕಲ್ಪ ವಿಭಾಗದ ಮುಖ್ಯಸ್ಥ ಪ್ರೊ. ರಂಗನಾಥ ಸಿಂಗಾರಿ ಅವರು ನೆರವೇರಿಸಿದರು ಹಾಗೂ ದೆಹಲಿ ರಾಜವೀರ ಮದಕರಿ ನಾಯಕ ಸಂಘದ ಕಾರ್ಯದರ್ಶಿ ಸಿ.ಆರ್. ಶ್ರೀನಿವಾಸ ಅವರು ವಂದಿಸಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಟಿ.ಎಂ. ಮೈಲಾರಪ್ಪ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಜಯಶ್ರೀ ಬಸವರಾಜ್ ಹಾಗೂ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಎ.ಟಿ. ಶ್ರೀನಿವಾಸ, ಕರ್ನಾಟಕ ಭವನದ ಎಸ್.ಕುಮಾರ, ರಕ್ಷಣಾ ಮಂತ್ರಾಲಯದಲ್ಲಿ ಉಪ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಹರಿಪ್ರಿಯ ಹಾಗೂ ಕರ್ನಾಟಕ ವಾರ್ತಾ ಕೇಂದ್ರದ ಅಮರೇಶ ಅವರು ಈ ಅರ್ಥಪೂರ್ಣವಾದ ಹಾಡುಗಳನ್ನು ಪ್ರಸ್ತುತಪಡಿಸುವ ಮೂಲಕ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಈ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಖಜಾಂಚಿ ರಾಧಾಕೃಷ್ಣ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ನವೀನ, ಆಶಾ ಶ್ಯಾಮಸುಂದರ್ ಅವರು, ಚಂದ್ರಶೇಖರ್ ಜೋಳದರಾಶಿ, ಶ್ರೀನಾಥ, ಗಿರೀಶ, ಆಶಾಲತಾ ಹಾಗೂ ದೆಹಲಿಯ ಕನ್ನಡಿಗರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ಹರಿಪ್ರಿಯ**

## ಕರ್ನಾಟಕ ಭವನದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ



ನವದೆಹಲಿಯ ಕರ್ನಾಟಕ ಭವನ–1 ಕಾವೇರಿಯಲ್ಲಿ ದಿನಾಂಕ 20.10.2021 ರಂದು ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತ ವಿಜಯ ರಂಜನ್ ಸಿಂಗ್ ಅವರು ಪಾಲ್ಗೊಂಡು ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಭವನದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ನವದೆಹಲಿಯ ದಿನಕರ ಫೌಂಡೇಷನ್‌ನಿಂದ ‘ಶ್ರೀರಂಗ’ರ ಕುರಿತು ಸಂವಾದ

ಕನ್ನಡದ ಪ್ರಖ್ಯಾತ ವಿದ್ವಾಂಸ, ನಾಟಕಕಾರ ಮತ್ತು ಸಾಹಿತಿ ಆದ್ಯ ರಂಗಾಚಾರ್ಯರ ಮೂಲ ಹೆಸರು ಆರ್.ವಿ. ಜಾಗೀರದಾರ. ಶ್ರೀರಂಗರು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡದಲ್ಲಿ 1904 ರ ಸಪ್ಟೆಂಬರ್ 26ರಂದು ಜನಿಸಿದರು. ಶ್ರೀರಂಗರ ಸಾಹಿತ್ಯ ಕೃಷಿ ಅಪಾರ ಹಾಗು ವೈವಿಧ್ಯಮಯ. ಸಂಸ್ಕೃತದಲ್ಲಿದ್ದ ಭರತಮುನಿ ವಿರಚಿತ “ನಾಟ್ಯ ಶಾಸ್ತ್ರ” ವನ್ನು ಕನ್ನಡ ಮತ್ತು ಇಂಗ್ಲೀಷನಲ್ಲಿ ಅನುವಾದ ಮಾಡಿ ಕನ್ನಡ ಮತ್ತು ಭಾರತದ ರಂಗಭೂಮಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಅವರ ಜನ್ಮ ದಿನದಂದು ಅವರನ್ನು ಸ್ಮರಣೆ ಮಾಡಿಕೊಳ್ಳುವ ಹಾಗೂ ಮಾಡಿರುವ ಸಾಧನೆಗಳನ್ನು ಸಂವಾದದ ಮೂಲಕ ತಿಳಿದುಕೊಳ್ಳುವ ಜೊತೆಗೆ ದಾಖಲೀಕರಣದ ನಿಟ್ಟಿನಲ್ಲಿ ‘ದಿನಕರ’ವು ‘ಶ್ರೀರಂಗರ ಸ್ಮರಣೆ’ ಕುರಿತಾಗಿ ಕಾರ್ಯಕ್ರಮ ಆಯೋಜಿಸಿತ್ತು.

ಸಂವಾದದಲ್ಲಿ ಸಾಹಿತಿ ‘ಶ್ರೀರಂಗ’ ಅವರ ಸುಪುತ್ರಿ ಡಾ. ಉಷಾ ದೇಸಾಯಿ, ಮುಂಬೈ ಅವರು ಉಪಸ್ಥಿತರಿದ್ದು ಮಾತನಾಡಿ, ಶ್ರೀರಂಗರು ಬೆಳಗಿನ ಜಾವದಲ್ಲಿಯೇ ನಾಟಕ ಬರೆಯುತ್ತಿದ್ದರು. ಒಂದು ನಾಟಕ ಬರೆದಾದ ನಂತರ ಅದೇ ನಾಟಕದ ಗುಂಗಿನಲ್ಲಿರುತ್ತಿದ್ದರು. ಮೂರರಿಂದ ನಾಲ್ಕು ದಿನಗಳೊಳಗೆ ಅವರು ನಾಟಕ ಬರೆದು ಮುಗಿಸುತ್ತಿದ್ದರು. ನಾಟಕ ಬರೆದು ಮುಗಿಸಿದ ಮೇಲೆ ಅವರಿಗೆ ಅನಾರೋಗ್ಯ ಕಾಣಿಸಿಕೊಳ್ಳುತ್ತಿತ್ತು. ಶ್ರೀರಂಗರು ತಮ್ಮ ಮನೆಯ ಮಕ್ಕಳಿಂದ ಆರೈಕೆ ಪಡೆದುಕೊಂಡು ಅದರಿಂದ ಹಗುರಾಗಿ ಒಂದು ರೀತಿಯ ನಿರುಮ್ಮಳತೆಯನ್ನು ಅನುಭವಿಸುತ್ತಿದ್ದರು ಎಂದರು. ತಂದೆ ಬರೆದಂತಹ ನಾಟಕಗಳು ಪ್ರಕಟವಾಗುವ ಮುಂಚೆ ಮುಂಬಯಿಯಲ್ಲಿಯೇ ರಂಗಪ್ರಯೋಗ ಕಾಣುತ್ತಿದ್ದವು. ಕೇಶವ್ ಮುತಾಲಿಕ್ ಅವರ ನಿರ್ದೇಶನ ‘ರಂಗ ಭಾರತ’ ನಾಟಕದಲ್ಲಿ ಶ್ರೀರಂಗರು ‘ಧೃತರಾಷ್ಟ್ರ’, ಬಿ.ವಿ. ದೇಶಪಾಂಡೆ ‘ಸಂಜಯ’ನ ಪಾತ್ರವಹಿಸಿದ್ದರು. ಆ ನಾಟಕ ನನ್ನ ಮನಸ್ಸಿನಲ್ಲಿ ಇನ್ನೂ ಹಚ್ಚಹಸಿರಾಗಿದೆ. ಅವರು ಮೊಮ್ಮಕ್ಕಳೊಂದಿಗೆ ಮಗುವಾಗಿ ಇರುತ್ತಿದ್ದರು. ಅಜ್ಜ ಹಾಗೂ ಮೊಮ್ಮಗಳು ಮಲ್ಲೇಶ್ವರ ರೈಲ್ವೆ ಸ್ಟೇಶನ್ ನಲ್ಲಿ ಮುಂಜಾನೆ ಹೋಗಿ ಆಗಮನ-ನಿರ್ಗಮನದ ಟ್ರೇನ್ ಎಣಿಸಿ, ಮನೆಯ ಮಕ್ಕಳೆಲ್ಲರೊಂದಿಗೆ ಹಂಚಿಕೊಂಡು ಸಂತೋಷ ಪಡುತ್ತಿದ್ದರು ಎಂದು ಅವರು ತಮ್ಮ ಬಾಲ್ಯದ ನೆನಪಿನ ಬುತ್ತಿ ಬಿಚ್ಚಿದರು. ಕಳೆದ ಎರಡು ದಶಕಗಳಲ್ಲಿ ಶ್ರೀರಂಗರ ಹಲವಾರು ನಾಟಕಗಳನ್ನು ಇಂಗ್ಲೀಷ್ ಹಾಗೂ ಮರಾಠಿ ಭಾಷೆಗೆ ಇವರು ಅನುವಾದಿಸಿದ್ದಾರೆ.

ಸಮಕಾಲೀನ ಭಾರತೀಯ ಮಹಿಳಾ ಬರಹಗಾರರಲ್ಲಿ ಒಬ್ಬರಾದ ಹೆಸರಾಂತ ಭಾರತೀಯ ಆಂಗ್ಲ ಲೇಖಕರೂ, ಶ್ರೀರಂಗ ಅವರ ಸುಪುತ್ರಿ ಶಶಿ ದೇಶಪಾಂಡೆ ಅವರು ಸಂವಾದದಲ್ಲಿ ಭಾಗವಹಿಸಿ ಮಾತನಾಡಿ, ಡಾಟರ್ ಹಾಗು ರೈಟರ್ ಆಗಿ ಹೇಳುವುದಾದರೆ, ಶ್ರೀರಂಗರು ಬೆಟ್ಟದಷ್ಟು ಕಾರ್ಯ ಮಾಡಿದ್ದಾರೆ. ಅವರು ಮಾಡಿರುವ ಸಾಹಿತ್ಯಿಕ ಸಾಧನೆಗಳನ್ನು ತಿಳಿದುಕೊಳ್ಳಲು ಬಹು ಸಮಯವೇ ಬೇಕಾಗುತ್ತದೆ. ಅವರು ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದರು. ಮಕ್ಕಳು ತುರ್ತು ಸಂದರ್ಭದಲ್ಲಿ ಮಾತ್ರ ಶಾಲೆಗೆ ರಜೆ ಹಾಕಬೇಕಿತ್ತು. ಅನವಶ್ಯಕ ರಜೆ ಪಡೆಯುವಂತಿರಲಿಲ್ಲ ತಮ್ಮ ಮನೆಯ ಮಕ್ಕಳನ್ನು ಸಹ ಶಿಕ್ಷಣದಲ್ಲಿ ತರಬೇತಿಗೊಳಿಸಿದರು. ತಂದೆ ದೆಹಲಿಯಲ್ಲಿದ್ದಾಗ ನಮ್ಮ ಸಮಸ್ಯೆಗಳನ್ನು ಪತ್ರದ ಮೂಲಕ ಬರೆದು ತಿಳಿಸುತ್ತಿದ್ದೇವು ಅದಕ್ಕೆ ಪರಿಹಾರವೇ ಪ್ರತಿ ಉತ್ತರವಾಗಿರುತ್ತಿತ್ತು. ಕಾಳಜಿಪೂರ್ವಕವಾಗಿ ಅವರು ಮಕ್ಕಳನ್ನು ನೋಡಿಕೊಳ್ಳುತ್ತಿದ್ದರು. ಸ್ವತಂತ್ರ ಮನೋಭಾವ ರೂಪಿಸಿದ ಅಪ್ಪ ಎಂದು ಶಶಿ ದೇಶಪಾಂಡೆ ಅವರು ತಮ್ಮ ತಂದೆಯ ಕುರಿತಾಗಿ ಮನಮುಟ್ಟುವಂತೆ ಮಾತನಾಡಿದರು.

ಹೆಸರಾಂತ ಲೇಖಕರು ಹಾಗೂ ನಾಟಕಕಾರರೂ ಆದ ಡಾ.ರಾಮಕೃಷ್ಣ ಮರಾಠೆ ಅವರು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಶ್ರೀರಂಗರ ಜನ್ಮದಿನದ ನೆನಪಿನ ಕೆಲವು ಸಾರ್ಥಕ ಕ್ಷಣಗಳಿಗೆ ಇಂದು ಸಾಕ್ಷಿಯಾದೆ ಎಂದರು.

ಶ್ರೀರಂಗರ ನಾಟಕ ರಚನೆಯ ಯಾತ್ರೆ ಬಹು ಸುದೀರ್ಘ. ನಾಟಕಗಳನ್ನಲ್ಲದೆ, ಹರಟೆ ಹಾಗೂ ಕಾದಂಬರಿಗಳನ್ನು ಸಹ ಬರೆದಿದ್ದಾರೆ. ಶ್ರೀರಂಗರ ಸಾಹಿತ್ಯ, ರಂಗಕೃತಿಗಳ ಮತ್ತು ರಂಗಭೂಮಿಯ ಬಗೆಗಿನ ಚಿಂತನೆ ನಾವೆಲ್ಲ ಮಾಡಬೇಕಾದ ಅವಶ್ಯಕತೆ ಇದೆ ಎಂದು ಮರಾಠೆ ಅವರು ತಮ್ಮ ಅನಿಸಿಕೆ ಹಂಚಿಕೊಂಡರು. 2012 ರಲ್ಲಿ- ‘ಶ್ರೀರಂಗರ ರಂಗ ಶೋಧ’ ಲೇಖನವನ್ನು ಕವಿ ರವಿ ಕೋಟಾರಗಸ್ತಿ ಅವರ ಯುವರಂಗೋತ್ಸವ ಸಂದರ್ಭದಲ್ಲಿನ ವಿಶೇಷಾಂಕಕ್ಕಾಗಿ ಬರೆದೆ ಎಂದು ಮರಾಠೆ ಹೇಳಿದರು.

ಜಾನಪದ ತಜ್ಞ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ, ಶ್ರೀರಂಗರ ಇಬ್ಬರು ಸುಪುತ್ರಿಯರು ಈ ಸಂವಾದದಲ್ಲಿ ಭಾಗವಹಿಸಿರುವುದನ್ನು ಕಂಡು ಸಂತೋಷವಾಯಿತು. ಶಶಿ ದೇಶಪಾಂಡೆ ಅವರ ಎಲ್ಲಾ ಕಥೆಯ ಓದುಗ ತಾವು ಎಂದರು. ತಾವು ವಿದ್ಯಾರ್ಥಿಯಾಗಿದ್ದಾಗ 1977 ರಲ್ಲಿ ಶ್ರೀರಂಗರ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದನ್ನು ಮೆಲುಕು ಹಾಕಿದರು. ಶ್ರೀರಂಗರು ಕರ್ನಾಟಕ ಏಕೀಕರಣಕ್ಕಾಗಿ ಕೊಟ್ಟ ಕೊಡುಗೆ ಅಪಾರ. ಕರ್ನಾಟಕ ವಿದ್ಯಾವರ್ಧಕ ಸಂಘವು 1906 ರಲ್ಲಿಯೇ ಕರ್ನಾಟಕ ಏಕೀಕರಣದ ಗೊತ್ತುವಳಿಯನ್ನು ಸ್ವೀಕರಿಸಿತ್ತು. 1944 ರಲ್ಲಿ ಅವರು ಅಖಿಲ ಕರ್ನಾಟಕ ಏಕೀಕರಣ ಸಮಿತಿ ಸ್ಥಾಪಿಸಿದರು. ಭಾಷಾವಾರು ಪ್ರಾಂತಗಳ ರಚನೆಯ ಹಿನ್ನೆಲೆಯಲ್ಲಿ, 1946 ರಲ್ಲಿ ಶ್ರೀರಂಗರು ಪಂ. ಜವಾಹರಲಾಲ್ ನೆಹರೂ ಅವರನ್ನು ಭೇಟಿ ಮಾಡುತ್ತಾರೆ. ಕನ್ನಡದ ಪ್ರೇಮಿ, ಸಂಸ್ಕೃತದ ವಿದ್ವಾಂಸರಾಗಿದ್ದಾಗಲೂ ಕೂಡ ಕನ್ನಡದಲ್ಲಿಯೇ ಬರೆದರು. 1934 ರಲ್ಲಿ ರಚಿಸಿದ ‘ವಿಶ್ವಾಮಿತ್ರನ ಸೃಷ್ಟಿ’ ಬಹಳ ಅತ್ಯುತ್ತಮವಾದ ಕಾದಂಬರಿ ಎಂದರು. ಕನ್ನಡ ಸಾಂಸ್ಕೃತಿಕ ಸಾರಸ್ವತ ಲೋಕಕ್ಕೆ ಶ್ರೀರಂಗರ ಕೊಡುಗೆ ಬಹು ದೊಡ್ಡದು ಎಂದರು. ಖ್ಯಾತ ಬರಹಗಾರರಾದ ಶ್ರೀ ಪ್ರಭಾಕರ ಸಾತಖೇಡ ಅವರು ಶ್ರೀರಂಗರ ಕೃತಿಗಳ ಕುರಿತು ಮಾತನಾಡಿ ಅವುಗಳು ಇಂದಿಗೂ ತಮ್ಮ ಪ್ರಸಕ್ತತೆಯನ್ನು ಕಾಯ್ದುಕೊಂಡಿರುವುದು ಲೇಖಕರ ದೂರದೃಷ್ಟಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಮುಂಬಯಿಯ ಡಾ. ಬಿ.ಆರ್. ಮಂಜುನಾಥ ಅವರು ಸಂವಾದದಲ್ಲಿ ಭಾಗವಹಿಸಿ ಮಾತನಾಡಿ, ಮುಂಬಯಿಯ ರಂಗಭೂಮಿ ಶ್ರೀರಂಗರಿಗೆ ಬಹು ಆಪ್ತವಾದ ರಂಗಭೂಮಿಯಾಗಿತ್ತು. ಅವರ ಸಾಕಷ್ಟು ನಾಟಕಗಳು ಮುಂಬಯಿಯಲ್ಲಿ ಪ್ರದರ್ಶನಗೊಂಡಿವೆ. ಶ್ರೀರಂಗರು ರಂಗಭೂಮಿ ಮೂಲಕ ವಹಿಸಿದ ಪಾತ್ರ ಅನನ್ಯ ಹಾಗೂ ಅಪಾರ. ಇವರು ಕನ್ನಡಕ್ಕಾಗಿಯೇ ದುಡಿದರು. ಕನ್ನಡ ಹಾಗೂ ಕನ್ನಡ ರಂಗಭೂಮಿ ಉಳಿಯಬೇಕು ಎಂದರು.

ಮುಂಬಯಿಯಲ್ಲಿ ಪ್ರಯೋಗಗೊಳ್ಳುವ ನಾಟಕಗಳಿಗೆ ಶ್ರೀರಂಗರ ಪುತ್ರಿ ಡಾ. ಉಷಾ ದೇಸಾಯಿ ಅವರ ಸಹಕಾರವೂ ಇರುತ್ತದೆ. ಅವರು ನಾಟಕೋತ್ಸವಕ್ಕೆ ಆಗಮಿಸಿ, ನಾಟಕಗಳನ್ನು ವೀಕ್ಷಿಸಿ, ಕಲಾವಿದರನ್ನು ಆಶೀರ್ವದಿಸುತ್ತಾರೆ. ಸುನೋ ಜನಮೇಜಯ ನಾಟಕ ಇಡೀ ದೇಶದಾದ್ಯಂತ ಪ್ರದರ್ಶನ ಕಂಡು ಅನ್ಯ ಭಾಷೆಯವರು ವೀಕ್ಷಿಸಿದಾಗ, ಕನ್ನಡದಲ್ಲಿ ಇಂತಹ ನಾಟಕಗಳಿವೆ ಅನ್ನುವುದು ತಿಳಿಯಿತು ಎಂದರು.

1944 ರಲ್ಲಿ ಶ್ರೀರಂಗರು ಬರೆದ ‘ಮುಕ್ಕಣ್ಣ ವಿರಾಟಪುರುಷ’ ನಾಟಕದ-ಮುದ್ದಿನ ಕಣಿ ಜೋ,ಜೋ, ಎನ್ನ ಮುದ್ದಿನ ಮಣಿ ಜೋ ಜೋ.. ರಂಗಗೀತೆಯನ್ನು ಕು: ದೀಪ್ತಿ ಭಟ್ ಅವರು ಹಾಗೂ ‘ಉದರ ವೈರಾಗ್ಯ’ ನಾಟಕದ-ಮನವಿದು ಚಲವಿಚಲಾ ಬಾಲಾ.. ಅಬಲಾ..ಪರಿಯಲಿ ತಲ್ಲಣಿಸುವಳು.. ರಂಗಗೀತೆಯನ್ನು ಕು. ಜನನಿ ವಿ, ಇಂಗಳೇಶ್ವರ ಅವರು ಹಾಡಿದರು. ಟಿ.ಎಸ್. ರಮೇಶ ತಾಂತ್ರಿಕ ನೆರವು ನೀಡಿದರು. ದಿನಕರದ ಸಂಚಾಲಕ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಮುತುವರ್ಜಿ ವಹಿಸಿ ಈ ಕಾರ್ಯಕ್ರಮ ಯಶಸ್ವಿಗೊಳ್ಳಲು ಕಾರಣರಾದರು. ಸಂತೋಷ ಉಪಾಧ್ಯಾಯ ಅವರು ವಂದಿಸಿದರು. □

**ಅಮರೇಶ**

## ಕರ್ನಾಟಕ ಭವನದಲ್ಲಿ ಗಾಂಧೀಜಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರೀ ಅವರ ಜನ್ಮದಿನಾಚರಣೆ



ದೆಹಲಿಯ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನ-1ರ ‘ಕಾವೇರಿ’ಯಲ್ಲಿ ದಿನಾಂಕ 02.10.2021 ರಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹಾದ್ದೂರ ಶಾಸ್ತ್ರೀ ಅವರ ಜನ್ಮದಿನಾಚರಣೆ ಆಚರಿಸಲಾಯಿತು.

ಸುಪ್ರಿಂಕೋರ್ಟಿನ ನ್ಯಾಯಾಧೀಶರಾದ ನ್ಯಾಯಮೂರ್ತಿ ಅಭಯ ಎಸ್.ಓಕಾ, ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ ಹಾಗೂ ಕರ್ನಾಟಕ ಹೈಕೋರ್ಟಿನ ನ್ಯಾಯಮೂರ್ತಿ ಅರವಿಂದ ಕುಮಾರ್ ಹಾಗೂ ನ್ಯಾಯಮೂರ್ತಿ ಶ್ರೀ ಅಲೋಕ ಆರಾಧ್ಯ ಅವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹಾದ್ದೂರ ಶಾಸ್ತ್ರೀ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಿದರು.

ನವದೆಹಲಿಯ ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತ ವಿಜಯ ರಂಜನ್ ಸಿಂಗ್, ಉಪ ನಿವಾಸಿ ಆಯುಕ್ತ ಎಚ್. ಪ್ರಸನ್ನ ಹಾಗೂ ಕರ್ನಾಟಕ ಭವನದ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು. □

**ಅಮರೇಶ**

# ಶ್ರೀಮತಿ ಸವಿತಾ ಇನಾಮದಾರ್ ನಿರ್ದೇಶನದ ಕಿರು ಚಿತ್ರಕ್ಕೆ ಪ್ರಥಮ ಪುರಸ್ಕಾರ



ಕಳೆದ ವರ್ಷ ಅಂತರರಾಷ್ಟ್ರೀಯ ದತ್ತುಮಾಸಾಚರಣೆ, ನವೆಂಬರ್ 2020ರ ಅಂಗವಾಗಿ ಸಾರ್ವಜನಿಕರಿಗೆ ದತ್ತು ಮಾಸಾಚರಣೆಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯ, ಕರ್ನಾಟಕ ಸರಕಾರ ಆಯೋಜಿಸಿದ್ದ 'ಕಿರು ಚಿತ್ರ ಸಿದ್ದಪಡಿಸುವ ಸ್ಪರ್ಧೆ'ಯಲ್ಲಿ ಶ್ರೀಮತಿ ಸವಿತಾ ಇನಾಮದಾರ್ ಅವರು ರಚಿಸಿ, ನಿರ್ಮಿಸಿದ 'ಮಡಿಲು ತುಂಬಿತು, ತೊಟ್ಟಿಲು ನಕ್ಕಿತು' ಎಂಬ ಕಿರು ಚಿತ್ರಕ್ಕೆ ಪ್ರಥಮ ಬಹುಮಾನ ಬಂದಿದೆ. ಲಾಕ್‌ಡೌನ್ ಆದ ಕಾರಣ ಫಲಿತಾಂಶಗಳನ್ನು ತಡವಾಗಿ ಘೋಷಿಸಲಾಗಿದೆ.

ಆಡು ಮುಟ್ಟದ ಸೊಪ್ಪಿಲ್ಲ, ಸವಿತಾ ಇನಾಮದಾರ್ ಭಾಗವಹಿಸದಿರುವ ಸಾಂಸ್ಕೃತಿಕ ಕಾರ್ಯಕ್ರಮಗಳೇ ಇಲ್ಲ. ಶ್ರೀಮತಿ ಸವಿತಾ ಇನಾಮದಾರ್ ಅವರು ಸುಮಾರು ಮೂರು ದಶಕಗಳಿಂದ ದೆಹಲಿಯಲ್ಲಿ ವಾಸವಾಗಿದ್ದು, ಕನ್ನಡ, ಮರಾಠಿ, ಹಿಂದಿ ಹಾಗೂ ಇಂಗ್ಲೀಷ್ ಭಾಷೆಗಳ ಮೇಲೆ ಹಿಡಿತವನ್ನಿಟ್ಟುಕೊಂಡಿದ್ದಾರೆ. ಸರಕಾರ, ಸರಕಾರೇತರ ಮತ್ತು ಖಾಸಗಿ ಸಂಸ್ಥೆಗಳು ನಡೆಸುವ ಅನೇಕ ಸಮ್ಮೇಳನಗಳಲ್ಲಿ ಭಾಗವಿಸಿ, ವೇದಿಕೆಯಿಂದ ಪ್ರೇಕ್ಷಕರವರೆಗೆ ಅನುವಾದಿತ ವ್ಯಾಖ್ಯಾನವನ್ನು ಏಕಕಾಲಿಕವಾಗಿ ಅಂದರೆ ಅಂತರಾಷ್ಟ್ರೀಯ ವ್ಯಾಖ್ಯಾನಕಾರಳಾಗಿ (International Interpreter) ಸೇವೆ ಸಲ್ಲಿಸುತ್ತಿದ್ದಾರೆ. ಅತ್ಯುತ್ತಮ ನಿರೂಪಕಿ, ಬರಹಗಾರತಿ, ಅನುವಾದಕಿ, ನಾಯಕಿ ಹಾಗೂ ನಿರ್ದೇಶಕಿಯೂ ಆಗಿದ್ದಾರೆ.

ಈ ಚಿತ್ರ 'ಅಮ್ಮಾ' ಅಂತ ಅನಿಸಿಕೊಳ್ಳುವ ಹಂಬಲಕ್ಕಾಗಿ ಅದೆಷ್ಟೋ ಕಷ್ಟ ಪಡುವ ಹೆಣ್ಣಿನ ಕಥೆಯಿದು. ಆಕೆ ಮಗುವಿಗಾಗಿ ಅನೇಕ ವರ್ಷಗಳಿಂದ ಹಂಬಲಿಸುತ್ತ, ನೂರಾರು ಹರಕೆಗಳನ್ನ, ಅನೇಕ ಸೇವೆಗಳನ್ನ ಮಾಡೋದಲ್ಲದೇ ದೇಶ–ವಿದೇಶಗಳಲ್ಲೂ ಹೋಗಿ ವೈದ್ಯಕೀಯ ಚಿಕಿತ್ಸೆ ಪಡೆದುಕೊಂಡು ಬಂದಿದ್ದರೂ ಏನೂ ಪ್ರಯೋಜನೆ ಆಗ್ಲಿಲ್ಲ. ಕೊನೆಗೆ ತನ್ನ ಗೆಳತಿಯಿಂದ ಭಾರತದಲ್ಲಿ ಮಗುವನ್ನ ದತ್ತು ನೀಡುವ ಸಂಸ್ಥೆಯ ಬಗ್ಗೆ ತಿಳಿದುಕೊಂಡು, ಅದರ ಅಂತರ್ಜಾಲದಲ್ಲಿ ಎಲ್ಲಾ ವಿವರಗಳನ್ನು ಪಡೆದುಕೊಂಡು ಕೊನೆಗೆ ಅವಳ ಬಂಜೆ ಎಂಬ ಪಟ್ಟವನ್ನ ಕಿತ್ತೊಗೆಯೋದಕ್ಕೆ ಮನೆಯವರೆಲ್ಲೂ ಸೇರಿ ಅಲ್ಲಿಂದಲೇ ಪುಟ್ಟ ಕಂದಮ್ಮನ್ನ ಮನೆಗೆ ಕರಕೊಂಡು ಬರುವಂತಹ ಸಂಭ್ರಮದ ಸನ್ನಿವೇಶದ ಕಿರು ಚಿತ್ರವಿದು. ಇದರ ಜೊತೆಗೆ ಅಲ್ಲಿದ್ದಂತಹ ಮಕ್ಕಳಿಗೆಲ್ಲಾ ಬೇಗನೆ ಒಂದೊಂದು 'ಮನೆ' ಸಿಗಲಿ ಎಂದು ತನ್ನ ಜೊತೆಗೆ ಇತರರನ್ನೂ ಪ್ರಾರ್ಥಿಸಿ ಎನ್ನುವ ಸಂದೇಶ ನೀಡಿದ ನಿರ್ದೇಶಕಿಗೆ ನನ್ನ ಶುಭ ಹಾರೈಕೆಗಳು.

ಸವಿತಾ ಇನಾಮದಾರ್ ನಿರ್ದೇಶಿಸಿದ ಚಿತ್ರದ ಯೂ ಟ್ಯೂಬ್ ಲಿಂಕ್ – https://www.youtube.com/watch?v=Ud801buWP9I ಈ ಚಿತ್ರ ನೋಡಿದ ಅನೇಕ ವೀಕ್ಷಕರು ತಮ್ಮ ಅನಿಸಿಕೆಗಳನ್ನು ಸಾಮಾಜಿಕ ಜಾಲತಾಣದ ಮೂಲಕ ಹಂಚಿಕೊಂಡಿದ್ದಾರೆ.

ಬಹುಮಾನ ವಿಜೇತ ನಿರ್ದೇಶಕಿ ಸವಿತಾ ಇನಾಮದಾರ್‌ರವರಿಗೆ ನಮ್ಮ ಜನಕಪುರಿ ಕನ್ನಡ ಕೂಟವೂ ಸೇರಿದಂತೆ ನಮ್ಮೆಲ್ಲ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತ ಇನ್ನೂ ಅನೇಕ ಚಿತ್ರಗಳನ್ನು ಅವರು ನಿರ್ದೇಶಿಸಿ ಹೆಚ್ಚು ಪುರಸ್ಕಾರಗಳು ಅವರಿಗೆ ದೊರೆಯಲಿ ಎಂದು ಆ ದೇವರಲ್ಲಿ ಪ್ರಾರ್ಥಿಸುತ್ತೇನೆ.

***ಡಾ. ಎಸ್.ಎಲ್. ಭಂಡಾರಕರ್***

# ಬೆಂಗಳೂರಿನ ಸ್ನೇಹ ಯುವ ಸಾಂಸ್ಕೃತಿಕ ಸಂಘ (ರಿ), ಇವರ ಮೂಲಕ ದೆಹಲಿಯಲ್ಲಿ ಕನ್ನಡ ರಾಜ್ಯೋತ್ಸವ

ಕನ್ನಡ ಭಾಷೆ, ನೆಲ–ಜಲ, ಕಲೆ, ಸಂಸ್ಕೃತಿ ವಿಶ್ವದಲ್ಲಿಯೇ ಶ್ರೇಷ್ಠವಾಗಿದೆ ಎಂಬುದಾಗಿ ಶಿವನಕಲ್ಲು ಮಲ್ಲೇಶ್ವರ ಮಹಾಸಂಸ್ಥಾನ ಮಠದ ಡಾ. ಶ್ರೀ ಶ್ರೀ ಬಸವ ರಮಾನಂದ ಮಹಾಸ್ವಾಮಿಗಳು ಸ್ನೇಹ ಯುವ ಸಾಂಸ್ಕೃತಿಕ ಸಂಘ (ರಿ), ಬೆಂಗಳೂರು ಇವರು ಕನ್ನಡ ರಾಜ್ಯೋತ್ಸವ ನವದೆಹಲಿ ಎಂಬ ಶಿರೋನಾಮೆಯಡಿ ನವೆಂಬರ್ 01 ರಂದು ದೆಹಲಿಯ ಹೋಟೆಲ್ ಕಾರ್ಡ್, ಕೈಲಾಸ, ನವದೆಹಲಿಯಲ್ಲಿ ಕರೋನಾ ವಾರಿಯರ್ಸ್ ಹಾಗೂ ಸಾಧಕರಿಗೆ ರಾಷ್ಟಮಟ್ಟದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕನ್ನಡ ಸಾಹಿತಿಗಳ ಪುಸ್ತಕಗಳನ್ನು ಓದುವ ಮೂಲಕ ಕನ್ನಡವನ್ನು ಉನ್ನತಿಗೊಳಿಸಬೇಕಾಗಿದೆ. ಕನ್ನಡ ಭಾಷೆ, ಕರ್ನಾಟಕ ಏಕೀರಣಕ್ಕಾಗಿ ಹಲವು ಮಹನೀಯರು ದುಡಿದಿದ್ದಾರೆ ಎಂದು ಕನ್ನಡ ನಡೆದು ಬಂದ ದಾರಿಯನ್ನು ಇಲ್ಲಿ ಸ್ಮರಿಸಿದರು.

ಚಿತ್ರದುರ್ಗದ ಬ್ರಹ್ಮ ವಿದ್ಯಾನಗರ ಕ್ಷೇತ್ರ ಮಧುರೆ ಮಹಾಸ್ವಾಮಿ ಡಾ. ಪುರುಷೋತ್ತಮಾನಂದ ಪುರಿ ಇವರು ಮಾತನಾಡುತ್ತಾ ಕನ್ನಡ ನಾಡು ನುಡಿಯನ್ನು ಉಳಿಸಿ ಬೆಳಸುವುದರ ಜೊತೆಗೆ ನಾವು ರೈತ ಮತ್ತು ಸೈನಿಕ ಈರ್ವರನ್ನು ಸ್ಮರಣೆ ಮಾಡಬೇಕಾಗಿದೆ. ತಾವು ಕೃಷಿಕರಾಗಿ, ಶ್ರಮ ಜೀವಿಯಾಗಿ ಜೀವನ ನಿರ್ವಹಣೆ ನಡೆಸುವುದು ಸಂತಸ ತಂದಿದೆ ಎಂದರು.



ಕರ್ನಾಟಕ ಸರ್ಕಾರದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರಾದ ಡಾ.ಸತೀಶ್ ಕುಮಾರ್ ಹೊಸಮನಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿ, ಕರ್ನಾಟಕ ಸರ್ಕಾರವು ಗ್ರಂಥಾಲಯವನ್ನು ಇ–ಗ್ರಂಥಾಲಯವನ್ನಾಗಿಸಿದೆ ಕನ್ನಡಿಗರು ಹಾಗೂ ಕನ್ನಡದಲ್ಲಿ ಆಸಕ್ತಿ ಇರುವ ಸಾರ್ವಜನಿಕರು www.karnatakadigitalpubliclibrary.org ಈ ವೆಬ್ ತಾಣಕ್ಕೆ ಭೇಟಿ ನೀಡಿ ತಮಗೆ ಇಷ್ಟದ ಪುಸ್ತಕ ತಾವಿದ್ದಲ್ಲಿಯೇ ಓದಬಹುದಾಗಿದೆ. ಇದರ ಲಾಭವನ್ನು ಪ್ರತಿಯೊಬ್ಬ ಕನ್ನಡಿಗರು ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

ಡಾ. ಶಿವರಾಜ ಶಾಸ್ತ್ರಿ ಹೇರೂರು, ರಚಿಸಿದ ಕೃತಿಯಾದ–'ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಮಹಾ ದಾಸೋಹ ದರ್ಶನಂ' ಪುಸ್ತಕ ಪುಸ್ತಕವನ್ನು ಸ್ವಾಮಿಗಳು ಲೋಕಾರ್ಪಣೆ ಮಾಡಿದರು.


ಸ್ನೇಹ ಯುವ ಸಾಂಸ್ಕೃತಿಕ ಸಂಘ (ರಿ) ಬೆಂಗಳೂರು ಇವರಿಂದ ಕೊಡಮಾಡುವ ಕಾಯಕಯೋಗಿ ಪ್ರಶಸ್ತಿಯನ್ನು ಚಿತ್ರದುರ್ಗದ ಬ್ರಹ್ಮ ವಿದ್ಯಾನಗರ ಕ್ಷೇತ್ರ ಮಧುರೆ ಮಹಾಸ್ವಾಮಿ ಡಾ. ಪುರುಷೋತ್ತಮಾನಂದ ಪುರಿ ಅವರಿಗೆ, 'ವಿಶ್ವಮಾನವ ಪ್ರಶಸ್ತಿ'ಯನ್ನು ಬೆಂಗಳೂರಿನ ಶಿವನಕಲ್ಲು ಮಲ್ಲೇಶ್ವರ ಮಹಾಸಂಸ್ಥಾನ ಮಠದ ಬಸವ ರಮಾನಂದ ಮಹಾಸ್ವಾಮಿಜೀಯವರಿಗೆ, ಡಾ. ಸತೀಶ್ ಕುಮಾರ್ ಹೊಸಮನಿ, ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ, ಬೆಂಗಳೂರು ಹಾಗೂ ಡಾ. ಭರತ್ ಎಸ್.ಎಂ., ವೈದ್ಯಾಧಿಕಾರಿಗಳು, ಕುಶಾಲನಗರ, ಕೊಡಗು ಜಿಲ್ಲೆ. ಡಾ. ಶಿವರಾಜ ಶಾಸ್ತ್ರಿಗಳು ಹೇರೂರು ಕಲಬುರಗಿ ಇವರುಗಳಿಗೆ ನೀಡಿ ಗೌರವಿಸಲಾಯಿತು. 'ಭಾರತ ಗೌರವ ಪ್ರಶಸ್ತಿ'ಯನ್ನು ಶ್ರೀ ಜಿ.ಕೆ. ಗಿರೀಶ್ ಉಪ್ಪಾರ್, ಶ್ರೀ ಸರ್ಬಜೀತ್ ಸಿಂಗ್, ಶ್ರೀ ಕುಶ್ ಕುಮಾರ್, ಶ್ರೀ ಶ್ರೀಹರಿ, ಡಾ. ಪ್ರಕಾಶ್ ಪಾಟೀಲ, ಶ್ರೀಮತಿ ಆಶಾಲತಾ, ಶ್ರೀ ಎನ್. ಆರ್. ಶ್ರೀನಾಥ್, ಶ್ರೀಮತಿ ಪಂಕಜ, ಶ್ರೀಮತಿ ದೀಪಿಕಾ ಆಚಾರ್ಯ, ಡಾ. ಶ್ರೀನಿವಾಸ್ ಮತ್ತು ಡಾ. ಕುಮಾರ್ ಸಂಪತ್ ನವದೆಹಲಿ ಇವರಿಗೆ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಶ್ರೀ ಬಿ.ಎಸ್. ಸದಾಶಿವ ಶೆಟ್ಟಿ, ಶ್ರೀ ಹೆಚ್.ಎಂ. ರಘು, ಡಾ. ನಾನಾ ಸಾಹೇಬ್ ಹಚ್ಚಡದ, ಕುಮಾರಿ ವಾಸುಕಿ ದೇಶಪಾಂಡೆ, ಶ್ರೀಮತಿ ಜಲಜಾ ಶೇಖರ್ ಇವರುಗಳಿಗೆ ನೀಡಿ ಗೌರವಿಸಲಾಯಿತು.

ದೆಹಲಿಯ ಕಲಾವಿದ ಶ್ರೀ ಎಸ್. ಕುಮಾರ್ ಹಾಗೂ ಶ್ರೀಮತಿ ನೇತ್ರಾವತಿ ಕುಮಾರ್ ದಂಪತಿಗಳು, ಶ್ರೀಮತಿ ದೀಪಿಕಾ ಆಚಾರ್ಯ, ಉಡುಪಿ ಹಾಗೂ ಶ್ರೀಮತಿ ಐಶ್ವರ್ಯ, ಮಂಗಳೂರು ಇವರು ಕನ್ನಡ ನಾಡು ನುಡಿ ಕುರಿತ ಹಾಡುಗಳ ಮೂಲಕ ಪ್ರೇಕ್ಷಕರ ಮನಗೆದ್ದರು. ಕುಮಾರಿ ವಾಸುಕಿ ದೇಶಪಾಂಡೆ ಇವರ ನೃತ್ಯವು ಅಮೋಘವಾಗಿತ್ತು.

ಶ್ರೀಮತಿ ಪಂಕಜ ರವಿಶಂಕರ, ಬೆಂಗಳೂರು, ಹಿರಿಯ ರಂಗಭೂಮಿ ಕಲಾವಿದರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ಬಾಬು ಪತ್ತಾರ್, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮ, ಶ್ರೀ ವೀರೇಂದ್ರ ಇನಾಂದಾರ್, ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ, ಡಾ. ಶಿವರಾಜ್ ಶಾಸ್ತ್ರಿ ಹೇರೂರು, ಕಲಬುರಗಿ, ಪ್ರಾಧ್ಯಾಪಕರು, ಡಾ. ನಾನಾಸಾಹೇಬ ಎಸ್. ಹಚ್ಚಡದ ಪ್ರಾಧ್ಯಾಪಕರು, ಶರಣ ಬಸವೇಶ್ವರ ಮಹಾವಿದ್ಯಾಲಯ ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ರೂವಾರಿ ಶ್ರೀ ಮಾರುತಿ ಬಡಿಗೇರ್ ಅವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿ ಕಾರ್ಯಕ್ರಮದ ಕೊನೆಗೆ ವಂದಿಸಿದರು. ಎನ್.ಆರ್. ಶ್ರೀನಾಥ್ ಅವರು ಕಾರ್ಯಕ್ರಮ ನಿರೂಪಿಸಿದರು.

***ಎಸ್. ಕುಮಾರ್***



ಬಹುಮುಖಿ ಪ್ರತಿಭೆಯ ಶ್ರೀ ಆಸ್ಕರ್ ಫರ್ನಾಂಡೀಸ್ ಅವರು ಸರಳತೆ, ಸಜ್ಜನಿಕೆಗಳಿಂದ ಆ ಬಾಲವೃದ್ಧರಾದಿಯಾಗಿ ಎಲ್ಲ ವಯೋಮಾನದವರಿಗೂ ಆಪ್ತವಾಗಿದ್ದರು. ಎದುರಿಗೆ ಸಿಕ್ಕಿದವರನ್ನು ಕೈಮುಗಿದು ನಗುತ್ತಲೇ ಆಪ್ತವಾಗಿ ಮಾತನಾಡಿಸುತ್ತಿದ್ದ, ಮಾಜಿ ಕೇಂದ್ರ ಮಂತ್ರಿ, ಅಸಾಧಾರಣ ಸಂಸದೀಯ ಪಟು, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಆಸ್ಕರ್ ಫರ್ನಾಂಡೀಸ್ ಅವರ ಅಗಲಿಕೆ ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ತುಂಬಲಾರದ ನಷ್ಟ.

ಪ್ರಸಕ್ತ ಭಾರತದ ರಾಜಕೀಯ ಪರಿದೃಶ್ಯವನ್ನು ಗಮನಿಸಿದಾಗ ತಮ್ಮ ಸಂಭಾವ್ಯ ಗುಣಗಳಿಂದ ದೇಶ ಹಾಗೂ ನಾಡಿನಾದ್ಯಂತ ಗುರುತಿಸಲ್ಪಡುವ ವಿಶಿಷ್ಟ ವ್ಯಕ್ತಿತ್ವ ಶ್ರೀ ಆಸ್ಕರ್ ಫರ್ನಾಂಡೀಸ್ ನೂರಾರು ಅನಾಥರಿಗೆ, ನೊಂದವರಿಗೆ ಆಸರೆಯಾಗಿದ್ದರು.

ಆಸ್ಕರ್ ಅವರು ಸಾಹಿತ್ಯ, ಕಲೆ, ಅನುವಾದ, ಮಕ್ಕಳ ಗೀತೆಗಳ ರಚನೆ ಯಕ್ಷಗಾನ ಮೊದಲಾದ ಹಲವಾರು ಕ್ಷೇತ್ರಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು.

ದೆಹಲಿ ಕರ್ನಾಟಕ ಸಂಘ ದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಆಸ್ಕರ್ ಅವರು ಸಂಘದಲ್ಲಿ ಆಯೋಜಿಸುವ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಮತ್ತು ನಿರಂತರವಾಗಿ ಪ್ರೋತ್ಸಾಹ ನೀಡುತ್ತಾ ಬಂದಿದ್ದರು. ಅವರೀಗ ಇಹಲೋಕ ತ್ಯಜಿಸಿರುವುದು ಸಂಘಕ್ಕೆ ದೊಡ್ಡ ನಷ್ಟ. ಬಹುಮುಖಿ ಪ್ರತಿಭೆಯ, ಶ್ರೇಷ್ಠ ವ್ಯಕ್ತಿತ್ವದ ಆಸ್ಕರ್ ಫರ್ನಾಂಡೀಸ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಕಾಲನ ಗರ್ಭ ಸೇರಿದ ಆಸ್ಕರ್

80 ವರ್ಷದ ಆಸ್ಕರ್ ಫರ್ನಾಂಡೀಸ್ ಇನ್ನಿಲ್ಲವೆಂಬ ಸುದ್ದಿ ತಲುಪಿದಾಗ ಕಾಲನ ಚಕ್ರಗಳು ಹಿಂದಕ್ಕೆ ಸರಿಯತೊಡಗಿದುವು. ದೇವರಾಜ ಅರಸು ಕಾಲದಲ್ಲಿ ಕರಾವಳಿಯ ಹಿಂದುಳಿದ ವರ್ಗದಿಂದ ಮೇಲೆದ್ದು ಬಂದ ಶ್ರೀಯುತರಾದ ಜನಾರ್ದನ ಪೂಜಾರಿ, ಆಸ್ಕರ್ ಫರ್ನಾಂಡೀಸ್ ಮತ್ತು ವೀರಪ್ಪ ಮೊಯಿಲಿ ತಮ್ಮ ರಾಜಕೀಯ ಏಳುಬೀಳುಗಳ ನಡುವೆಯೂ ಕೊನೆಯವರೆಗೆ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಾಗಿಯೇ ಉಳಿದರು. ಈ ತ್ರಿಮೂರ್ತಿಗಳಲ್ಲಿ ಆಸ್ಕರ್ ಫರ್ನಾಂಡೀಸ್ ರಾಜೀವ್ ಗಾಂಧಿ ಕಾಲದಿಂದಲೂ ಗಾಂಧೀ ಕುಟುಂಬಕ್ಕೆ ಬಹಳ ಹತ್ತಿರವಾಗಿದ್ದರು. ಆದರೆ ಈ ಸಂಬಂಧವನ್ನು ಅವರೆಂದೂ ದುರುಪಯೋಗ ಪಡಿಸಿಕೊಂಡವರಲ್ಲ. ಜೊತೆಗೆ ಆಸ್ಕರ್ ಎಂದೂ ಮಹತ್ವಾಕಾಂಕ್ಷಿಯೂ ಆಗಿರಲಿಲ್ಲ. ಪಾಲಿಗೆ ಬಂದದ್ದು ಪಂಚಾಮೃತ ಎಂದು ಭಾವಿಸುತ್ತಿದ್ದ ಅವರು ಕೇಂದ್ರದಲ್ಲಿ ರಸ್ತೆ ಸಾರಿಗೆ, ಹೆದ್ದಾರಿ, ಕಾರ್ಮಿಕ ಮತ್ತು ಉದ್ಯೋಗ, ಯೋಜನಾ ಅನುಷ್ಠಾನ, ಯುವಜನ ಹಾಗೂ ಕ್ರೀಡಾ ಸಚಿವರಾಗಿ ಕೆಲಸ ನಿರ್ವಹಿಸಿದ್ದರು. ಮಂತ್ರಿಯಾದಾಗ ಅವರು ಹಿಗ್ಗಿದವರಲ್ಲ, ಆಗದಿದ್ದಾಗ ಅವರು ಕುಗ್ಗಿದವರಲ್ಲ. ಆಸ್ಕರ್, ಆಸ್ಕರಣ್ಣನಾಗಿಯೇ ಉಳಿದಿದ್ದರು.

1975-76 ರ ಅವಧಿಯಲ್ಲಿ ಉಡುಪಿಯ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರಾಗಿದ್ದ ಅವರು 1980ರಲ್ಲಿ ಮೊದಲ ಬಾರಿಗೆ ವಿ.ಎಸ್. ಆಚಾರ್ಯರನ್ನು ಸೋಲಿಸಿ, ಉಡುಪಿ ಕ್ಷೇತ್ರದಿಂದ ಏಳನೇ ಲೋಕಸಭೆ ಪ್ರವೇಶಿಸಿದ ಅವರು ಮುಂದೆ, 1984 ರಲ್ಲಿ ಕೆ.ಎಸ್. ಹೆಗ್ಡೆ, 1989ರಲ್ಲಿ ಎಂ. ಸಂಜೀವ, 1991ರಲ್ಲಿ ರುಕ್ಮಯ್ಯ ಪೂಜಾರಿಯವರನ್ನು ಮತ್ತು 1996ರಲ್ಲಿ ಜಯರಾಮ ಶೆಟ್ಟರನ್ನು ಸೋಲಿಸಿ ಲೋಕಸಭೆಗೆ ಆಯ್ಕೆಯಾದರು. 1980ರಲ್ಲಿ ಮೊದಲ ಸಲ ಆಸ್ಕರ್ ಗೆದ್ದಾಗ ಅವರ ಗೆಲುವಿನ ಅಂತರ ಒಂದೂವರೆ ಲಕ್ಷವಾಗಿದ್ದರೆ, 1996ರಲ್ಲಿ ಅವರ ಗೆಲುವಿನ ಅಂತರ ಕೇವಲ ಎರಡು ಸಾವಿರವಾಗಿತ್ತು. ಆ ಹೊತ್ತಿಗೆ ದೆಹಲಿ ಕೇಂದ್ರಿತ ರಾಜಕಾರಣದಲ್ಲಿ ಮುಳುಗಿದ್ದ ಆಸ್ಕರ್ ಅವರಿಗೆ ತನ್ನ ಕಾಲ ಕೆಳಗಿನ ನೆಲ ಕುಸಿಯುವುದು ಗೊತ್ತಾಗಲೇ ಇಲ್ಲ. ಅವರು ತನಗೆ ಮತ ಹಾಕಿದವರಿಗಿಂತ ಹೆಚ್ಚಾಗಿ ದೆಹಲಿ ಜನಗಳಿಗೇ ಹತ್ತಿರವಾಗುತ್ತಾ ಹೋದರು. ಕಾಂಗ್ರೆಸ್‌ನ ಕೇಂದ್ರ ಕಚೇರಿಯಲ್ಲಿಯೇ ಅವರು 24 ಗಂಟೆಗಳ ಕಾಲ ದುಡಿಯತೊಡಗಿದರು. ಪರಿಣಾಮವಾಗಿ, 1998ರ ಲೋಕಸಭಾ ಚುನಾವಣೆಯಲ್ಲಿ ಅವರು




(ಚಿತ್ರದಲ್ಲಿ ಎಡಬದಿಗೆ ಕರ್ಣನಾಗಿ ಮೊಯಿಲಿ, ಮಧ್ಯೆ ಭೀಷ್ಮನಾಗಿ ಆಸ್ಕರ್ ಮತ್ತು ಬಲಬದಿಯಲ್ಲಿ ವಿದುರನಾಗಿ ನಾನು, ಫೋಟೋ: ದಿನೇಶ್ ಶೆಣೈ)

ಸುಮಾರು 47 ಸಾವಿರ ಮತಗಳಿಂದ ಸೋತರು. ಸೋತರೂ ಮತ್ತೆ ರಾಜ್ಯ ಸಭೆಗೆ ಪ್ರವೇಶ ಪಡೆದರು.

80–90ರ ದಶಕದಲ್ಲಿ ಆಗಿನ್ನೂ ಯುವಕರಾಗಿದ್ದ ಆಸ್ಕರ್ ಫರ್ನಾಂಡೀಸ್ ಮತ್ತು ವೀರಪ್ಪ ಮೊಯಿಲಿಯವರು ತಮಗೊದಗಿದ ಅವಕಾಶಗಳನ್ನು ಉಪಯೋಗಿಸಿಕೊಂಡು ಉಡುಪಿ ಮಂಗಳೂರುಗಳಲ್ಲಿ ಹೆಚ್ಚು ಕೆಲಸ ಮಾಡಿದ್ದರೆ, ಕರಾವಳಿ ಇವತ್ತು ಈ ಮಟ್ಟಿನ ಕೋಮುವಾದಕ್ಕೆ ಬಲಿಯಾಗುತ್ತಿರಲಿಲ್ಲ. ಭೂ ಸುಧಾರಣೆಯ ಆನಂತರ ಹುಟ್ಟಿಕೊಂಡ ಹೊಸ ತಲೆಮಾರಿನ ಅವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಈ ನಾಯಕರು ವಿಫಲರಾಗಿದ್ದರು. ಕಾರಣ ತಮ್ಮದೇ ಜನಗಳಿಂದ ದೂರವಾಗುತ್ತಲೇ ಹೋದರು. ಹೀಗಾಗಿ ಪೂಜಾರಿಯವರು ಮತ್ತು ಮೊಯಿಲಿಯವರು ಸೋತರು, ಆಸ್ಕರ್ ಇದೀಗ ಕೊನೆಯುಸಿರು ಎಳೆದಿದ್ದಾರೆ.

ಮೃದು ಮಾತಿನ ಆಸ್ಕರ್ ಅಂದರೆ ದೆಹಲಿಯಲ್ಲಿ ಎಲ್ಲರಿಗೂ ಇಷ್ಟ. ಯೋಗ ಮತ್ತು ಕಥಕ್ ಅವರ ಪ್ರೀತಿಯ ಹವ್ಯಾಸಗಳು. ಹೆಂಡತಿ ಬ್ಲೋಸಮ್‌ರನ್ನು ಹತ್ತಿರ ಕುಳಿತುಕೊಳ್ಳಿಸದೇ ಇದ್ದರೆ ಅವರು ಭಾಷಣ ಮಾಡುತ್ತಲೇ ಇರಲಿಲ್ಲ. ಕಚೇರಿಗೆ ಯಾರು ಹೋದರೂ ಕರೆದು ಮಾತಾಡಿಸುವ ಸೌಜನ್ಯ, ನಮ್ಮಂಥ ರಾಜಕೀಯೇತರ ಜನರು ಹೋದರೆ ಹತ್ತಿರ ಕುಳ್ಳಿರಿಸಿಕೊಂಡು ಹೆಗಲ ಮೇಲೆ ಕೈ ಹಾಕಿ ಹರಟುವ ಪ್ರೀತಿ ಮೊದಲಾದ ಗುಣಗಳಿಂದಾಗಿ ಆಸ್ಕರ್ ಅಜಾತ ಶತ್ರುವಾಗಿಯೇ ಉಳಿದರು.

2004–2008ರ ಅವಧಿಯಲ್ಲಿ ನಾನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿ ಸಂಘಕ್ಕೊಂದು ಸಾಂಸ್ಕೃತಿಕ ಸಮುಚ್ಚಯ ಕಟ್ಟುತ್ತಿದ್ದಾಗ, ಆಸ್ಕರ್, ಮೊಯಿಲಿ ಮತ್ತು ಅನಂತ ಕುಮಾರ್ ನಮ್ಮ ಸಹಾಯಕ್ಕೆ ನಿಂತಿದ್ದರು. ಕಟ್ಟಡದ ಉದ್ಘಾಟನೆಯ ಸಂದರ್ಭದಲ್ಲಿ ಗೆಳೆಯ ವಸಂತ ಶೆಟ್ಟಿ ಬೆಳ್ಳಾರೆಯವರು ಆಸ್ಕರ್ ಮತ್ತು ಮೊಯಿಲಿಯವರನ್ನು ಸೇರಿಸಿ ಯಕ್ಷಗಾನವನ್ನು ಮಾಡುವ ಯೋಜನೆ ರೂಪಿಸಿದರು. ಮಂಗಳೂರಿನಿಂದ ಕಲಾವಿದ ಭಾಸ್ಕರ ರೈ ಕುಕ್ಕುವಳ್ಳಿಯವರು ಸಹಾಯ ಹಸ್ತ ಚಾಚಿದರು. ವಿದ್ಯಾ ಕೋಳ್ಯೂರು ತರಬೇತಿ ನೀಡಿದರು. ಕೃಷ್ಣ ಭಟ್ಟರು ಎಲ್ಲ ವ್ಯವಸ್ಥೆ ಮಾಡಿದರು. ಆಸ್ಕರ್ ಅವರದು 'ಅತ್ಯುನ್ನತಿಯೊಳ್ ಅಮರಸಿಂಧೂದ್ಭವನಾದ ಭೀಷ್ಮಾಚಾರ್ಯ, ಮೊಯಿಲಿಯವರದು 'ಸೂತ ಪುತ್ರ ಕರ್ಣ', ನಂದು 'ನೀತಿವಂತ ವಿದುರ' ಇತ್ಯಾದಿ. ಒಂದು ಹಂತದಲ್ಲಿ ಭೀಷ್ಮಚಾರ್ಯ ಅವರು ಇದಿರಾದಾಗ ನಾನು (ವಿದುರ) ಹೇಳಿದೆ– 'ಆಚಾರ್ಯರೇ, ನಿಮಗೆ ಹಸ್ತಿನಾಪುರದ ಪಟ್ಟವನ್ನು ಕಾಯುವುದೇ ಕೆಲಸವಾಯಿತಲ್ಲ' ನೀವು ಪಟ್ಟವೇರುವುದು ಯಾವಾಗ? ತುಂಬಿದ ಸಭೆ ಚಪ್ಪಾಳೆ ತಟ್ಟಿತು, ಭೀಷ್ಮರು ಮುಗುಳ್ನಕ್ಕರು. ಮರುದಿನ ದೇಶದಾದ್ಯಂತ 'ನೇತಾ ಬನ್ ಗಯಾ ಅಭಿನೇತಾ' ಅಂತ ಸುದ್ದಿಯಾಯಿತು. ರಾಜಕೀಯದ ಪಟ್ಟುಗಳು ಕ್ಷಿಪ್ರವಾಗಿ ಬದಲಾಗುತ್ತಿರುವಾಗ ಆಸ್ಕರ್ ಮರೆಯಾದದ್ದು ಸಾಂಕೇತಿಕವೂ ಹೌದು.

ಪೋತು ಬಲೆ ಆಸ್ಕರಣ್ಣ! ◻

**ಡಾ. ಪುರುಷೋತ್ತಮ ಬಿಳಿಮಲೆ**

# ಹಸನ್ಮುಖಿ ಸಜ್ಜನ ರಾಜಕಾರಣಿ ಆಸ್ಕರ್ ಫರ್ನಾಂಡೀಸ್

ಬಾಗಿದ ತಲೆ, ಮುಗಿದ ಕೈಗಳಿಂದ ಎಲ್ಲರ ಮನಗೆದ್ದ ಸರಳ ಸಜ್ಜನ ರಾಜಕಾರಣಿ ಆಸ್ಕರ್ ಫರ್ನಾಂಡೀಸ್. ಮನೆಯಲ್ಲಿ ವ್ಯಾಯಾಮ ಮಾಡುವ ಸಮಯದಲ್ಲಿ ಸ್ಮರಣೆ ತಪ್ಪಿ ಬಿದ್ದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೆ ನಿಧನರಾದ ಸುದ್ದಿ ತಿಳಿದು ನಮಗೆಲ್ಲ ದುಃಖವಾಗಿದೆ.

ಸುಮಾರು 80 ವರುಷ ಬಾಳಿ ಬದುಕಿ ಅನೇಕ ಉನ್ನತ ಹುದ್ದೆಗಳನ್ನು ನಿಭಾಯಿಸಿ ಜನೋಪಕಾರಿ ಅನುಭವವುಳ್ಳ ಕೆಲಸ ಮಾಡಿದ್ದಾರೆ. ವಿವಿಧ ಇಲಾಖೆಗಳ ಸಚಿವರಾಗಿ ಪಕ್ಷಾತೀತವಾಗಿ ಎಲ್ಲ ಸಮುದಾಯಗಳಿಗೆ ಆದ್ಯತೆ ನೀಡಿ ಹಗಲು ರಾತ್ರಿ ಎನ್ನದೆ ಸತತ ಪರಿಶ್ರಮದ ಏಕೈಕ ವ್ಯಕ್ತಿ ಎಂದರೆ ತಪ್ಪಾಗಲಾರದು. ಯಾರಿಗೂ ಮನ ನೋಯಿಸದೆ ಹೆಗಲ ಮೇಲೆ ಕೈ ಇಟ್ಟು ಕೇಳುವ ಹಿರಿಯಣ್ಣನಂತಿದ್ದರು. ಅಧಿಕಾರ ಅಂತಸ್ತುಗಳನ್ನು ಅನುಭವಿಸುತ್ತಾ ಕಾಲ ಕಳೆಯದೆ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಅವರ ಮಾತು ಮಾಣಿಕ್ಯ. ಅವರನ್ನು ಜೊತೆ ಅನೇಕ ಸಂದರ್ಭಗಳಲ್ಲಿ ಭೇಟಿ ಮಾಡಿ ಮಾತಾಡಿದ ಸೌಭಾಗ್ಯ ನನ್ನದಾಗಿತ್ತು. ರಾತ್ರಿ ಮೂರು ಗಂಟೆಯವರೆಗೆ ಜನ ಸರತಿಯಲ್ಲಿ ಅವರ ಭೇಟಿಗಾಗಿ ನಿಲ್ಲುತ್ತಿದ್ದರು. ಜನರನ್ನು ಭೇಟಿ ಮಾಡಿ ಅವರ ನೋವಿಗೆ ನೆರವಾಗುತ್ತಿದ್ದರು.

ರಾಜ್ಯಸಭಾ ಸದಸ್ಯರಾಗಿ ದೇಶದ ಸೇವೆ ಸಲ್ಲಿಸುತ್ತಿರುವಾಗಲೇ ಇವರು ಶಿವಾಧೀನರಾಗಿದ್ದು ನಾಡಿಗೆ ಹಾಗೂ ದೇಶಕ್ಕೆ ಅಪಾರ ನಷ್ಟವಾಗಿದೆ. ಇವರು ತಮ್ಮ ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಬಿಟ್ಟು ಅಗಲಿದ್ದಾರೆ. ಮೃತರ ಆತ್ಮಕ್ಕೆ ದೇವರು ಶಾಂತಿಯನ್ನೀಯಲಿ, ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತೇನೆ. ◻

**ವೈಜಿನಾಥ ಬಿರಾದಾರ**

# ಬಾ. ಸಾಮಗರಿಗೆ ಭಾರತರತ್ನ ಡಾ। ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ

ಹೊರನಾಡಿನಲ್ಲಿ ಎಲ್ಲ ಜಾತಿ ವರ್ಗಗಳವರನ್ನು ಸೇರಿಸಿಕೊಂಡು ಕನ್ನಡಾಭಿವೃದ್ಧಿಗಾಗಿ ಅಪ್ರತಿಮ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ ದೆಹಲಿ ಕನ್ನಡಿಗ, ತುಳುವೇರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರಿಗೆ ವಿ.ಕೆ.ಎಂ. ಸಂಸ್ಥೆ ಕೊಡಮಾಡುವ ಈ ಸಾಲಿನ ಪ್ರತಿಷ್ಠಿತ ಭಾರತರತ್ನ ಡಾ। ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ಮಾ. 18ರಂದು ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಾಮಗ ಅವರು ಕರ್ನಾಟಕ ಸಂಸ್ಕೃತಿಗೆ, ಕನ್ನಡಕ್ಕೆ ಇನ್ನೂ ಹೆಚ್ಚಿನ ಗೌರವ, ಪ್ರಚಾರ ದೊರಕಿಸಿ ವಿಶ್ವಮಟ್ಟದಲ್ಲಿ ಅಗ್ರಸ್ಥಾನ ಗಳಿಸಲು ಹೊರನಾಡಿನಲ್ಲಿ ವ್ಯವಸ್ಥಿತವಾಗಿ ಕನ್ನಡ ಕಾರ್ಯಕ್ರಮಗಳನ್ನು ನಡೆಸುವುದು ಹಾಗೂ ಕನ್ನಡ ಕೃತಿಗಳನ್ನು ಬೇರೆ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸುವುದು ಆದ್ಯ ಕರ್ತವ್ಯವಾಗಬೇಕು ಎಂದು ಅಭಿಪ್ರಾಯಪಟ್ಟರು. ಸಮಸ್ತ ಕನ್ನಡಿಗರ ಬೆಂಬಲದಿಂದ ತನಗೆ ದಿಲ್ಲಿಯಲ್ಲಿ 31 ರಾಷ್ಟ್ರೀಯ ಕನ್ನಡ ಸಮ್ಮೇಳನಗಳನ್ನೂ, ಭಾರತದಾದ್ಯಂತ ಪ್ರಮುಖ ನಗರಗಳಲ್ಲಿ 10 ಅಖಿಲ ಭಾರತ ಕನ್ನಡ ಸಾಹಿತ್ಯ–ಸಂಸ್ಕೃತಿ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸುವುದು ಸಾಧ್ಯವಾಯಿತೆಂದ ಸಾಮಗ ಅವರು ಕರ್ನಾಟಕ ಸಂಸ್ಕೃತಿಗೆ ಪ್ರಬಲ ಶಕ್ತಿಯಿರುವುದರಿಂದ ಸಂಸ್ಕೃತಿಯ ಅವನತಿ ಅಸಾಧ್ಯವೆಂದು ವಿಶ್ವಾಸ ವ್ಯಕ್ತಪಡಿಸಿದರು.



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಖ್ಯಾತ ಕವಿ ಸಿದ್ದಲಿಂಗಯ್ಯ ಅವರು ಹೊರನಾಡಿನಲ್ಲಿ ಕನ್ನಡವನ್ನು ಕಟ್ಟಿ ಬೆಳೆಸಿದ ಸಾಮಗರು ಕನ್ನಡ ಕಾರ್ಯಕರ್ತರಿಗೆ ಆದರ್ಶವಾಗಿದ್ದಾರೆ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥ ಸೇವೆಯಿಂದ ಕನ್ನಡ ಬೆಳೆಸುವವರ ಅಗತ್ಯ ಇಂದು ಹೆಚ್ಚಾಗಿದೆ ಎಂದರು.

ರಂಗಕರ್ಮಿ ಗೋಪಾಲಕೃಷ್ಣ ನಾಯರಿ, ಕರ್ನಾಟಕ ಮಹಿಳಾ ಪಡೆ ರಾಜ್ಯಾಧ್ಯಕ್ಷೆ ಲತಾ ಗೌಡ, ಜಾನಪದ ಗಾಯಕ ಗುರುರಾಜ ಹೊಸಕೋಟೆ, ನಟಿ ಕಾಮಿನಿದರನ್, ಜಯ ಕರ್ನಾಟಕ ಬೆಂಗಳೂರು ನಗರಾಧ್ಯಕ್ಷ ಜಗದೀಶ್ ಗೌಡ, ಸಂಸ್ಥೆಯ ಕಾರ್ಯಾಧ್ಯಕ್ಷ ಸಿ.ಎಂ. ವೆಂಕಟೇಶ್ ಉಪಸ್ಥಿತರಿದ್ದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ನಟ, ನಿರ್ದೇಶಕ ಸಿ.ಎಂ.ತಿಮ್ಮಯ್ಯ ಕಾರ್ಯಕ್ರಮ ನಿರ್ವಹಿಸಿದರು. ◻

**ಬಾ. ಸಾಮಗ**

# ಕರ್ನಾಟಕ ಭವನದಲ್ಲಿ 66ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ



ನವದೆಹಲಿಯ ಕರ್ನಾಟಕ ಭವನ-2ರ ಶರಾವತಿಯಲ್ಲಿ ಹಮ್ಮಿಕೊಂಡಿದ್ದ 66ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಭವನದ ನಿವಾಸಿ ಆಯುಕ್ತರೂ ಆದ ಅಮಿತಾ ಪ್ರಸಾದ್ ಅವರು ಭುವನೇಶ್ವರಿ ದೇವಿ ಪೂಜೆ ಮಾಡಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ರಾಜ್ಯೋತ್ಸವದ ಶುಭಾಶಯ ಕೋರಿ ಮಾತನಾಡಿದ ಅವರು ಕರ್ನಾಟಕವು ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಐತಿಹಾಸಿಕವಾಗಿ ಸಂಪದ್ಭರಿತ ರಾಜ್ಯವಾಗಿದೆ. ಕನ್ನಡದ ಜನ ಪ್ರೀತ್ಯಾದರಗಳಿಗೆ ಹೆಸರುವಾಸಿಯಾಗಿದ್ದು, 36 ವರ್ಷಗಳ ಸುದೀರ್ಘ ಕಾರ್ಯ ನಿರ್ವಹಣೆಯಲ್ಲಿ ಸ್ವಯಂವೇದ್ಯ ಸಂಗತಿಯಾಗಿದೆ. ಬೀದರದಿಂದ ಚಾಮರಾಜನಗರದವರೆಗೆ ರಾಜ್ಯದ ಜನರ ಭಾಷೆಯ ಶೈಲಿ, ಉಡುಗೆ-ತೊಡುಗೆ, ಆಚಾರ-ವಿಚಾರದಲ್ಲಿ ವೈವಿಧ್ಯಮಯ ಸೊಗಡು ಹೊಂದಿದೆ ಎಂದರು.

ರಕ್ಷಣಾ ಇಲಾಖೆಯ ನಿರ್ದೇಶಕರಾದ ಅನಂತ ರಾಮ ಅರಳಿ ಅವರು ಮಾತನಾಡಿ, ಕನ್ನಡ ಭಾಷೆ, ಸಂಸ್ಕೃತಿ ಅತ್ಯಂತ ಪುರಾತನ ಹಾಗೂ ಸಮೃದ್ಧವಾಗಿದ್ದು ಕನ್ನಡ ನಾಡಿನಲ್ಲಿ ಜನಿಸಿದ ನಾವೇ ಧನ್ಯರು. ಕನ್ನಡದ ಭಾಷೆಗಾಗಿ ಶ್ರಮಿಸಬೇಕಾಗಿದ್ದು ನಮ್ಮೆಲ್ಲರ ಕರ್ತವ್ಯ ಎಂದರು.

ಕಲಬುರಗಿಯ ಮಾನ್ಯ ಸಂಸದರಾದ ಡಾ. ಉಮೇಶ ಜಾಧವ ಮಾತನಾಡಿ, ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿರುವುದು ಸಂತೋಷ ತಂದಿದೆ. ದೇವರಾಜ್ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಎಂದು ಮರು ನಾಮಕರಣವಾಯಿತು. ಹೊರನಾಡಿನಲ್ಲಿದ್ದುಕೊಂಡು ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮಗಳು ಪೂರಕ ಹಾಗೂ ಪ್ರೇರಕ. ಮುಂದಿನ ಪೀಳಿಗೆಗೆ ಕನ್ನಡದ ಸಂಸ್ಕೃತಿಯ ಕುರಿತು ತಿಳಿಸಿಕೊಡಬೇಕಾಗಿರುವುದು ನಮ್ಮ ಜವಾಬ್ದಾರಿ ಎಂದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತರಾದ ವಿಜಯ್ ರಂಜನ್ ಸಿಂಗ್, ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತ ಎಚ್. ಪ್ರಸನ್ನ, ರಾಷ್ಟ್ರೀಯ ಹೆದ್ದಾರಿ ಮುಖ್ಯ ಇಂಜಿನೀಯರ್ ಎಚ್.ಸಿ.ರಮೇಂದ್ರ ಹಾಗೂ ಕರ್ನಾಟಕ ಭವನದ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ಕೆ.ಎಸ್.ಆರ್.ಪಿ. ಯ ಎಂಟನೇ ಪಡೆಯ ಆರ್ ಎಸ್ ಐ ಲೋಕೇಶ್ ಪಾಟೀಲ್ ಧ್ವಜ ವಂದನೆ ನೀಡಿದರು. ಕಾರ್ಯಕ್ರಮವನ್ನು ಕರ್ನಾಟಕ ಭವನದ ಉಪ ಸಮನ್ವಯಾಧಿಕಾರಿ ಆರ್ ರೇಣುಕುಮಾರ್ ಅವರು ನಿರ್ವಹಿಸಿ, ವಂದನಾರ್ಪಣೆ ಸಲ್ಲಿಸಿದರು. □

**ಅಮರೇಶ**



# ದೆಹಲಿ ಕರ್ನಾಟಕ ಸಂಘದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತ್ಯುತ್ಸವ

ಕಿತ್ತೂರು ರಾಣಿ ಚೆನ್ನಮ್ಮನವರ 243ನೇಯ ಜಯಂತ್ಯುತ್ಸವ ಹಾಗು 198ನೆಯ ವಿಜಯೋತ್ಸವವನ್ನು ಚನ್ನಮ್ಮ ವಿದ್ಯಾವರ್ಧಕ ಸಂಸ್ಥೆ ಉತ್ನಾಳ ಇವರು ದಿನಾಂಕ 23.10.2021ರಂದು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಆಚರಿಸಿದರು.

ಈ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ವಕೀಲರು ಸಿ.ಎಂ. ಅಂಗಡಿಯವರು ಚೆನ್ನಮ್ಮಾಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಸ್ವತಂತ್ರ ಸಂಗ್ರಾಮದ ಬಗ್ಗೆ ಮಾತನಾಡಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಚೆನ್ನಮ್ಮಾಜಿ ಅವರ ಬಗ್ಗೆ ಮಾತನಾಡಿದರು.

ಚೆನ್ನಮ್ಮ ವಿದ್ಯಾವರ್ಧಕ ಸಂಸ್ಥೆ ಉತ್ನಾಳ, ವಿಜಯಪುರ ಸಂಸ್ಥಾಪಕ ಅಧ್ಯಕ್ಷ ಬಸವರಾಜ ನಂ. ಬಾಗೇವಾಡಿ ಹಾಗೂ ಡಿ.ಎಸ್. ಬಸವಗೌಡ್ರ ಮತ್ತು ಕಾರ್ಯದರ್ಶಿ ಸುರೇಖಾ ಬಾಗಲಕೋಟ, ವಿದ್ಯಾರ್ಥಿಗಳೊಂದಿಗೆ ಉಪಸ್ಥಿತರಿದ್ದರು. □

**ಸುರೇಖಾ ಬಾಗಲಕೋಟ**

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ರೂಪಶ್ರೀ ಮತ್ತು ಶ್ರೀ ಎಸ್. ನರಸಿಂಹ ಮೂರ್ತಿ ದಂಪತಿಗಳ ಕಿರಿಯ ಮಗ ಎಸ್. ಕ್ಷಿತಿಜ್ 2020-2021ನೇ ಸಾಲಿನ ವಿಜ್ಞಾನ ವಿಭಾಗದ 12ನೇ ತರಗತಿ ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಶೇಕಡಾ 97ರಷ್ಟು ಅಂಕಗಳಿಸಿ ತೇರ್ಗಡೆ ಹೊಂದಿದ್ದಾನೆ.

ಇದೇ ಸಾಲಿನ ಅಖಿಲ ಭಾರತ ಜಂಟಿ ಪ್ರವೇಶ ಪರೀಕ್ಷೆ (ಮುಖ್ಯ) (JEE Mains)ಯಲ್ಲಿ 98.5 ಶೇಕಡಾವಾರು ಅಂಕ (ಪರ್ಸೆಂಟೈಲ್) ಗಳಿಸಿ ಹತ್ತು ಲಕ್ಷ ವಿದ್ಯಾರ್ಥಿಗಳಲ್ಲಿ 14734 ಸ್ಥಾನ (ರ್‍ಯಾಂಕ್) ಪಡೆದಿದ್ದಾನೆ ಹಾಗೂ ಕರ್ನಾಟಕ ರಾಜ್ಯ ವೃತ್ತಿಪರ ಶಿಕ್ಷಣದ ಪ್ರವೇಶ ಪರೀಕ್ಷೆಯಲ್ಲಿ ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳಲ್ಲಿ 857ನೇ ಸ್ಥಾನ ಪಡೆದಿದ್ದಾನೆ.

ಅಖಿಲ ಭಾರತ ಜಂಟಿ ಪ್ರವೇಶ ಪರೀಕ್ಷೆ (ಮೇಲ್ಮಟ್ಟ) (JEE- advanced) ಯಲ್ಲಿ IITಗಳ ಪ್ರವೇಶ ಪಡೆಯಲು ಅರ್ಹತೆ ಗಳಿಸಿದ್ದಾನೆ.

ದೆಹಲಿ ಕರ್ನಾಟಕ ಸಂಘ ಎಸ್. ಕ್ಷಿತಿಜ್‌ನ ಮುಂದಿನ ಭವಿಷ್ಯಕ್ಕೆ ಶುಭ ಹಾರೈಸುತ್ತಾ ಅವನ ತಂದೆ ತಾಯಿಗಳಿಗೆ ಈ ಮೂಲಕ ಅಭಿನಂದನೆಗಳನ್ನು ತಿಳಿಸುತ್ತದೆ.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಿಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ಧವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Oct-Nov-2021, Vol. No.32, Issue No. 1-2, Price Rs.1/-
RNI Regn. No. 53405/91, DL-SW-1/4016/19-21
Date of Publication : Nov 8th / 9th, Posting Date : 10th / 11th, Total Pages-28, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Chandrashekara N.P




ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದ ನುಡಿನಮನ ಕಾರ್ಯಕ್ರಮದಲ್ಲಿ ಸಮೂಹನೃತ್ಯ ಮತ್ತು ಸುಗಮ ಸಂಗೀತದ ಕಲಾ ತಂಡದೊಂದಿಗೆ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು




ಭಿವಾಡಿ ಕನ್ನಡ ಸಂಘದ ಪದಾಧಿಕಾರಿಗಳು ನೂತನ ಕಾರ್ಯಕಾರಿ ಸಮಿತಿಯನ್ನು ಅಭಿನಂದಿಸಿದ ಸಂದರ್ಭ




ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಪದಾಧಿಕಾರಿಗಳು ನೂತನ ಕಾರ್ಯಕಾರಿ ಸಮಿತಿಯನ್ನು ಅಭಿನಂದಿಸಿದ ಸಂದರ್ಭ